ಅಹರ್ನಿಶಿ

ಕೆ ವಿ ನಾರಾಯಣ

ನುಡಿಗಳ ಅಳಿವು

ಬೇರೆ ದಿಕ್ಕಿನ ನೋಟ

ಪ್ರೊ. ಕೆ.ವಿ. ನಾರಾಯಣ

ಕನ್ನಡ ಅರಿವಿನ ಲೋಕದಲ್ಲಿ ಕೆವಿಎನ್ ಎಂದೇ ಹೆಸರುವಾಸಿಯಾಗಿರುವ ಪ್ರೊ. ಕೆ.ವಿ. ನಾರಾಯಣ ಅವರು ಕನ್ನಡದ ಮಹತ್ವದ ಚಿಂತಕರು. ಇವರ ಚಿಂತನಾಕ್ರಮವನ್ನು ವ್ಯಕ್ತಿನೆಲೆಯಿಂದ ಗುರುತಿಸುವುದಕ್ಕಿಂತ ಸಾಂಸ್ಥಿಕ ನೆಲೆಯಿಂದ ಗುರುತಿಸುವುದೇ ಹೆಚ್ಚು ಸೂಕ್ತವಾದದ್ದು. ಕೆವಿಎನ್ ಅವರ ಕಾರ್ಯಕ್ಷೇತ್ರವು ಮುಖ್ಯವಾಗಿ ಮೂರು ಸಂಸ್ಥೆಗಳೊಂದಿಗೆ ಅಂಟಿಕೊಂಡಿದೆ. ಬೆಂಗಳೂರು ವಿಶ್ವವಿದ್ಯಾಲಯ, ಕನ್ನಡ ವಿಶ್ವವಿದ್ಯಾಲಯ ಹಾಗೂ ಕುವೆಂಪು ಭಾಷಾ ಭಾರತಿ ಪ್ರಾಧಿಕಾರ ಈ ಮೂರು ಸಂಸ್ಥೆಗಳಲ್ಲಿ ಇವರ ವಿದ್ವತ್ ಮತ್ತು ಕ್ರಿಯಾಶೀಲತೆಯ ಪರಿಣಾಮಗಳನ್ನು ನೋಡುತ್ತೇವೆ. ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಇವರ ಕ್ರಿಯಾಶೀಲತೆ ಅಧ್ಯಯನ, ಅಧ್ಯಾಪನ, ವಿಚಾರ ಮಂಥನಗಳ ಮೂಲಕ ಕನ್ನಡ ಸಾಹಿತ್ಯ ಓದಿನ ವಿದ್ಯಾರ್ಥಿಗಳಲ್ಲಿ ಅರಿವಿನ ಪಲ್ಲಟಕ್ಕೆ ಕಾರಣವಾಗಿ, ಸೃಜನಶೀಲ ಮತ್ತು ಸಂವೇದನಾಶೀಲ ವಿದ್ಯಾರ್ಥಿಗಳನ್ನು ರೂಪಿಸುವುದಾಗಿದೆ. ಕನ್ನಡ ವಿಶ್ವವಿದ್ಯಾಲಯಕ್ಕೆ ಬಂದಮೇಲೆ ಇವರ ಇಡೀ ಅನುಭವವು ಸಾಂಸ್ಥಿಕ ಹೊಣೆಗಾರಿಕೆಯ ಸ್ವರೂಪವನ್ನು ಪಡೆದುಕೊಂಡಿತು. ಈ ವಿಶ್ವವಿದ್ಯಾಲಯದ ಬೌದ್ಧಿಕ ಹಾಗೂ ಭೌತಿಕ ಬೆಳವಣಿಗೆಯಲ್ಲಿ ಕೆವಿಎನ್ ಪಾತ್ರ ಅಗಾಧವಾಗಿದೆ. ಕನ್ನಡದ ಜ್ಞಾನಶಿಸ್ತುಗಳನ್ನು ಮರುಕಟ್ಟಿಕೊಳ್ಳುವ, ಸಮೂಹಗಳ ಬದುಕಿಗೂ ಹಾಗೂ ವಿಶ್ವವಿದ್ಯಾಲಯದೊಳಗೆ ವಿಕಾಸಗೊಳ್ಳುವ ಜ್ಞಾನದ ನಡುವಣ ಅಂತರ್ಸಂಬಂಧವನ್ನು ಕಂಡುಕೊಳ್ಳುವ ಬಗೆಗಳನ್ನು ಕೆವಿಎನ್ ತಮ್ಮ ಶೈಕ್ಷಣಿಕ ಹಾಗೂ ಆಡಳಿತಾತ್ಮಕ ಚಟುವಟಿಕೆಗಳ ಮೂಲಕ ನೆಲೆಗೊಳಿಸಿದ್ದಾರೆ.

ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ ಅಧ್ಯಕ್ಷರಾಗಿ ಕೆವಿಎನ್ ಅವರು ಅನುವಾದವೆಂಬ ಕ್ರಿಯೆಯನ್ನು ಕೇವಲ ಎರಡು ನುಡಿಗಳ ನಡುವಿನ ಒಂದು ತರ್ಜುಮೆಯ ಚಟುವಟಿಕೆಯನ್ನಾಗಿ ನೋಡದೆ, ಅದನ್ನೊಂದು ಸಾಂಸ್ಕೃತಿಕ ಗ್ರಹಿಕೆಯಾಗಿ ಹಾಗೂ ಬಹುಶಿಸ್ತೀಯ ಜ್ಞಾನ ಮೀಮಾಂಸೆಯನ್ನಾಗಿ ಅರಿಯುವುದಕ್ಕೆ ಬೇಕಾಗಿರುವ ರಚನಾತ್ಮಕ ಕಾರ್ಯ ಯೋಜನೆಗಳನ್ನು ಹಮ್ಮಿಕೊಂಡರು. ಕನ್ನಡದಂತಹ ನುಡಿಗಳು ಕೇವಲ ಪಡೆಯುವ ನುಡಿಗಳಲ್ಲ ಇವುಗಳ ಮೂಲಕ ಅರಿವನ್ನು ಬೇರೆ ನುಡಿಗಳಿಗೆ ಕೊಡುವ ಕಸುವು ಇರುತ್ತದೆ ಎಂಬುದನ್ನು ಸಾಬೀತುಪಡಿಸಿದ್ದಾರೆ. ಅನುವಾದ ಕ್ರಿಯೆಯಲ್ಲಿ ಕೇವಲ ಸಂಸ್ಕೃತ, ಇಂಗ್ಲಿಶಿನಂತಹ ಯಜಮಾನ್ಯ ನುಡಿಗಳಿಗೆ ಮಾತ್ರ ಮಹತ್ವವನ್ನು ಕೊಡುವ ಧೋರಣೆಯನ್ನು

ಕೆವಿಎನ್ ಅವರು ತಾತ್ವಿಕ ಸಮರ್ಥನೆಗಳ ಮೂಲಕವೇ ಪಲ್ಲಟಗೊಳಿಸಿದ್ದಾರೆ. ಹಾಗಾಗಿ ಕನ್ನಡದ ನೆರೆಯ ನುಡಿಗಳಲ್ಲಿ ವಿಕಾಸಗೊಂಡಿರುವ ವೈಚಾರಿಕ, ತತ್ವಶಾಸ್ತ್ರೀಯ, ಸಾಮಾಜಿಕ ಅರಿವು, ಲಿಂಗಸಂವೇದಿ, ಸಾಂಸ್ಕೃತಿಕ ವಿವೇಕ, ಸ್ರುಜನಶೀಲತೆ, ಚರಿತ್ರೆ, ತಂತ್ರಜ್ಞಾನ ಮೊದಲದ ಕ್ಷೇತ್ರಗಳಿಗೆ ಸಂಬಂಧಿಸಿದ ಯೋಜನೆಗಳನ್ನು ರೂಪಿಸಿ, ಅನುವಾದವನ್ನು ಒಂದು ದಿಟವಾದ ಸಾಮಾಜಿಕ ಕ್ರಿಯೆಯನ್ನಾಗಿ ಕೆವಿಎನ್ ಅವರು ನಿರೂಪಿಸಿದ್ದಾರೆ.

"ತೊಂಡು ಮೇವು" ಎಂಬ ತಲೆಬರಹದಲ್ಲಿ ಇವರ ಈ ವರೆಗಿನ ಬರಹಗಳು ಒಂಬತ್ತು ಸಂಪುಟಗಳಲ್ಲಿ (೨೦೧೦) ಪ್ರಕಟವಾಗಿವೆ. ಸಂಸ್ಕೃತ–ಕನ್ನಡ ಪದಕೋಶ, ಭಾಷೆ (ವಿಶ್ವಕೋಶ), ಕನ್ನಡ ನುಡಿ ಆಕರ ಕೋಶ, ಡ್ರಾವಿಡಿಯನ್ ಎಟಿಮಾಲಜಿಕಲ್ ಡಿಕ್ಷನರಿಯನ್ನು ಕನ್ನಡಕ್ಕೆ ಅನುವಾದಿಸಿದ್ದಾರೆ. ನುಡಿ, ಭಾಷಾಶಾಸ್ತ್ರ, ಸಂಸ್ಕೃತಿ, ನಾಟಕ–ರಂಗಭೂಮಿ ಹಾಗೂ ಸಾಹಿತ್ಯ ವಲಯಗಳಲ್ಲಿ ಕೆವಿಎನ್ ಅಪಾರವಾದ ಕೆಲಸವನ್ನು ಮಾಡಿರುತ್ತಾರೆ. ನುಡಿಯನ್ನು ಕುರಿತ ವಿಚಾರಗಳನ್ನು ಒಳಗೊಂಡ **"ಚಾಮ್‌ಸ್ಕಿ ಜೊತೆಗೆ ಎರಡು ಹೆಜ್ಜೆ"** ಇವರ ಇತ್ತೀಚಿನ ಬಹುಚರ್ಚಿತ ಕೃತಿ.

ಕೆವಿಎನ್ ೧೯೪೮ರಲ್ಲಿ ಮೈಸೂರು ಜಿಲ್ಲೆ ಪಿರಿಯಾಪಟ್ಟಣ ತಾಲೋಕು ಕಂಪಲಾಪುರದಲ್ಲಿ ಹುಟ್ಟಿದ್ದು. ಅಮ್ಮ ಕೆಂಚಮ್ಮ, ಅಪ್ಪ ವೀರಣ್ಣ. ಕೆ.ಆರ್. ಸ್ತ್ರೀವಾದಿ ಚಿಂತಕಿ ಪ್ರೊ. ಎಚ್.ಎಸ್ ಶ್ರೀಮತಿಯವರು ಇವರ ಜೀವನ ಸಂಗಾತಿ. ತಮ್ಮ ಹುಟ್ಟೂರು ಕಂಪಲಾಪುರ, ಪಿರಿಯಾಪಟ್ಟಣ, ಮೈಸೂರು ಹಾಗೂ ಬೆಂಗಳೂರು ಮೊದಲಾದ ಊರುಗಳಲ್ಲಿ ಕೆವಿಎನ್ ಅವರು ಶಿಕ್ಷಣವನ್ನು ಪಡೆದರು. ಸ್ನಾತಕ ಪದವಿಯನ್ನು ವಿಜ್ಞಾನದಲ್ಲಿ ಪಡೆದಿದ್ದರೂ, ಸಾಹಿತ್ಯದ ಒಲವಿನಿಂದ ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಕನ್ನಡ ಎಂ.ಎ ಪದವಿಯನ್ನು ಪಡೆದು ಅದೇ ವಿಶ್ವವಿದ್ಯಾಲಯದಲ್ಲಿ ಜಿ.ಎಸ್.ಎಸ್ ಅವರ ಮಾರ್ಗದರ್ಶನದಲ್ಲಿ ಆನಂದರ್ಧನನ 'ಧ್ವನ್ಯಾಲೋಕ'ವನ್ನು ಅಧ್ಯಯನ ಮಾಡಿ ಪಿಹೆಚ್‌ಡಿ ಪದವಿ ಪಡೆದರು

ನುಡಿಗಳ ಅಳಿವು

ಬೇರೆ ದಿಕ್ಕಿನ ನೋಟ

ಪ್ರೊ. ಕೆ.ವಿ. ನಾರಾಯಣ

ಅಹರ್ನಿಶಿ

ಅಹರ್ನಿಶಿ ಪ್ರಕಾಶನ
ಜ್ಞಾನವಿಹಾರ ಬಡಾವಣೆ,
ಕಂಟ್ರಿಕ್ಲಬ್ ಎದುರು,
ವಿದ್ಯಾನಗರ, ಶಿವಮೊಗ್ಗ-577203.

Nudigala Alivu

Bere Dikkina Nota

- Prof. KV Narayana

Published by : Aharnishi Prakashana, Jnanavihara Extention, In front of Country Club, Vidyanagara, Shimoga, Karnataka. Phone : 9449174662.
email : akshatha.shimoga@gmail.com

ಮೊದಲ ಮುದ್ರಣ	: 2018
ಪುಸ್ತಕದ ಆಕಾರ	: 1/8 ಡೆಮಿ
ಬಳಸಿರುವ ಕಾಗದ	: 70 ಜಿಎಸ್‌ಎಂ, ಎನ್‌ಎಸ್ ಮ್ಯಾಪ್ಲಿಥೊ
ಪುಟಗಳು	: **vi + 82 = 88** ಪುಟಗಳು
ಬೆಲೆ	: **ರೂ. 100/-**
ಹಕ್ಕುಗಳು	: ಲೇಖಕರು
ಮುಖಪುಟ ವಿನ್ಯಾಸ	: ಸೌಮ್ಯ ಕಲ್ಯಾಣಕರ್
ಒಳಪುಟ ವಿನ್ಯಾಸ	: ಮಂಜುನಾಥ.ಎಸ್.

ಪ್ರಕಾಶಕರ ವಿಳಾಸ
ಅಕ್ಷತಾ ಕೆ.
ಅಹರ್ನಿಶಿ ಪ್ರಕಾಶನ
ಜ್ಞಾನವಿಹಾರ ಬಡಾವಣೆ, ಕಂಟ್ರಿಕ್ಲಬ್ ಎದುರು,
ವಿದ್ಯಾನಗರ, ಶಿವಮೊಗ್ಗ-577203
ಸಂಪರ್ಕ : 9449174662 । 8861850722

ಪ್ರಸಾರಣೆ : ವಿಷ್ಣು ಐ.ಆರ್.

ಮುದ್ರಣ :
ರೀಗಲ್ ಪ್ರಿಂಟ್ ಸರ್ವೀಸ್
ಬೆಂಗಳೂರು - 560 026
ಮೊ. : 9964351655

ಶರಣು

ಈ ಬರಹ ಹೆಚ್ಚು ಪ್ರಚಲಿತವಾಗಿರುವ ವಿಷಯವೊಂದನ್ನು ಅಷ್ಟು ಪ್ರಚಲಿತವಿರದ ನೆಲೆಗಳಿಂದ ಪರಿಶೀಲಿಸುವ ಹಾದಿಯಲ್ಲಿ ಸಾಗಿದೆ. ಹೀಗಾಗಿ ವಿಷಯ ಮಂಡಿಸುವಾಗ ತಜ್ಞರನ್ನು ಗಮನದಲ್ಲಿ ಇರಿಸಿಕೊಂಡಿಲ್ಲ. ನುಡಿಗಳ ಅಳಿವನ್ನು ತಮ್ಮ ಕಾಳಜಿಯನ್ನಾಗಿ ಮಾಡಿಕೊಂಡಿರುವ ಎಲ್ಲರನ್ನೂ ಓದುಗರನ್ನಾಗಿ ಒಳಗೊಳ್ಳಲೆಂದು ಇದನ್ನು ಬರೆಯಲಾಗಿದೆ.

ಬರಹದ ಕರಡನ್ನು ಓದಿದ ಹಲವು ಗೆಳೆಯರು ಹೇಳಿದ ತಿದ್ದುಪಡಿಗಳನ್ನು ಅಳವಡಿಸಿಕೊಂಡಿದ್ದೇನೆ. ಈ ಬರಹದ ಒಟ್ಟು ವಿಚಾರದ ಕೆಲವು ನೆಲೆಗಳ ಬಗೆಗೆ ಅವರಲ್ಲಿ ಕೆಲವರು ರಾಗ ಎಳೆದರೂ ನಾನು ನನ್ನ ವಾದವನ್ನೇ ಉಳಿಸಿಕೊಂಡಿದ್ದೇನೆ. ಇದು ನನ್ನ ಹೊಣೆ. ಓದುವವರು ಎತ್ತುವ ತಕರಾರುಗಳು ಚರ್ಚೆಯನ್ನು ಬೇರೆ ದಿಕ್ಕಿಗೆ ಒಯ್ದರೆ ಅದೂ ಸಂತಸದ ಸಂಗತಿಯೇ ಸರಿ.

ಅಹರ್ನಿಶಿಯ ಅಕ್ಷತಾ ಹುಂಚದಕಟ್ಟೆಯವರು ಈ ಹೊತ್ತಗೆಯನ್ನು ಪ್ರೀತಿ ವಿಶ್ವಾಸಗಳಿಂದ ಅಚ್ಚುಮಾಡಿ ಓದುಗರ ಕೈಗೆ ತಲುಪಿಸುವ ಹೊಣೆ ಹೊತ್ತಿದ್ದಾರೆ. ಇದು ಅವರಿಗೆ ವ್ಯವಹಾರ ಎನಿಸಿಲ್ಲ; ಇದನ್ನವರು ಒಂದು ಹೊಣೆ ಎಂಬಂತೆ ನಡೆಸಿಕೊಳ್ಳುತ್ತಿದ್ದಾರೆ. ಅವರಿಗೆ ಶರಣು.

– ಕೆ.ವಿ.ನಾರಾಯಣ

ನುಡಿ ಕಸುವು ಮತ್ತು ನುಡಿಗಳ ನಂಟಿನ ಬಗೆಗೆ ನಾವು ಒಂದು ಸಂಗತಿಯನ್ನು ಮೊದಲು ಒಪ್ಪಿಕೊಳ್ಳಬೇಕು. ಅದೆಂದರೆ ಮಾನವರಲ್ಲಿ ನುಡಿ ಕಸುವು ಎಂಬುದು ಹುಟ್ಟಿನಿಂದ ನೆಲೆಗೊಂಡಿರುತ್ತದೆ. ಅದು ಮಕ್ಕಳಲ್ಲಿ 'ಒಂದು ನುಡಿ'ಯಾಗಿ ಆಕಾರ ಪಡೆಯುತ್ತದೆ. ಒಂದುವೇಳೆ ಈ 'ಒಂದು ನುಡಿ'ಯನ್ನು ಕಳೆದುಕೊಂಡರೂ ವ್ಯಕ್ತಿಗಳಲ್ಲಿ ಅವರ ಹುಟ್ಟಿನಿಂದಲೇ ದತ್ತವಾಗಿ ಬಂದ ಮೂಲ ನುಡಿ ಕಸುವು ಇದ್ದೇ ಇರುತ್ತದೆ. ಈ ನುಡಿ ಕಸುವು ಕಳೆದುಕೊಂಡ ನುಡಿಯ ಬದಲು ಇನ್ನೊಂದು ನುಡಿಯನ್ನು ಪಡೆದುಕೊಳ್ಳಲು ಅವರ ನೆರವಿಗೆ ಒದಗಿ ಬರುತ್ತದೆ.

ನುಡಿಗಳ ಅಳಿವು

ಬೇರೆ ದಿಕ್ಕಿನ ನೋಟ

ಮೊದಲಿಗೆ:

ಇದು ಒಂದು ವಾಗ್ವಾದವನ್ನು ಬಯಸುವ ಗುರಿಯನ್ನುಳ್ಳ ಬರಹ ಎಂಬುದನ್ನು ಮೊದಲಲ್ಲೇ ಹೇಳಿಬಿಡುತ್ತೇನೆ. ನುಡಿಗಳ ಅಳಿವು ಎನ್ನುವುದು ಈಗ ಹೆಚ್ಚಾಗಿ ಚರ್ಚಿತವಾಗುತ್ತಿರುವ ವಿಷಯ. ಕನ್ನಡ ನುಡಿಯನ್ನಾಡುವವರು ಎರಡು ನೆಲೆಗಳಲ್ಲಿ ಈ ಮಾತನ್ನು ಕೇಳುತ್ತಿರುತ್ತಾರೆ.

1. ಕನ್ನಡವೇ ಅಳಿವಿನ ಅಪಾಯವನ್ನು ಎದುರಿಸುತ್ತಿರುವ ನುಡಿ ಎಂದು ಎಚ್ಚರಿಸುವ ನೆಲೆ.

2. ಲೋಕದ ಸಾವಿರಾರು ನುಡಿಗಳು ಅತಿ ವೇಗದಲ್ಲಿ ಅಳಿದು ಹೋಗುತ್ತಿವೆ ಎಂಬ ಆತಂಕದ ಸಂಗತಿಯನ್ನು ವಿವರಿಸುವ ನೆಲೆ.

ಮೊದಲನೆಯ ನೆಲೆಯ ಮಾತುಗಳನ್ನು ಹೇಳುವವರು ಬೇರೆ ನುಡಿಗಳ ಪ್ರಭಾವದಿಂದ ಕನ್ನಡದ ಬಳಕೆ 'ಮಲಿನ'ವಾಗುತ್ತಿದೆ ಮತ್ತು ವಿವಿಧ ವಲಯಗಳಲ್ಲಿ ಕನ್ನಡದ ಬಳಕೆ ಕಡಿಮೆಯಾಗುತ್ತಿದೆ ಎಂದು ವಿವರಿಸುತ್ತಾರೆ. ಜೊತೆಗೆ ಕನ್ನಡ ನಾಡಿನಲ್ಲಿ ಕನ್ನಡ ಮಾತನಾಡುವವರ ಪ್ರಮಾಣ ಕಡಿಮೆಯಾಗುತ್ತಾ ನಡೆದಿದೆ ಎಂಬುದನ್ನು ತೋರಿಸುವ ಅಂಕಿಅಂಶಗಳನ್ನು ಮುಂದಿಡುತ್ತಾರೆ. ಈ ಪರಿಸ್ಥಿತಿ ಹೀಗೇ ಮುಂದುವರೆದರೆ ಕೆಲವೇ ಸಮಯದಲ್ಲಿ ಕನ್ನಡ ಅಳಿದು ಹೋಗುತ್ತದೆ ಎಂದು ಆತಂಕದಿಂದ ನುಡಿಯುವುದನ್ನು ಕಾಣುತ್ತೇವೆ. ಸ್ವಲ್ಪ ಸಮಯ ಅಂದರೆ ಕೆಲವು ವರುಶ, ಕೆಲವು ದಶಕ ಹೀಗೆ ಬೇರೆ ಬೇರೆ ಗುರಿಗಳನ್ನು ನಿಗದಿ ಮಾಡುವುದುಂಟು. ತಮ್ಮ ಈ ದಿಗಿಲು ದಿಟ ಎನ್ನುವುದನ್ನು ನಂಬಿಸಲು ಬಲ್ಲವರ ಮಾತುಗಳನ್ನು, ಅಂತರ್ಜಾಲದ ಮಾಹಿತಿಗಳನ್ನು ನಮ್ಮ ಮುಂದೆ

ಹರಡುತ್ತಾರೆ. ಈ ಅಪಾಯದ ಮುನ್ಸೂಚನೆ ಇರುವುದರಿಂದ ಪಾರಾಗಲು ಬೇಕಾದ ಉಪಾಯಗಳನ್ನು, ಯೋಜನೆಗಳನ್ನು ಮುಂದಿಡುತ್ತಾರೆ. ಈ ಬರಹದಲ್ಲಿ ಈ 'ಅಪಾಯ'ವನ್ನು ಚರ್ಚೆಗೆ ತೆಗೆದುಕೊಳ್ಳುತ್ತಿಲ್ಲ. ಕನ್ನಡ ನುಡಿಯ ಬಗೆಗೆ ಇರುವ ಒಲುವೆಯಿಂದ ಹುಟ್ಟಿದ ಈ ದಿಗಿಲು ದಿಟವಾಗಿ 'ಕಲ್ಪಿತ'ವಾದದ್ದು. ಹೀಗೆ ಹೇಳಲು ಕೆಲವು ಕಾರಣಗಳಿವೆ. ಮೊದಲನೆಯದಾಗಿ ಕನ್ನಡ ಮಾತನಾಡುವ ಸಮುದಾಯ ಎಲ್ಲಿಯವರೆಗೆ ಈ ಲೋಕದಲ್ಲಿ ಇರುವುದೋ ಅಲ್ಲಿಯವರೆಗೆ ಕನ್ನಡ ನುಡಿಯೂ ಇರುತ್ತದೆ. ಆ ಸಮುದಾಯವೇ ಇದ್ದಕ್ಕಿದ್ದಂತೆ ಮಾಯವಾಗುವ ಪ್ರಸಂಗ ಒದಗಿಬರಲಾರದು. ಒಂದು ವೇಳೆ ಹಾಗೇನಾದರೂ ಆದರೆ ಆಗ ಕೇವಲ ಕನ್ನಡ ನುಡಿಯನ್ನು ಆಡುವ ಸಮುದಾಯ ಮಾತ್ರ ಇಲ್ಲವಾಗಲಾರದಷ್ಟೆ. ಇನ್ನು ಕನ್ನಡ ನುಡಿ ಮಲಿನಗೊಳ್ಳುತ್ತಿರುವ ಮಾತು. ನಾವು ಆಡುವ ಕನ್ನಡ ಮತ್ತು ನಾವು ಬರೆಯುವ ಕನ್ನಡ ಇವೆರಡೂ ಮಲಿನಗೊಳ್ಳುತ್ತಿವೆ ಎಂದು ಹಲುಬುವವರು ನಮ್ಮ ಸುತ್ತಲೂ ಇದ್ದಾರೆ. ಅವರು ಬಯಸುವ 'ಶುದ್ಧಕನ್ನಡ' ಬಳಕೆಯಲ್ಲಿ ಇಲ್ಲದಿರುವುದಕ್ಕೆ ಮತ್ತು 'ಮಲಿನಗೊಂಡ ಕನ್ನಡ' ಮೇಲುಗೈ ಪಡೆಯುತ್ತಿರುವುದಕ್ಕೆ ಯಾವ ಕಾರಣಗಳಿವೆ ಎನ್ನುವುದನ್ನು ಅವರು ಗುರುತಿಸುತ್ತಿಲ್ಲ; ಗುರುತಿಸಿ ಹೇಳಿದರೂ ಅದನ್ನು ಒಪ್ಪಲು ಸಿದ್ಧರಿಲ್ಲ. ಏಕೆಂದರೆ ಈ ಆತಂಕದ ಮಾತನ್ನು ಹೇಳುವವರು ನುಡಿಯಲ್ಲಿ ನಡೆಯುವ ಬದಲಾವಣೆಯನ್ನು ಅರಿಯಲು ಹಿಂಜರಿಯುತ್ತಾರೆ. ದಿಟ; ಇನ್ನೊಂದು ಶತಮಾನದ ಬಳಿಕ ಜನ ಮಾತನಾಡುವ ಕನ್ನಡ ನಾವು ಈಗ ಮಾತನಾಡುವ ಕನ್ನಡಕ್ಕಿಂತ ಬೇರೆಯೇ ಆಗಿರುವುದು ಸಾಧ್ಯ. ಆದರೆ ಆಗಲೂ ಅದು ಕನ್ನಡವೇ ಅಲ್ಲವೇ? ನಮ್ಮ 'ಇಂದಿನ' ಕನ್ನಡ ಅವರಿಗೆ 'ಹಿಂದಿನ' ಕನ್ನಡ ಆಗಿಬಿಟ್ಟಿರುತ್ತದೆ. ಹೀಗಲ್ಲದೆ ಕನ್ನಡ ಮಾತನಾಡುವ ಸಮುದಾಯ ಸಾರಾಸಗಟಾಗಿ ತಮ್ಮ ನುಡಿಯನ್ನು ಕಳೆದುಕೊಂಡು ಬೇರೊಂದು ನುಡಿಯನ್ನು ತಮ್ಮ ನುಡಿಯನ್ನಾಗಿ ಪಡೆದುಕೊಳ್ಳುವ ಸಾಧ್ಯತೆಯೂ ಇಲ್ಲ. ಹೀಗಾಗಿ ಕನ್ನಡವು ಅಳಿಯುತ್ತಿರುವ ನುಡಿ ಎಂದು ದಿಗಿಲುಪಡಲು ಕಾರಣಗಳು ಕಾಣುತ್ತಿಲ್ಲ.

ಎರಡನೆಯ ನೆಲೆಯಲ್ಲಿ ಅಂದರೆ ಲೋಕದ ನುಡಿಗಳು ಅತಿವೇಗದಲ್ಲಿ ಅಳಿದು ಹೋಗುತ್ತಿವೆ ಎನ್ನುವ ಆತಂಕದಿಂದ ನುಡಿಗಳ ಅಳಿವಿನ ಅಪಾಯವನ್ನು ನಮ್ಮ ಗಮನಕ್ಕೆ ತರುವವರಲ್ಲಿ ಎರಡು ಬಗೆಯವರಿದ್ದಾರೆ. ಜನಪ್ರಿಯ ಮಾಧ್ಯಮಗಳ ಮಂದಿ ಒಂದು ಕಡೆ ಇದ್ದರೆ, ನುಡಿಯರಿಗರು ಇನ್ನೊಂದು ಕಡೆ ಇದ್ದಾರೆ. ಜನಪ್ರಿಯ ಮಾಧ್ಯಮಗಳಿಗೆ ನುಡಿಗಳ ಅಳಿವು ತುಂಬಾ ಆಕರ್ಷಕ ವಿಷಯ. ಕಳೆದು ಹೋಗುತ್ತಿರುವುದನ್ನು, ಇಲ್ಲವೇ ಹಾಗೆಂದು ಬಿಂಬಿಸಲಾಗುತ್ತಿರುವುದನ್ನು ಕಂಡಾಗಲೆಲ್ಲಾ, ಮುನ್ನುಗ್ಗಿ ಅವುಗಳನ್ನು ಉಳಿಸುವ ಮಾತುಗಳನ್ನು ಉತ್ಸಾಹದಲ್ಲಿ ಮಂಡಿಸುತ್ತಿರುತ್ತಾರೆ. ತೀರಾ ಈಚೆಗೆ ಒಂದು ವಿದೇಶಿ ಪತ್ರಿಕೆ ತನ್ನ ಒಂದು ವರದಿಯಲ್ಲಿ, ಲೋಕದಲ್ಲಿ ಅಳಿಯುತ್ತಿರುವ ಇಪ್ಪತ್ತೈದು ನುಡಿಗಳನ್ನು ಹೆಸರಿಸಿತ್ತು. ಅವುಗಳಲ್ಲಿ ಕೆಲವನ್ನು ಉಳಿಸಲು ತನ್ನ ಸಲಹೆಗಳನ್ನು ಕೂಡಾ ನೀಡಿತ್ತು. ಎಲ್ ಸಾಲ್ವಡೊರ್ (ಉತ್ತರ ಅಮೆರಿಕಾ

ಖಂಡದ ದಕ್ಷಿಣ ಕರಾವಳಿಯಲ್ಲಿರುವ ದೇಶ) ದೇಶದಲ್ಲಿ ಒಂದು ಬುಡಕಟ್ಟಿನ ಜನರು ಬಳಸುವ ನ್ವಾಟ್ ಎಂಬ ನುಡಿಯನ್ನು ಆಡುವವರಲ್ಲಿ ಈಗ ಸುಮಾರು ಇನ್ನೂರು ಜನರು ಮಾತ್ರ ಉಳಿದುಕೊಂಡಿದ್ದಾರೆ. ಈ ನ್ವಾಟ್ ನುಡಿಯನ್ನು ಆ ಬುಡಕಟ್ಟಿನ ಜನರು ತಮ್ಮ ಮಕ್ಕಳಿಗೆ 'ಕಲಿಸದಿದ್ದರೆ' ಅದು ಅಳಿದುಹೋಗುವುದೆಂದು ಪತ್ರಿಕಾ ವರದಿಗಾರರು ತಿಳಿಸುತ್ತಾರೆ. ನುಡಿಯನ್ನು ಉಳಿಸುವ ಹೊಣೆಯನ್ನು ಆ ನುಡಿಯನ್ನಾಡುವ ಬುಡಕಟ್ಟಿಗೇ ವರ್ಗಾಯಿಸುವ ಬಗೆ ಇದು. ಹೀಗೆ ಬುಡಕಟ್ಟಿನ ಒಟ್ಟು ಜೀವನ ಪರಿಸ್ಥಿತಿಯನ್ನು ಮುಂಚೂಣಿಗೆ ತರದೇ ಅದನ್ನು ಹಿನ್ನೆಲೆಯಲ್ಲಿರಿಸಿ ಆ ಬುಡಕಟ್ಟಿನ ನುಡಿಯನ್ನು ಕಾಪಿಡುವ ಬಗೆಯನ್ನು ಮಾತ್ರ ವಿವರಿಸುವುದು ಜನಪ್ರಿಯ ಮಾಧ್ಯಮಗಳ ಮಾದರಿ.

ನುಡಿಯರಿಗರು ನುಡಿಗಳ ಅಳಿವನ್ನು ಕುರಿತು ವಿವರಿಸುತ್ತ ನುಡಿಗಳನ್ನು ಉಳಿಸಿಕೊಳ್ಳಬೇಕಾದ ಕಾರಣಗಳನ್ನು ನಿರೂಪಿಸುತ್ತಾರೆ. ನುಡಿಗಳು ಅಳಿಯದಂತೆ ಮಾಡಲು ಬೇಕಾದ ಕಾರ್ಯಯೋಜನೆಗಳನ್ನು ಸಿದ್ಧಪಡಿಸುತ್ತಿದ್ದಾರೆ. ನುಡಿಗಳನ್ನು ಕಾಪಿಡುವ ಇಂತಹ ಯೋಜನೆಗಳಿಗೆ ಅಪಾರವಾದ ಸಂಪನ್ಮೂಲಗಳನ್ನು ಮೀಸಲಿಡುತ್ತಿರುವುದನ್ನು ನಾವು ನೋಡುತ್ತಿದ್ದೇವೆ. ಜನಪರವಾದ ಯೋಜನೆಗಳೆಂದು ಇವುಗಳನ್ನು ಬಿಂಬಿಸಲಾಗುತ್ತಿದೆ. ನಾನೂ ಈ ಹಿಂದೆ ನುಡಿಗಳ ಅಳಿವನ್ನು ತಡೆಯಬೇಕೆಂಬ ಚಿಂತನೆಯನ್ನು ಒಪ್ಪುವ ಬರವಣಿಗೆಯನ್ನು ಮಾಡಿದ್ದೇನೆ. ಆದರೆ ಈಗ ಈ ಯೋಜನೆಗಳ ಹಿಂದಿನ ತಾತ್ವಿಕತೆಯನ್ನು ಮರು ಪರಿಶೀಲನೆಗೆ ಗುರಿಪಡಿಸುವ ಉದ್ದೇಶದಿಂದ ಈ ಚರ್ಚೆಯನ್ನು ಬೆಳೆಸುವ ಅಗತ್ಯ ಕಂಡುಬಂದಿದೆ. ನುಡಿಗಳು ಮತ್ತು ನುಡಿಗಳನ್ನು ಆಡುವ ಸಮುದಾಯಗಳ ನಂಟನ್ನು ಪದ ಪದಾರ್ಥಗಳ ನಂಟಿಗೆ ಹೋಲಿಸಬಹುದು. ಪದವೆನ್ನುವುದು ಸೂಚಕ. ನುಡಿಗಳೂ ಕೂಡ ಅವುಗಳನ್ನು ಬಳಸುವ ಸಮುದಾಯಗಳ ಸೂಚಕಗಳು. ಹಾಗಾಗಿ ನುಡಿಯನ್ನು, ಅದನ್ನು ಬಳಸುವ ಸಮುದಾಯಗಳ ಒಂದು ಚಹರೆಯನ್ನಾಗಿ ಮಾತ್ರ ಪರಿಗಣಿಸಬೇಕು. ನುಡಿಯನ್ನು ಕಾಪಿಡುವುದು ಎನ್ನುವ ಕೆಲಸ ತನ್ನಿಂದ ತಾನೇ ಸ್ವತಂತ್ರವಾದುದಲ್ಲ. ನುಡಿಯನ್ನಾಡುವವರನ್ನು ಕಾಪಿಡುವುದನ್ನು ಮರೆತು ನುಡಿಯನ್ನಷ್ಟೇ ಕಾಪಿಡುವ ಮಾತು ಯುಕ್ತವಾದುದಲ್ಲ. ಇದು ಈ ಬರಹದ ಹಿಂದಿನ ತಾತ್ವಿಕತೆಯ ಒಂದು ನೆಲೆ.

ಈ ಬರಹದ ಹಿಂದಿನ ಇನ್ನೊಂದು ತಾತ್ವಿಕ ನೆಲೆಯನ್ನು ಮೊದಲಲ್ಲೇ ಸ್ಪಷ್ಟಪಡಿಸಿಕೊಳ್ಳುವ ಅಗತ್ಯವಿದೆ. ನುಡಿ ಕಸುವು ಮತ್ತು ನುಡಿಗಳ ನಂಟಿನ ಬಗೆಗೆ ನಾವು ಒಂದು ಸಂಗತಿಯನ್ನು ಮೊದಲು ಒಪ್ಪಿಕೊಳ್ಳಬೇಕು. ಅದೆಂದರೆ ಮಾನವರಲ್ಲಿ ನುಡಿ ಕಸುವು ಎಂಬುದು ಹುಟ್ಟಿನಿಂದ ನೆಲೆಗೊಂಡಿರುತ್ತದೆ. ಅದು ಮಕ್ಕಳಲ್ಲಿ 'ಒಂದು ನುಡಿ'ಯಾಗಿ ಆಕಾರ ಪಡೆಯುತ್ತದೆ. ಒಂದುವೇಳೆ ಈ 'ಒಂದು ನುಡಿ'ಯನ್ನು ಕಳೆದುಕೊಂಡರೂ ವ್ಯಕ್ತಿಗಳಲ್ಲಿ ಅವರ ಹುಟ್ಟಿನಿಂದಲೇ ದತ್ತವಾಗಿ ಬಂದ ಮೂಲ ನುಡಿ ಕಸುವು ಇದ್ದೇ ಇರುತ್ತದೆ. ಈ ನುಡಿ ಕಸುವು ಕಳೆದುಕೊಂಡ ನುಡಿಯ ಬದಲು ಇನ್ನೊಂದು ನುಡಿಯನ್ನು ಪಡೆದುಕೊಳ್ಳಲು ಅವರ ನೆರವಿಗೆ ಒದಗಿ ಬರುತ್ತದೆ. ಎಷ್ಟೋ

4

ನುಡಿಗಳ ಅಳಿವು

ಬುಡಕಟ್ಟುಗಳಲ್ಲಿ ಹೀಗೆ ಒಂದು ನುಡಿಯನ್ನು ಕಳೆದುಕೊಂಡು ಇನ್ನೊಂದು ನುಡಿಗೆ ಪಲ್ಲಟವಾಗುವ ಕ್ರಿಯೆ ನಡೆಯುತ್ತದೆ. ಮೊದಲಿದ್ದ ನುಡಿ ಈಗ ಆ ಸಮುದಾಯದ ಮಕ್ಕಳಲ್ಲಿ ಇರುವುದಿಲ್ಲವಾದರೂ ಅವರು ಇನ್ನೊಂದು ನುಡಿಯನ್ನು ಪಡೆದುಕೊಂಡಿರುತ್ತಾರೆ. ಅದಕ್ಕೆ ಅವರಲ್ಲಿ ಹುಟ್ಟಿನಿಂದ ಲಭ್ಯವಾಗಿರುವ ನುಡಿ ಕಸುವು ನೆರವಿಗೆ ಬಂದಿರುತ್ತದೆ. ಈ ಪ್ರಕ್ರಿಯೆ ಇಲ್ಲಿ ವಿವರಿಸಿದಷ್ಟು ಸರಳವಾಗಿರುವುದಿಲ್ಲ. ಅಲ್ಲದೆ ಇದು ವ್ಯಕ್ತಿಗತ ನೆಲೆಗೆ ಮಾತ್ರ ಸೀಮಿತವಾಗಿರುವುದಿಲ್ಲ; ಒಂದು ನುಡಿ ಸಮುದಾಯವನ್ನೇ ಒಳಗೊಂಡಿರುತ್ತದೆ. ಅಲ್ಲದೆ ಈ ಪ್ರಕ್ರಿಯೆ ಕೆಲವು ತಲೆಮಾರುಗಳನ್ನು ಆವರಿಸಿಕೊಳ್ಳುತ್ತದೆ. ಈ ಚೌಕಟ್ಟನ್ನು ಒಪ್ಪಿಕೊಂಡು ಪರಿಶೀಲಿಸಿದಾಗ ನುಡಿಗಳ ಅಳಿವನ್ನು ನಾವು ವಿವರಿಸಿಕೊಳ್ಳಬೇಕಾದ ಬಗೆ ಬೇರೆಯೇ ಆಗಬೇಕಾಗುತ್ತದೆ. ಈ ಬರಹದಲ್ಲೇ ಮುಂದೆ ನುಡಿ ಪಲ್ಲಟವನ್ನು ಕುರಿತು ಚರ್ಚಿಸುವ ಹೊತ್ತಿನಲ್ಲಿ ಈ ಅಂಶ ಮುಂಚೂಣಿಗೆ ಬರಲಿದೆ.

ನುಡಿ ಕಾಪಿನ ಯೋಜನೆಗಳ ಒಂದು ಕಾರ್ಯಕ್ರಮದ ಬಗೆಗೆ ಈಚೆಗೆ ಒಂದು ವರದಿಯನ್ನು ಮಾಧ್ಯಮಗಳು ಬಿತ್ತರಿಸಿದವು. ಅದರಂತೆ ಪುಣೆಯ ಒಂದು ವಿಶ್ವವಿದ್ಯಾಲಯದ ಆವರಣದಲ್ಲಿ ಲೋಕದ ನುಡಿಗಳಲ್ಲಿ ಆಯ್ದ ಎಂಬತ್ತು ನುಡಿಗಳನ್ನು ಪ್ರತಿನಿಧಿಸುವ ಎಂಬತ್ತು ಸಸಿಗಳನ್ನು ಅಲ್ಲಿ ನೆಡಲಾಗುತ್ತದಂತೆ. ಆ ಸಸಿಗಳು ಮುಂದೆ ಮರಗಳಾಗಿ ಒಂದು ಭಾಷಾವನ ಮೈದಳೆಯುತ್ತದೆ. ಆ ಭಾಷಾವನಕ್ಕೆ ಬರುವ ಪ್ರವಾಸಿಗರಿಗೆ ಆ ಮರಗಳು ತಾವು ಪ್ರತಿನಿಧಿಸುವ ನುಡಿಗಳ ನೆನಪನ್ನು ತರುತ್ತವೆಂಬುದು ಈ ವನದ ಆಯೋಜಕರ ನಿಲುವು. ಲೋಕದ ನುಡಿಗಳಲ್ಲಿ ಇರುವ ವೈವಿಧ್ಯದ ಪರಿಚಯ ಈ ವನಕ್ಕೆ ಬರುವವರಿಗೆ ಆಗುವುದೆಂಬ ಆಶಯ ಕೂಡ ಅವರಿಗಿದೆ. ಭಾಷಾವನದ ಆಯೋಜಕರ ಸದುದ್ದೇಶವನ್ನು ಒಪ್ಪೋಣ. ಆದರೆ ಹೀಗೆ ಸಂಕೇತಗಳನ್ನು ಮುಂದೆ ಮಾಡುವ ಮೂಲಕ 'ಅಳಿಯುತ್ತಿರುವ ನುಡಿ'ಗಳಿಗೆ ಮತ್ತು 'ಅಳಿದ ನುಡಿ'ಗಳಿಗೆ ಸ್ಮಾರಕಗಳನ್ನು ನಿರ್ಮಿಸಿದಂತೆ ಆಗುತ್ತಿದೆಯಲ್ಲವೇ? ಒಮ್ಮೆ ಆ ನುಡಿಗಳನ್ನಾಡುತ್ತಿದ್ದ ಆದರೆ ಈಗ ಅಳಿದು ಹೋಗಿರುವ ಇಲ್ಲವೇ ಇನ್ನೊಂದು ನುಡಿಗೆ ಪಲ್ಲಟಗೊಂಡಿರುವ ಸಮುದಾಯಗಳ ಬಗೆಗೆ ಈ ಭಾಷಾವನದ ನಿಲುವು ಏನು?

ಇದೇ ಮಾದರಿಯ ಇನ್ನೊಂದು ಉದಾಹರಣೆಯನ್ನು ನೋಡೋಣ. ನಾವು ಜಾನಪದ ಅಧ್ಯಯನದ ಹಲವು ನೆಲೆಗಳಲ್ಲಿ ಈ ಜಾನಪದವನ್ನು ಕಾಪಿಡುವುದೂ ಒಂದು ಗುರಿ ಎಂದು ತಿಳಿದಿದ್ದೇವೆ. ಈ ಜಾನಪದದ ಹಕ್ಕುದಾರರು ಜನಪದರು. ಈ ಜನಪದರನ್ನು ಬಿಟ್ಟು ಕೇವಲ ಜಾನಪದವನ್ನು ಕಾಪಿಡುವ ಕಾರ್ಯವನ್ನು ಪ್ರತಿಪಾದಿಸುವ ಮೂಲಕ ಏನು ಹೇಳುತ್ತಿದ್ದೇವೆ? ಜನಪದರ ಬದುಕು ಮುಖ್ಯ ಧಾರೆಯ ಜೊತೆಗೆ ಹೆಜ್ಜೆ ಹಾಕುತ್ತಾ ಹೋದಂತೆ ಅವರೊಡನೆ ಅವರ ಜಾನಪದವೂ ಮುಂದೆ ಸಾಗುತ್ತದೆ. ಇವೆರಡೂ ಒಟ್ಟೊಟ್ಟಿಗೆ ಸಾಗಬೇಕಾದ ಸಂಗತಿಗಳು. ಹಾಗಿಲ್ಲದೆ ಸೂಚಕಗಳನ್ನು ಮುಂದೆ ಮಾಡುವ ಮತ್ತು ಅವುಗಳನ್ನು ಸೂಚ್ಯಗಳಿಂದ ಬೇರ್ಪಡಿಸುವ ಕಾರ್ಯಯೋಜನೆಗಳ ಅಂತಿಮ ಸಾಧನೆ ಏನಾಗಬಹುದು?

ಹಾಗೆಯೇ ನುಡಿಗಳನ್ನಾಡುವ ಸಮುದಾಯಗಳು ತಮ್ಮ ನುಡಿಗಳನ್ನು ಕಳೆದುಕೊಳ್ಳುವ ಒತ್ತಾಯಕ್ಕೆ, ಅನಿವಾರ್ಯ ಪರಿಸ್ಥಿತಿಗೆ ಒಳಗಾಗುತ್ತಿವೆ ಎನ್ನುವ ಆತಂಕ ದಿಟವಾದುದೇ ಸರಿ. ಇದನ್ನು ನಿವಾರಿಸುವುದು ಹೇಗೆ? ನುಡಿ ಕಾಪಿಡುವ ಯೋಜನೆಗಳು ಈ ಬಿಕ್ಕಟ್ಟನ್ನು ನಿವಾರಿಸಲು ರೂಪಿಸುವ ಯೋಜನೆಗಳ ಹಿಂದಿನ ತಾತ್ವಿಕತೆ ಏನು? ಈ ತಾತ್ವಿಕತೆಯೊಳಗೇ ಕೊರತೆಗಳಿವೆಯೇ? ಈ ತಾತ್ವಿಕತೆ ಒಂದು ಜನಪ್ರಿಯ ನಿಲುವು ಮಾತ್ರವೋ ಅಥವಾ ನಿಡುಗಾಲದ ಚಾರಿತ್ರಿಕ ಹಿನ್ನೆಲೆ ಏನಾದರೂ ಇದೆಯೇ? ಈ ಎಲ್ಲ ಪ್ರಶ್ನೆಗಳನ್ನು ಮೈಮೇಲೆ ಎಳೆದುಕೊಂಡು ಚರ್ಚಿಸುವ ಉದ್ದೇಶ ಈ ಬರಹಕ್ಕಿದೆ.

ಹಿನ್ನೆಲೆ:

ಈ ಹೊತ್ತಿನಲ್ಲಿ ಎಲ್ಲ ಚರ್ಚೆಗಳು ಹೊಸ ಪರಿಭಾಷೆಯಲ್ಲಿ ನಡೆಯಬೇಕಿದೆ. ಈ ಪರಿಭಾಷೆಯನ್ನು ಹುಟ್ಟಿಹಾಕುವ, ಅವುಗಳ ಬಳಕೆಯನ್ನು ನಿರ್ದೇಶಿಸುವ ಮತ್ತು ನಿಯಂತ್ರಿಸುವ ಅಧಿಕಾರ ಕೇಂದ್ರಗಳಿವೆ. ಈ ಅಧಿಕಾರ ಕೇಂದ್ರಗಳು ಚರ್ಚೆಯ ದಿಕ್ಕನ್ನು ಬದಲಿಸಬಲ್ಲವು; ಚರ್ಚೆಗಳು ದುರ್ಬಲಗೊಳ್ಳುವಂತೆ ಮಾಡಬಲ್ಲವು; ತಮಗೆ ಅನುಕೂಲವಾಗುವ ದಿಕ್ಕಿನಲ್ಲಿ ಚರ್ಚೆಗಳು ಬೆಳೆಯುವಂತೆ ಮಾಡಬಲ್ಲವು. ಈಗ ರೂಪುಗೊಂಡಿರುವ, ಬಳಕೆಯಾಗುತ್ತಿರುವ ಪರಿಭಾಷೆಯ ಪದಗಳಿಗೆ ಎರಡು ನೆಲೆಗಳಿರುತ್ತವೆ. ಒಂದು ಕಡೆ ಈ ಪದಗಳು ನಿಯೋಗಿಗಳು (=ಅಧಿಕಾರ ಕೇಂದ್ರಗಳು) ಬಯಸುವ ತಿರುಳನ್ನು ಹೊಂದಿದ್ದರೆ ಇನ್ನೊಂದು ಕಡೆ ಅನುಭೋಗಿಗಳು (= ಜನರು) ನಿರೀಕ್ಷಿಸುವ ತಿರುಳನ್ನು ಹೊಂದಿರುತ್ತವೆ. ಹಕ್ಕು ಎಂಬ ಪದವನ್ನೇ ನೋಡಿ. ನಿಯೋಗಿಗಳು ತಿಳಿಯುವ ಪ್ರಕಾರ ಜನರಿಗೆ ಈ ಹಕ್ಕುಗಳನ್ನು ನೀಡಿದವರು ನಿಯೋಗಿಗಳೇ ಆಗಿದ್ದಾರೆ. ಅಂದರೆ ಜನರಿಗೆ ಹಕ್ಕುಗಳನ್ನು 'ನೀಡಲಾಗಿದೆ'. ಆದರೆ ಜನರ ದೃಷ್ಟಿಯಲ್ಲಿ ಹಕ್ಕುಗಳು ಅವರ ಸ್ವಂತ ಸ್ವತ್ತುಗಳು; ಮತ್ತು ಅವುಗಳನ್ನು ಕಾಪಿಡುವ ಹೊಣೆ ಮಾತ್ರ ನಿಯೋಗಿಗಳಿಗೆ ಸೇರಿರುತ್ತದೆ. ಈ ಎರಡೂ ತಿರುಳುಗಳು ಕ್ರಿಯಾಶೀಲವಾಗುವ ಬಗೆ ಒಂದೇ ಅಲ್ಲ. ಆದರೆ ಈ ವ್ಯತ್ಯಾಸದ ಅರಿವು ಕಳೆದು ಹೋದರೆ ಆಗ ಈ ಪರಿಭಾಷೆಯನ್ನು ಬಳಸಿ ನಡೆಸುವ ಎಲ್ಲ ಚರ್ಚೆಗಳೂ ನಿರುಪಯುಕ್ತವಾಗುತ್ತವೆ.

ಇಂಥ ಚೌಕಟ್ಟಿನಲ್ಲಿ ಮುಂದಿನ ಮಾತುಗಳನ್ನು ಬರೆಯಲಾಗುತ್ತಿದೆ ಎಂಬುದನ್ನು ಮೊದಲು ಗಮನಕ್ಕೆ ತರುತ್ತಿದ್ದೇನೆ. ನುಡಿ(=ಭಾಷೆ)ಯನ್ನು ಮಾನವರ ಕಸುವು (=ಸಾಮರ್ಥ್ಯ) ಎಂದು ಹೇಳುವುದುಂಟು. ಇದು ಒಂದು ವಿವರಣೆಯ ಮಾತು. ಆದರೆ ಈ ಕಸುವಿನ ಉಪಯುಕ್ತತೆಯನ್ನು ಕುರಿತು ಮಾತಾಡುವಾಗ ಕೇವಲ ವಿವರಣೆಯ ನೆಲೆಯಲ್ಲಿ ನಿಲ್ಲಲು ಆಗುವುದಿಲ್ಲ. ಏಕೆಂದರೆ ಯಾವುದೇ ಕಸುವಿನ ವ್ಯಾಖ್ಯೆಯು ಅದು ಯಾವಾಗ ಮತ್ತು ಎಲ್ಲಿ ಮತ್ತು ಯಾರಿಗಾಗಿ ಬಳಕೆಯಾಗುತ್ತದೆ ಎಂಬುದನ್ನು ಅವಲಂಬಿಸಿರುತ್ತದೆ. ದುಡಿಮೆ ಎಂಬ ಕಸುವನ್ನೇ ಉದಾಹರಣೆಯನ್ನಾಗಿ ತೆಗೆದುಕೊಳ್ಳೋಣ. ದುಡಿಮೆಯು ದುಡಿಯುತ್ತಿರುವವರಿಗೆ ಅವರ ಕಸುವಿನ

ಅಭಿವ್ಯಕ್ತಿಯಾಗಿ ಕಾಣುತ್ತದೆ. ದುಡಿಮೆಯ ಫಲಿತ ಯಾರಿಗೆ ದೊರಕುತ್ತದೆ ಎಂಬುದನ್ನು ಪರಿಗಣಿಸಿದಾಗ ದುಡಿಮೆಯ ವ್ಯಾಖ್ಯೆ ಕೂಡ ಬದಲಾಗುತ್ತದೆ. ದುಡಿಯುವವರಿಗೆ ಅವರ ದುಡಿಮೆಯ ಫಲಿತ ದೊರಕುವುದೋ ಇಲ್ಲವೇ ಅದು ಬೇರೆಯವರ ಪಾಲಾಗುವುದೋ ಎಂಬುದನ್ನು ಗಮನಿಸದಿದ್ದರೆ ದುಡಿಮೆ ಎಂಬುದನ್ನು ಕೇವಲ ಮನುಷ್ಯರ ಕಸುವು ಎಂಬ ವಿವರಣೆಗೇ ಕಟ್ಟುಬಿದ್ದಿರುತ್ತೇವೆ. ಈ ಮಾತು ನುಡಿ ಎನ್ನುವ ಕಸುವಿಗೂ ಬೇರೆ ಬೇರೆ ನೆಲೆಯಲ್ಲಿ ಅನ್ವಯಿಸುತ್ತದೆ.

ನುಡಿ ಎನ್ನುವುದು ವ್ಯಕ್ತಿಯ ಕಸುವೂ ಹೌದು; ಆ ನುಡಿಯನ್ನಾಡುವ ಸಮುದಾಯದ ಕಸುವೂ ಹೌದು.ಆ ಕಸುವು ವ್ಯಕ್ತಿಗಾಗಲೀ, ಆ ನುಡಿ ಸಮುದಾಯಕ್ಕಾಗಲೀ ಏಕೆ ಬೇಕಿದೆ ಎಂಬ ಪ್ರಶ್ನೆಯನ್ನು ಸದ್ಯ ಬದಿಗಿಡೋಣ. ಆದರೆ ಕಸುವು ಯಾರಲ್ಲಿರುತ್ತದೆಯೋ ಅವರು ಮಾತ್ರವಲ್ಲದೆ ಹೊರಗಿನ ಅಧಿಕಾರ ಶಕ್ತಿಗಳು ಅದನ್ನು ನಿಯಂತ್ರಿಸುವ ಪ್ರಸಂಗ ಒದಗಿದಾಗ ನಾವು ನುಡಿಯನ್ನು ಕುರಿತು ಚಿಂತಿಸುವ ಬಗೆಯನ್ನು ಬದಲಿಸಿಕೊಳ್ಳಬೇಕಾಗುತ್ತದೆ. ಅಥವಾ ನಮ್ಮ ಚರ್ಚೆಗೆ ಹೊಸ ದಿಕ್ಕುಗಳನ್ನು ನೀಡಬೇಕಾಗುತ್ತದೆ. ಈ ವೈಚಾರಿಕ ಭಿತ್ತಿಯನ್ನಿರಿಸಿಕೊಂಡು ಮುಂದಿನ ಮಾತುಗಳನ್ನು ಬರೆಯಲಾಗಿದೆ.

ನುಡಿಗಳ ಅಳಿವಿನ ಬಗೆಗೆ ಏಕೆ ಇಷ್ಟು ಆತಂಕ?

ನುಡಿಗಳ ಅಳಿವನ್ನು ಕುರಿತಂತೆ ನುಡಿಯರಿಗರು ತಮ್ಮ ವಿಚಾರಗಳನ್ನು ಮಂಡಿಸುತ್ತಿದ್ದಾರೆ. ನುಡಿಗಳು ಏಕೆ ಅಳಿಯುತ್ತವೆ, ಯಾವಾಗ ಅಳಿಯುತ್ತವೆ ಮತ್ತು ಹೇಗೆ ಅಳಿಯುತ್ತವೆ ಎಂಬ ನೆಲೆಗಳನ್ನು ವಿವರಿಸಲು ತೊಡಗಿದ್ದಾರೆ. ನುಡಿಗಳು ಅಳಿಯುವುದು ಎಂದರೇನು? ಆ ನುಡಿಗಳನ್ನಾಡುವ ಸಮುದಾಯದ ಎಲ್ಲ ಸದಸ್ಯರೂ ಯಾವುದೋ ಕಾರಣದಿಂದ ನಾಶವಾದಾಗ ಮತ್ತು ಆ ನುಡಿಯನ್ನು ಎರಡನೆಯ ನುಡಿಯನ್ನಾಗಿ ಮತ್ತೆ ಯಾವುದೇ ಸಮುದಾಯ ಬಳಸದೇ ಇದ್ದಾಗ ಆ ನುಡಿ ಅಳಿಯಿತು ಎನ್ನುತ್ತೇವೆ. ಹಾಗಲ್ಲದೆ ಒಂದು ನುಡಿ ಸಮುದಾಯದ ಎಲ್ಲ ಸದಸ್ಯರೂ ಗೊತ್ತಾದ ಕಾಲಾವಧಿಯಲ್ಲಿ, ಹೊರಗಿನ ಕಾರಣಗಳಿಂದಾಗಿ ತಮ್ಮ ನುಡಿಯನ್ನು ಬಿಟ್ಟುಕೊಟ್ಟು ಬೇರೆ ಒಂದು ನುಡಿಯನ್ನು ತಮ್ಮ ನುಡಿಯನ್ನಾಗಿ ಮಾಡಿಕೊಂಡರೆ ಆಗಲೂ ಆ ನುಡಿ ಅಳಿಯಿತು ಎನ್ನುತ್ತೇವೆ. ಇಲ್ಲಿ ಒಂದು ಶರತ್ತಿದೆ. ಆ ಸಮುದಾಯದ ಎಲ್ಲ ಸದಸ್ಯರೂ ತಮ್ಮ ಮೊದಲಿನ ನುಡಿಯನ್ನು ಯಾವುದೇ ಬಳಕೆಯ ವಲಯದಲ್ಲೂ ಬಳಸುತ್ತಿರಬಾರದು. ಅಲ್ಲದೆ ಆ ನುಡಿಯನ್ನಾಡುವ ಜನರು ಜಗತ್ತಿನ ಬೇರೆಲ್ಲಿಯೂ ಇರಬಾರದು. ಆಗಲೂ ನುಡಿಯೊಂದು ಅಳಿಯಿತು ಎನ್ನಬಹುದು.

ನುಡಿಗಳು ಅಳಿಯುವುದು ಲಾಗಾಯ್ತಿನಿಂದಲೂ ನಡೆಯುತ್ತಾ ಬಂದಿದೆಯಾದರೂ ಕಳೆದ ಕೆಲವು ದಶಕಗಳಲ್ಲಿ ಈ ಅಳಿವಿನ ವೇಗ ಮತ್ತು ತೀವ್ರತೆ ಹೆಚ್ಚಾಗಿರುವುದನ್ನು ಗುರುತಿಸಲಾಗಿದೆ. ಈ ಶತಮಾನದ ಕೊನೆಯ ವೇಳೆಗೆ ಈಗ ಜನರಾಡುತ್ತಿರುವ

7

ನುಡಿಗಳ ಅಳಿವು

ಬಹುಪಾಲು ನುಡಿಗಳು ಭೂಮಂಡಲದಿಂದ ಮಾಯವಾಗಿರುತ್ತವೆ ಎನ್ನುವ ಅಂಕಿ ಅಂಶಗಳನ್ನು ಒದಗಿಸಲಾಗುತ್ತಿದೆ. –ಅಂದಾಜು ಈಗ ಏಳು ಸಾವಿರ ನುಡಿಗಳು ಲೋಕದಲ್ಲಿ ಇವೆಯೆಂದೂ ಇವುಗಳಲ್ಲಿ ಸುಮಾರು ಅರ್ಧದಷ್ಟು ನುಡಿಗಳು ಈ ಶತಮಾನದ ಕೊನೆಗೆ ಇಲ್ಲವಾಗುತ್ತವೆಂದು ಯುನೆಸ್ಕೋದ 2011ರ ವರದಿ ತಿಳಿಸುತ್ತದೆ. ಒಂದು ನುಡಿ ಸಮುದಾಯದಲ್ಲಿ ಹೊಸ ತಲೆಮಾರಿನವರು ತಮ್ಮ ಹಿರಿಯರು ಬಳಸುತ್ತಿರುವ ನುಡಿಯನ್ನು ಬಳಸದಿರುವುದು; ಆ ಸಮುದಾಯದ ನುಡಿಯ ಬಳಕೆಯ ವಲಯಗಳ ಸಂಖ್ಯೆ ಕುಗ್ಗುತ್ತಿರುವುದು; ನುಡಿಯನ್ನು ಬಳಸುವವರ ಸಂಖ್ಯೆ ಬೇರೆ ಬೇರೆ ಕಾರಣಗಳಿಂದಾಗಿ ನಿರಂತರವಾಗಿ ಕುಗ್ಗುತ್ತಾ ಹೋಗುವುದು ಇವೇ ಮುಂತಾದ ಸಂಗತಿಗಳನ್ನು ಗಮನಿಸಿ ನುಡಿಗಳ ಅಳಿವಿನ ಹಂತಗಳನ್ನು ಗುರುತಿಸಲಾಗುತ್ತದೆ.

ನುಡಿಗಳು ಅಳಿಯದಂತೆ ಮಾಡಬೇಕೆಂಬುದು ನುಡಿಯರಿಗರ ಬಯಕೆ. ಯುನೆಸ್ಕೋ ಸಂಸ್ಥೆ ಮತ್ತು ಕೆಲವು ಜನಸ್ನೇಹಿ ಸಂಘಟನೆಗಳು ನುಡಿಗಳ ಅಳಿವನ್ನು ತಡೆಯಲು ಯೋಜನೆಗಳನ್ನು ರೂಪಿಸಿ ಜಾರಿಗೊಳಿಸುತ್ತಿವೆ. ತೀವ್ರಗತಿಯಲ್ಲಿ ಹೀಗೆ ನುಡಿಗಳು ಅಳಿಯುತ್ತಾ ಹೋದರೆ ಆಗುವ ಅಪಾಯಗಳನ್ನು ನಾಗರಿಕ ಜಗತ್ತಿಗೆ ತಿಳಿಯ ಹೇಳಲಾಗುತ್ತಿದೆ. ಇದೊಂದು ಶೈಕ್ಷಣಿಕ ಮತ್ತು ಸಾಮಾಜಿಕ ಆಸಕ್ತಿಯ ವಿಷಯವಾಗಿರುವುದರ ಜೊತೆಗೆ ಜನಪ್ರಿಯ ಮಾಧ್ಯಮಗಳಿಗೂ ತನ್ನ ವ್ಯಾಪ್ತಿಯನ್ನು ಹೆಚ್ಚಿಸಿಕೊಂಡಿದೆ. ಮತ್ತೆ ಮತ್ತೆ ಸಮೂಹ ಮಾಧ್ಯಮಗಳು ನುಡಿಗಳ ಅಳಿವನ್ನು ಕುರಿತ ವರದಿಗಳನ್ನು, ಅಳಿವನ್ನು ತಡೆಯಲು ನಡೆಯುತ್ತಿರುವ ಕಾರ್ಯ ಯೋಜನೆಗಳನ್ನು ವರದಿ ಮಾಡುತ್ತಲೇ ಇರುತ್ತವೆ. ಸಹಜವಾಗಿಯೇ 'ಒಪ್ಪಿತ ಮಾದರಿ'ಗಳನ್ನೇ ಜನಪ್ರಿಯ ಮಾಧ್ಯಮಗಳು ಅವಲಂಬಿಸುವುದರಿಂದ ನುಡಿಗಳ ಅಳಿವನ್ನು ಕುರಿತಂತೆ ನಡೆಯುವ ಪರ್ಯಾಯ ಚಿಂತನೆಗಳು ಮುಂಚೂಣಿಗೆ ಬರುವುದಿಲ್ಲ.

ಜನಪ್ರಿಯ ಮಾಧ್ಯಮಗಳು ಮಾತ್ರವಲ್ಲದೆ ನುಡಿಗಳ ಬಗೆಗೆ ಚಿಂತಿಸುವವರೂ ಕೂಡಯಾವ ಬಗೆಯ ನುಡಿಗಳ ಬಗೆಗೆ ಹೆಚ್ಚು ಆತಂಕಿತರಾಗಿದ್ದಾರೆ ಎಂಬುದನ್ನು ಗಮನಿಸಿ. ಈ ನುಡಿಗಳನ್ನು ಅಪರೂಪದ (ಎಕ್ಸಾಟಿಕ್) ಮಾದರಿಗಳೆಂದು ತಿಳಿದಿರುವುದೇ ಹೆಚ್ಚು. ಅಲ್ಲದೆ ನಾಗರಿಕ ಸಮಾಜದಿಂದ ಹೊರಗಿರುವ ನುಡಿಗಳೇ ಅವರ ಆಸಕ್ತಿಯ ವಲಯದಲ್ಲಿವೆ. ಅಪರೂಪದ ಜೀವಿ ಮಾದರಿಯೊಂದನ್ನು ಕುರಿತು ತೋರುವ ಆಸಕ್ತಿಯನ್ನೇ ಅಪರೂಪದ ನುಡಿಯ ಬಗೆಗೂ ತೋರಲಾಗುತ್ತದೆ. ಈ ಆಸಕ್ತಿ ಅಸಹಜವಾದುದೇನಲ್ಲ. ಆದರೆ ಇಲ್ಲಿ ಒಂದು ವ್ಯತ್ಯಾಸವನ್ನು ಗುರುತಿಸುವುದು ಅಗತ್ಯ. ಎಲ್ಲೋ ಈವರೆಗೆ ಕಾಣಸಿಗದಿದ್ದ ಕಪ್ಪೆಯ ಬಗೆಯೊಂದು ಕಂಡಿತೆಂದೋ, ಸರೀಸೃಪದ ಹೊಸ ಬಗೆಯೊಂದು ಎಲ್ಲೋ ದಟ್ಟ ಕಾಡಿನಲ್ಲಿ ಕಂಡಿತೆಂದೋ ವರದಿಗಳು ಪ್ರಕಟವಾಗುತ್ತಿರುತ್ತವೆ. ಅಂತಹ ಮಾದರಿಗಳು ಜೀವಿಗಳ ಮಾದರಿಯ ಅಧ್ಯಯನಗಳಲ್ಲಿ ತೊಡಗಿರುವವರಿಗೆ ಆಸಕ್ತಿಯ ವಿಷಯ. ತಾವು ಈವರೆಗೆ ರೂಪಿಸಿಕೊಂಡಿರುವ ಜೀವಿಗಳ ವಿಭಜನೆಯ ಮಾದರಿಯನ್ನು ಈ ಹೊಸದಾಗಿ ಪತ್ತೆಯಾದ ಜೀವಿ ಬದಲಿಸಬಹುದೇ ಇಲ್ಲವೇ ಆ ಜೀವಿ ವರ್ಗದ ಚಹರೆಗಳನ್ನು ಈವರೆಗೆ

ವಿವರಿಸಿಕೊಳ್ಳುತ್ತಿರುವ ಚೌಕಟ್ಟಿನಲ್ಲಿ ಏನಾದರೂ ಬದಲಾವಣೆಗಳನ್ನು ಮಾಡಿಕೊಳ್ಳಬೇಕಾಗಬಹುದೇ ಎಂಬ ಪ್ರಶ್ನೆಗಳನ್ನು ಆ ವಿಜ್ಞಾನಿಗಳು ಹಾಕಿಕೊಳ್ಳುತ್ತಾರೆ. ಆದರೆ ಇದೇ ಮಾತನ್ನು 'ಅಪರೂಪ'ವೆಂದು ತಿಳಿದ ನುಡಿಗಳ ಬಗೆಗೆ ಹೇಳಲಾಗುವುದಿಲ್ಲ.

ನುಡಿಯೊಂದು ಅಳಿದಾಗ ಜನಪ್ರಿಯ ಮಾಧ್ಯಮಗಳು ಜಗತ್ತಿನ ಅತ್ಯಂತ ಪ್ರಾಚೀನ ನುಡಿಯೊಂದು ಅಳಿಯಿತೆಂದು ಬಣ್ಣಿಸುವುದನ್ನು ನೋಡುತ್ತೇವೆ. ಹಾಗೆ ನೋಡಿದರೆ ಈಗ ಮಾನವರು ಆಡುತ್ತಿರುವ ಎಲ್ಲ ನುಡಿಗಳೂ ಒಂದೇ ಬಗೆಯ ಪ್ರಾಚೀನತೆಯನ್ನು ಹೊಂದಿವೆ. ಕೆಲವು ನುಡಿಗಳು ಹೆಚ್ಚು ಬದಲಾಗದೇ ಉಳಿದುಕೊಂಡಿರುತ್ತವೆ; ಮತ್ತೆ ಕೆಲವು ನುಡಿಗಳು ಬದಲಾವಣೆಗಳಿಗೆ ಒಳಗಾಗಿ ಮೊದಲಿನ ಚಹರೆಯನ್ನು ಗುರುತಿಸಲಾಗದ ಸ್ಥಿತಿಯನ್ನು ತಲುಪಿರುತ್ತವೆ. ನುಡಿಗಳು ಬದಲಾಗುವುದಕ್ಕೆ, ಹಾಗೆಯೇ ಬದಲಾಗದೇ ಇರುವುದಕ್ಕೆ ಆಯಾ ನುಡಿಗಳ ಲಕ್ಷಣಗಳು ಕಾರಣವಲ್ಲ. ಸಾಮಾಜಿಕವಾದ ಎಷ್ಟೋ ಸಂಗತಿಗಳು ಇಲ್ಲಿ ಮುಖ್ಯವಾಗುತ್ತದೆ. ಹಾಗಾಗಿ 'ಅಪರೂಪ' ಎನಿಸಿದ ನುಡಿಗಳು 'ಅಪರೂಪ' ಎನಿಸಿದ ಜೀವಿಗಳಂತೆ ಅಲ್ಲ.

ನುಡಿಯರಿಗರು ನುಡಿಗಳ ಅಳಿವಿನ ಬಗೆಗೆ ಚಿಂತಿತರಾಗುವುದಕ್ಕೆ ಹಲವು ಕಾರಣಗಳಿವೆ. ಅವೆಲ್ಲವನ್ನೂ ಇಲ್ಲಿ ವಿವರಿಸಲಾಗುವುದಿಲ್ಲ. ಅವುಗಳಲ್ಲಿ ಕೆಲವನ್ನು ನೋಡೋಣ.

1. ಮಾನವರ ನುಡಿಗಳ ರಚನೆಯಲ್ಲಿ ಹಲವು ವೈವಿಧ್ಯಗಳಿವೆ. ಒಂದು ನುಡಿಯ ರಚನೆಯಂತೆ ಇನ್ನೊಂದು ಇರುವುದಿಲ್ಲ. ನುಡಿಗಳ ರಚನೆಯಲ್ಲಿ ಇರುವ ವೈವಿಧ್ಯಗಳನ್ನು ಅರಿಯುವುದು ನುಡಿಯರಿಗರಿಗೆ ಅಗತ್ಯ. ನುಡಿಯೊಂದು ಅಳಿದರೆ ಅದರ ರಚನೆಯ ವೈಶಿಷ್ಟ್ಯಗಳನ್ನು ಅರಿಯಲು ಇರುವ ಅವಕಾಶ ಕೈ ತಪ್ಪಿ ಹೋಗುತ್ತದೆ. ಹೀಗಾಗಿ ಮಾನವರು ಆಡುತ್ತಿದ್ದ, ಮಾನವರಲ್ಲಿ ನೆಲೆಗೊಂಡಿದ್ದ ನುಡಿಗಳ ಕೆಲವು ಮಾದರಿಗಳು ನಮ್ಮ ತಿಳಿವಿಗೆ ಬಾರದೆಯೇ ಹೋಗುತ್ತವೆ. ಹಾಗಾಗಿ ನುಡಿಗಳು ಅಳಿಯದಂತೆ ನೋಡಿಕೊಳ್ಳಬೇಕು.

2. ನುಡಿಗಳು ಅಳಿದರೆ ಕೇವಲ ನುಡಿಗಳಷ್ಟೇ ಅಳಿಯುವುದಿಲ್ಲ. ಅಳಿದ ನುಡಿಯೊಡನೆ

ಅ) ಒಂದು ವಿಶಿಷ್ಟ ಲೋಕ ದೃಷ್ಟಿಯೂ ಅಳಿಯುತ್ತದೆ;

ಆ) ಆ ನುಡಿಗಳಲ್ಲಿ ಇರುವ ಅಪಾರವಾದ ಸಾಂಸ್ಕೃತಿಕ ನೆನಪುಗಳೂ ಅಳಿಯುತ್ತವೆ; ಮತ್ತು

ಇ) ಆ ನುಡಿಯನ್ನಾಡುತ್ತಿದ್ದ ಜನರು ಹೊಂದಿದ್ದ ತಿಳಿವಳಿಕೆಯೂ ಅಳಿಯುತ್ತದೆ.

3. ಪರಿಸರ ಸಮತೋಲನದ ಬಗೆಗೆ ಚಿಂತಿಸುವವರು ಜೀವ ವೈವಿಧ್ಯ ಮತ್ತು ನುಡಿ ವೈವಿಧ್ಯಗಳಿಗೂ ನಂಟು ಇದೆಯೆಂದು ವಾದಿಸುತ್ತಾರೆ. ತಮ್ಮ ವಾದಕ್ಕೆ ಪೂರಕವಾದ ಮಾಹಿತಿಗಳನ್ನು ಮಂಡಿಸುತ್ತಾರೆ. ಜಗತ್ತಿನಲ್ಲಿ ಅಪಾರ ಜೀವ ವೈವಿಧ್ಯ ಇನ್ನೂ ಉಳಿದಿರುವ ಭೂ ಪ್ರದೇಶಗಳಲ್ಲೇ ಅತ್ಯಂತ ಹೆಚ್ಚು ಸಂಖ್ಯೆಯ ನುಡಿ ಸಮುದಾಯಗಳಿವೆ. ಅಂದರೆ ಬಹು ಜನರು ಆಡುವ ನುಡಿಗಳ ಸಂಖ್ಯೆ ಕಡಿಮೆ. ಆದರೆ ಅವು ಭೌಗೋಲಿಕವಾಗಿ

ವ್ಯಾಪಕ ಪ್ರದೇಶಗಳಲ್ಲಿ ಬಳಕೆಯಾಗುತ್ತಿವೆ. ಆ ಪ್ರದೇಶಗಳಲ್ಲಿ ಜೀವ ವೈವಿಧ್ಯ ಕಡಿಮೆ. ಆದರೆ ಕೇವಲ ಕೆಲವೇ ಜನರಾಡುವ ಭಾಷೆಗಳ ಸಂಖ್ಯೆ ಅಪಾರವಾದುದು. ಆ ನುಡಿಗಳನ್ನಾಡುವ ಜನ ಸಮುದಾಯಗಳು ಭೌಗೋಳಿಕವಾಗಿ ಸೀಮಿತ ವ್ಯಾಪ್ತಿಯ ಪ್ರದೇಶಗಳಲ್ಲಿ ಇದ್ದಾರೆ. ಆದರೆ ಆ ಪ್ರದೇಶಗಳು ಅಪಾರವಾದ ಜೀವ ವೈವಿಧ್ಯವನ್ನು ಹೊಂದಿವೆ. ಇದನ್ನೊಂದು ಚಿತ್ರದ ಮೂಲಕ ಅರಿಯಲು ಯತ್ನಿಸಬಹುದು.

ನುಡಿಗಳ ಸಂಖ್ಯೆ ಕಡಿಮೆ – ನುಡಿಗಳ ಸಂಖ್ಯೆ ಹೆಚ್ಚು

ವೈವಿಧ್ಯ ಅತಿ ಕಡಿಮೆ – ವೈವಿಧ್ಯ ಅತಿ ಹೆಚ್ಚು

ಜೀವ ವೈವಿಧ್ಯ ಕಡಿಮೆ – ಜೀವ ವೈವಿಧ್ಯ ಹೆಚ್ಚು

ಹಾಗಾಗಿ ಜೀವ ವೈವಿಧ್ಯವನ್ನು ಕಾಯ್ದುಕೊಳ್ಳುವ ನಿಟ್ಟಿನಲ್ಲಿ ಹೆಜ್ಜೆ ಇರಿಸುವವರು ನುಡಿಗಳು ಅಳಿಯದಂತೆ ನೋಡಿಕೊಂಡು ಆ ವಲಯದ ವೈವಿಧ್ಯವನ್ನೂ ಕಾಯ್ದುಕೊಳ್ಳಬೇಕೆಂದು ಹೇಳುತ್ತಾರೆ.

ಮೊದಲು ಈ ಮೂರನೆಯ ಕಾರಣವನ್ನು ವಿವರವಾಗಿ ಚರ್ಚಿಸೋಣ. ಜೀವ ವೈವಿಧ್ಯ ಮತ್ತು ನುಡಿ ವೈವಿಧ್ಯಗಳ ನಡುವೆ ಸಹಬಾಳ್ವೆ ಇದೆ ಎಂದ ಮಾತ್ರಕ್ಕೆ ಅವೆರಡರ ನಡುವೆ ಪರಸ್ಪರ ಅವಲಂಬನೆಯ ನಂಟು ಇದೆಯೆಂದು ವಾದಿಸಲು ಬರುವುದಿಲ್ಲ. ಅಂದರೆ ಒಂದರ ಗೈರು ಹಾಜರಿ ಇನ್ನೊಂದರ ಗೈರು ಹಾಜರಿಗೆ ಕಾರಣವಾಗುತ್ತದೆ ಎಂದು ಹೇಳಲು ಪುರಾವೆಗಳಿಲ್ಲ. ಅಥವಾ ಜೀವ ವೈವಿಧ್ಯವನ್ನು ಕಾಯ್ದುಕೊಳ್ಳಬೇಕು ಎನ್ನುವುದಕ್ಕೆ ಕೊಡುವ ಕಾರಣಗಳನ್ನೇ ನುಡಿ ವೈವಿಧ್ಯವನ್ನು ಕಾಯ್ದುಕೊಳ್ಳಲು ಮುಂದುಮಾಡಲು ಆಗದು. ಜೀವ ವೈವಿಧ್ಯಕ್ಕೆ ಇರುವ ಕಾಲದ ವ್ಯಾಪ್ತಿ ಮತ್ತು ಕಾರಣ ವಿನ್ಯಾಸಗಳು ನುಡಿ ವೈವಿಧ್ಯಕ್ಕೂ ಇವೆ ಎನ್ನಲಾಗದು. ಜೀವ ವೈವಿಧ್ಯವಿರುವ ಕಡೆಗಳಲ್ಲಿ ಕಾಣಸಿಗುವ ಎಷ್ಟೋ ಸಸ್ಯಗಳಿಗೆ, ಕೀಟಗಳಿಗೆ, ಪ್ರಾಣಿಗಳಿಗೆ ಲಕ್ಷಾಂತರ ವರುಶಗಳ ವಿಕಾಸದ ಹಿನ್ನೆಲೆ ಇದೆ. ಅಲ್ಲದೆ ಜೀವ ವೈವಿಧ್ಯವೆಂಬುದು ಒಂದೇ ಮೂಲ ಜೀವಿಯ ವಿವಿಧ ಪ್ರಭೇದವಲ್ಲ. ಅದರಲ್ಲಿ ಏಕಕೋಶ ಜೀವಿಗಳಿಂದ ಹಿಡಿದು ವಿಕಾಸದ ವಿವಿಧ ಹಂತದಲ್ಲಿರುವ ಎಲ್ಲ ಜೀವಿಗಳೂ ಸೇರಿವೆ. ಆದರೆ ನುಡಿಗಳಲ್ಲಿ ಇರುವ ವೈವಿಧ್ಯ ಒಂದೇ ಮೂಲದ ವಿವಿಧ ಉದಾಹರಣೆಗಳು ಮಾತ್ರ. ಅವುಗಳ ನಡುವೆ ವಿಕಾಸದ ವಿವಿಧ ಹಂತಗಳನ್ನು ಗುರುತಿಸಲು ಆಗುವುದಿಲ್ಲ. ಮಾನವ ಸಹಜ ನುಡಿಗಳೆಲ್ಲವೂ ಒಂದೇ ಬಗೆಯ ರಾಚನಿಕ ವಿಕಾಸವನ್ನು ಹೊಂದಿರುತ್ತವೆ. ಅರವತ್ತು-ಎಪ್ಪತ್ತು ಸಾವಿರ ವರುಶಗಳ ಹಿಂದೆ ಮೈದಳೆದ ಮಾನವ ಸಹಜ ನುಡಿಯ ಅಂತಸ್ಥ ರಾಚನಿಕ ವಿನ್ಯಾಸದಲ್ಲಿ ಬದಲಾವಣೆಗಳು ಆಗಿಲ್ಲ. ಅಂದರೆ ಎಲ್ಲಿಯೋ ಲೋಕದ ಯಾವುದೋ ದ್ವೀಪದಲ್ಲಿ ಸಾವಿರಾರು ವರುಶಗಳಿಂದ ಯಾರ ಗಮನಕ್ಕೂ ಬಾರದಂತೆ ಬದುಕುತ್ತಿರುವ ಬುಡಕಟ್ಟಿನ ನುಡಿಯ ಮೂಲ ಚಹರೆಗಳು ಮತ್ತು ಅತ್ಯಾಧುನಿಕವೆಂದು ನಾವು ತಿಳಿದಿರುವ ನುಡಿಯ ಮೂಲ ಚಹರೆಗಳಲ್ಲಿ ಗುಣಾತ್ಮಕವಾದ ಯಾವ ವ್ಯತ್ಯಾಸಗಳೂ ಇರುವುದಿಲ್ಲ. ಅಂದರೆ ಕಡಿಮೆ ವಿಕಾಸ ಹೊಂದಿರುವ ನುಡಿ

ಮತ್ತು ಹೆಚ್ಚು ವಿಕಾಸ ಹೊಂದಿರುವ ನುಡಿ ಎಂದು ನುಡಿಗಳನ್ನು ಬೇರೆ ಬೇರೆ ಮಾಡಲು ಬರುವುದಿಲ್ಲ. ಹಾಗಾಗಿ ಜೀವ ವೈವಿಧ್ಯ ಮತ್ತು ನುಡಿ ವೈವಿಧ್ಯಗಳು ಗುಣಾತ್ಮಕವಾಗಿ ಬೇರೆಬೇರೆ ಆಗಿವೆ.

ಜೀವ ವೈವಿಧ್ಯ ಅಧಿಕವಾಗಿರುವ ಭೂ ಪ್ರದೇಶಗಳಲ್ಲೇ ನುಡಿಗಳ ಸಂಖ್ಯೆಯೂ ಹೆಚ್ಚಿರುತ್ತದೆ ಎಂಬುದಕ್ಕೆ ಹಲವಾರು ಅಧ್ಯಯನಗಳ ಬೆಂಬಲವಿದೆ. ಯುನೆಸ್ಕೋ ಪ್ರಕಟಿಸಿರುವ ನಕ್ಷೆಯು ಇದನ್ನು ತಿಳಿಸಿಕೊಡುತ್ತದೆ. (http://www.unesco.org/culture/languages-atlas) ಇದನ್ನು ಯಾರೂ ಅಲ್ಲಗಳೆಯುತ್ತಿಲ್ಲ. ಜೀವ ವೈವಿಧ್ಯವನ್ನು ಉಳಿಸಬೇಕೆಂಬ ಕಾಳಜಿಯುಳ್ಳವರು ಹಲವು ಯೋಜನೆಗಳನ್ನು ರೂಪಿಸಿದ್ದಾರೆ. ಹೊರಗಿನ ಪ್ರಯತ್ನಗಳಿಂದ ಜೀವ ವೈವಿಧ್ಯವನ್ನು ಕಾಯ್ದುಕೊಳ್ಳಲು ದಾರಿಗಳನ್ನು ಹುಡುಕಿದ್ದಾರೆ. ಸಸ್ಯಪ್ರಾಣಿ ಜಗತ್ತಿನಲ್ಲಿ ಇರುವ ಅಪಾರ ವೈವಿಧ್ಯದೊಡನೆ ಆ ಪರಿಸರದಲ್ಲೇ ಸ್ಥಳೀಯ ಸಮುದಾಯಗಳು ಬದುಕಿವೆ. ತಮ್ಮದೇ ಆದ ಜೀವನ ಕ್ರಮವನ್ನು ರೂಪಿಸಿಕೊಂಡಿವೆ. ಜೀವ ವೈವಿಧ್ಯವುಳ್ಳ ಪರಿಸರ ಮತ್ತು ಸಮುದಾಯಗಳ ಬದುಕು ಈ ಎರಡರಲ್ಲಿ ಯಾವುದಾದರೂ ಒಂದನ್ನು ಕಾಪಿಟ್ಟರೂ ಇನ್ನೊಂದು ತನ್ನ ಉಳಿವನ್ನು ತಾನೇ ಕಂಡುಕೊಳ್ಳಬಲ್ಲುದೇ ಅಥವಾ ಈ ಎರಡನ್ನೂ ಜೊತೆಜೊತೆಯಾಗಿ ಕಾಪಿಡಬೇಕೇ ಎಂಬುದು ಒಂದು ಪ್ರಶ್ನೆ. ಜೀವ ವೈವಿಧ್ಯವನ್ನು ಕಾಪಿಟ್ಟರೆ ಅದರೊಡನೆ ಬದುಕುತ್ತಿರುವ ಸಮುದಾಯಗಳೂ ಬದುಕುಳಿಯುತ್ತವೆ ಎನ್ನುವುದು ದಿಟ. ಆದರೆ ಕೇವಲ ಸಮುದಾಯಗಳನ್ನು, ಅದರಲ್ಲೂ ಅವುಗಳ ನುಡಿಗಳನ್ನು ಕಾಪಿಟ್ಟರೆ ಜೀವ ವೈವಿಧ್ಯ ತನ್ನಿಂದ ತಾನೇ ಉಳಿದುಕೊಳ್ಳಬಲ್ಲುದೆಂದು ಹೇಳುವುದು ಕಷ್ಟ ಅಭಿವೃದ್ಧಿ, ಆಧುನೀಕರಣ ಮತ್ತು ಐಹಿಕಾಭ್ಯುದಯಗಳನ್ನು ಗುರಿಯಾಗಿರಿಸಿಕೊಂಡ ಕಾರ್ಯ ಯೋಜನೆಗಳು ಜೀವ ವೈವಿಧ್ಯವನ್ನು ಇಲ್ಲವಾಗಿಸುವ ಕಡೆಗೆ ಸಾಗುತ್ತಿವೆ. ದೊಡ್ಡ ಅಣೆಕಟ್ಟುಗಳು, ಖನಿಜಗಳನ್ನು ಹೊರತೆಗೆಯಲು ತೋಡಿದ ಗಣಿಗಳು, ವಿಶಾಲವಾದ ನಿಡಿದಾದ ರಸ್ತೆಗಳು, ರೈಲು ಮಾರ್ಗಗಳು, ದೊಡ್ಡದೊಡ್ಡ ಕೈಗಾರಿಕಾ ವಲಯಗಳು ತಮ್ಮ ಹರಹಿನಲ್ಲಿ ಭೂ ಪ್ರದೇಶಗಳನ್ನು ನುಂಗುತ್ತಿವೆ; ಅದರಿಂದಾಗಿ ಆ ಜಾಗದಲ್ಲಿದ್ದ ಸಮುದಾಯಗಳು ಅಲ್ಲಿಂದ ಹೊರಗೆ ಬರುತ್ತವೆ; ತಮ್ಮ ಮೂಲವನ್ನು ಬಿಟ್ಟುಕೊಡುತ್ತವೆ; ಬೇರುಗಳನ್ನು ಕಳೆದುಕೊಳ್ಳುತ್ತವೆ. ಹೀಗಿರುವಾಗ ಆ ವೈವಿಧ್ಯದ ನಡುವೆ ಬದುಕುತ್ತಿರುವ, ಮತ್ತು ಯಾವಾಗ ಬೇಕಾದರೂ ಅಲ್ಲಿಂದ ಹೊರಬೀಳಬೇಕಾಗುವ ಇಂತಹ ಸಮುದಾಯಗಳ ನುಡಿಗಳ ಅಳಿವನ್ನು ಮಾತ್ರ ತಡೆಯುವ ಉದ್ದೇಶದ ಕಾರ್ಯಯೋಜನೆಗಳು ಒಂದು ವಿಪರ್ಯಾಸದ ಸನ್ನಿವೇಶವನ್ನು ಹುಟ್ಟುಹಾಕುತ್ತಿವೆ.

ಬಹುತ್ವ, ಬಹುಳತ್ವಗಳ ನಿರ್ವಹಣೆ:

ವೈವಿಧ್ಯ, ಬಹುತ್ವ ಇಲ್ಲವೇ ಬಹುಳತ್ವಗಳನ್ನು ನಾವು ಪರಿಶೀಲಿಸಬೇಕಾದ ಬಗೆಯನ್ನು ಮತ್ತೊಮ್ಮೆ ಗಮನಿಸಬೇಕಾಗಿದೆ. ಬಹುತ್ವವನ್ನು ಕಾಯ್ದುಕೊಳ್ಳಬೇಕು ಎನ್ನುವುದು ಬಹು ಜನರ ಸಮ್ಮತಿಯನ್ನು ಪಡೆದ ನಿಲುವಾಗಿದೆ. ಆದರೆ ಬಹುತ್ವ ಇಲ್ಲವೇ

ವೈವಿಧ್ಯಗಳು ಏಕೆ ರೂಪುಗೊಂಡವು ಎನ್ನುವುದನ್ನು ತಿಳಿದುಕೊಳ್ಳುವುದು ಮೊದಲ ಅಗತ್ಯವಾಗಿದೆ. ಪ್ರಕೃತಿಯಲ್ಲಿ ಬಹುತ್ವ ರೂಪುಗೊಳ್ಳಲು ಒಳಗಿನ ಕಾರಣಗಳಿರುತ್ತವೆ. ಈ ಒಳಗಿನ ಕಾರಣಗಳನ್ನು ತಿಳಿಯದೇ ಬಹುತ್ವ ಕಾಯ್ದುಕೊಳ್ಳಲು ಮಾಡುವ ಹೊರಗಿನ ಪ್ರಯತ್ನಗಳು ಫಲಕಾರಿಯಾಗುವುದು ಕಷ್ಟ. ಅಲ್ಲದೆ ಬಹುತ್ವ ಇಲ್ಲವೇ ವೈವಿಧ್ಯಗಳು ಉಪಯುಕ್ತ ಮತ್ತು ಅವೆಲ್ಲವೂ ಕಾಯ್ದುಕೊಳ್ಳುವುದಕ್ಕೆ ತಕ್ಕುದಾದವು ಎನ್ನುವ ನಿಲುವು ಯಾವಾಗಲೂ ಸರಿಯಾಗಲಾರದು. **ತಾರತಮ್ಯದ ತಳಹದಿಯ ಮೇಲೆ ರೂಪುಗೊಂಡಿಲ್ಲದ** ವೈವಿಧ್ಯಕ್ಕೆ ಮಾತ್ರ ನಿರಂತರವಾಗಿ ಉಳಿದುಕೊಳ್ಳುವ ನೈತಿಕ ಹಕ್ಕಿರಲು ಸಾಧ್ಯ. ಆದರೆ ಹಾಗಿಲ್ಲದಿರುವ ವೈವಿಧ್ಯಗಳನ್ನು, ಅಂದರೆ ತಾರತಮ್ಯವನ್ನು ಆಧರಿಸಿ ಮೈದಳೆದಿರುವ ವೈವಿಧ್ಯಗಳನ್ನು ಕಾಯ್ದುಕೊಳ್ಳಬೇಕೆಂದು ಮುಂದಾಗುವುದು ಸರಿಯಾಗಲಾರದು. ಈ ನಿಟ್ಟಿನಲ್ಲಿ ಮುಂದುವರೆದರೆ ಇಂಡಿಯಾದಲ್ಲಿರುವ ಜಾತಿ ವ್ಯವಸ್ಥೆಯನ್ನೂ ಅದರ ಮುಂದುವರಿಕೆಯನ್ನೂ ಸಮರ್ಥಿಸುವ ತರ್ಕಗಳು ಹುಟ್ಟಿಕೊಳ್ಳುತ್ತವೆ. ಜಾತಿಗಳ ವೈವಿಧ್ಯವು ಸಾಮಾಜಿಕ ವ್ಯವಸ್ಥೆಯಲ್ಲಿ ನೆಲೆಗೊಳ್ಳುವುದಕ್ಕೂ ಕಾರಣಗಳಿವೆ; ಅಗತ್ಯವಿಲ್ಲದೆ ಅದು ನೆಲೆಗೊಂಡಿರಲಾರದು ಎಂಬ ವಾದ ಹುಟ್ಟಿಕೊಳ್ಳಬಲ್ಲುದಲ್ಲವೆ? ನುಡಿಗಳ ವೈವಿಧ್ಯ ಉಂಟಾಗುವುದಕ್ಕೆ ಇರುವ ಕಾರಣಗಳನ್ನು ಮಾನವಶಾಸ್ತ್ರಜ್ಞರು ಮತ್ತು ಸಮಾಜಶಾಸ್ತ್ರಜ್ಞರು ವಿವರಿಸುತ್ತಾರೆ. ಮಾನವ ಸಮುದಾಯಗಳಲ್ಲಿರುವ 'ಒಳಗೊಳ್ಳದ ಜೀವನ ಕ್ರಮವು' ನುಡಿ ವೈವಿಧ್ಯಕ್ಕೆ ಒಂದು ಮುಖ್ಯ ಕಾರಣವಾಗಿದೆ.ಅಂದರೆ ಇತರ ಸಮುದಾಯಗಳ ಜೊತೆಗೆ ಬೆರೆಯಲು ಅವಕಾಶವಿಲ್ಲದಿದ್ದಾಗ, ಬೆರೆಯಲು ಬೇಕಾದ ಸಂದರ್ಭಗಳು ಒದಗಿ ಬರದಿದ್ದಾಗ, ಅಂತಹ ಸಂದರ್ಭಗಳಿದ್ದರೂ ಒಂದರೊಡನೆ ಒಂದು ಬೆರೆಯದೇ ಉಳಿದುಕೊಂಡಾಗ ಬೇರೆ ಬೇರೆ ನುಡಿಗಳು ರೂಪುಗೊಂಡು ಬೆಳೆಯುತ್ತವೆ. ಒಂದೇ ಮೂಲದಿಂದ ರೂಪುಗೊಂಡ ನುಡಿಗಳು ಏಕೆ ಬೇರೆ ಬೇರೆ ನುಡಿಗಳಾಗಿ ಬೇರ್ಪಟ್ಟವು ಎಂಬುದನ್ನು ವಿವರಿಸಲು ನುಡಿಯರಿಗರು ಯತ್ನಿಸಿದ್ದಾರೆ. ಭೌಗೋಳಿಕವಾಗಿ ಬೇರೆ ಬೇರೆ ಪ್ರದೇಶಗಳಲ್ಲಿ ನೆಲೆಸಬೇಕಾಗಿ ಬಂದಾಗ ಒಂದೇ ನುಡಿಯನ್ನಾಡುತ್ತಿದ್ದ ಸಮುದಾಯಗಳು ಕಾಲ ಕಳೆದಂತೆ ಬೇರೆ ಬೇರೆ ನುಡಿಗಳನ್ನಾಡುವ ಸಮುದಾಯಗಳಾಗುತ್ತವೆ. ಈ ಬಗೆಯ ಬೆರೆಯದಿರುವ ಜೀವನ ಕ್ರಮ ಆಯಾ ಸಮುದಾಯಗಳಿಗೆ ಗೊತ್ತಾದ ಕಾಲಘಟ್ಟದಲ್ಲಿ ಅಗತ್ಯವಾಗಿದ್ದಿರಲೂಬಹುದು. ಆದರೆ ಆಧುನಿಕ ಸಂಪರ್ಕ ಸಾಧನಗಳು ಬೆಳೆದಿರುವ ಹೊತ್ತಿನಲ್ಲಿ ಮತ್ತು ಆರ್ಥಿಕ ಚಟುವಟಿಕೆಗಳಲ್ಲಿ ಪರಸ್ಪರ ಅವಲಂಬನೆ ಅನಿವಾರ್ಯವಾಗುತ್ತಿರುವ ಕಾಲದಲ್ಲಿ ಹೀಗೆ ಬೇರ್ಪಟ್ಟು ಬದುಕುವ ಅಗತ್ಯಗಳು ಕಡಿಮೆಯಾಗುತ್ತಿವೆ. ಅಂದರೆ ನುಡಿಗಳ ವೈವಿಧ್ಯ ತಂತಾನೆ ಕಡಿಮೆಯಾಗುವುದು ಅನಿವಾರ್ಯ. ಒಟ್ಟಂದದಲ್ಲಿ ಹೇಳುವುದಾದರೆ ಬಹುತ್ವ, ಬಹುಳತೆಗಳು ರೂಪುಗೊಳ್ಳಲು ಇದ್ದ ಕಾರಣಗಳು ಇಲ್ಲವಾದಾಗ ಅವು ತಮ್ಮ ಚಹರೆಗಳನ್ನು ಕಾಯ್ದುಕೊಳ್ಳಲು ಬೇರೆ ಕಾರಣಗಳನ್ನು ಹುಡುಕಿಕೊಳ್ಳಬೇಕಾಗುತ್ತದೆ. ಇಲ್ಲವೇ ಬಹುತ್ವ ಎನ್ನುವುದು ಕಳೆದುಹೋಗಬೇಕಾಗುತ್ತದೆ.

ಬಹುತ್ವ ಇಲ್ಲವಾಗುವ ಮಾತನ್ನು ಕೊಂಚ ಎಚ್ಚರದಿಂದ ಗಮನಿಸಬೇಕು. ಜೀವ ವೈವಿಧ್ಯ ಕಡಿಮೆ ಇರುವ ಕಡೆಗಳಲ್ಲೂ ನುಡಿಗಳು ಹೆಚ್ಚಿನ ಸಂಖ್ಯೆಯಲ್ಲಿ ಇರಬಹುದು. ಇಂಡಿಯಾದಂತಹ ದೇಶದಲ್ಲಿ ಒಂದು ನುಡಿಯನ್ನು ಮುಂಚೂಣಿಯಲ್ಲಿ ಇರಿಸಿಕೊಂಡ ಯಾವುದೇ ರಾಜ್ಯದಲ್ಲಾದರೂ ಹಲವಾರು ನುಡಿ ಸಮುದಾಯಗಳು ಇರುತ್ತವೆ. ಉದಾಹರಣೆಗೆ ನಮ್ಮ ರಾಜ್ಯವನ್ನೇ ಗಮನಿಸೋಣ ಕರ್ನಾಟಕದ ಅಧಿಕೃತ ನುಡಿ ಕನ್ನಡ. ಆದರೆ ಈ ನಾಡಿನಲ್ಲಿ ಒಂದು ಅಂದಾಜಿನಂತೆ ನೂರೈವತ್ತಕ್ಕೂ ಹೆಚ್ಚಿನ ಸಂಖ್ಯೆಯ ನುಡಿ ಸಮುದಾಯಗಳಿವೆ. ಈ ಸಮುದಾಯಗಳಲ್ಲಿ ಕೆಲವು ಈ ರಾಜ್ಯದಲ್ಲಿ ಮಾತ್ರ ಇರುವಂತಹವು. ಮತ್ತೆ ಕೆಲವು ಬೇರೆ ಬೇರೆ ರಾಜ್ಯಗಳಲ್ಲಿ ಇರುವ ನುಡಿ ಸಮುದಾಯಗಳ ವಿಸ್ತರಣೆಗಳು. ತೆಲುಗು, ತಮಿಳು, ಮರಾಠಿ, ಕೊಂಕಣಿ, ಹಿಂದಿ,ಬಂಗಾಳಿ ಮುಂತಾದ ನುಡಿಗಳನ್ನಾಡುವ ಸಮುದಾಯಗಳನ್ನು ಈ ಪಟ್ಟಿಯಲ್ಲಿ ಇರಿಸಬಹುದು. ಮತ್ತೆ ಕೆಲವು ನುಡಿ ಸಮುದಾಯಗಳು ಬೇರೊಂದು ನುಡಿಯ ಒಳನುಡಿಗಳನ್ನು ತಮ್ಮ ನುಡಿಯನ್ನಾಗಿ ಇಲ್ಲಿ ಬಳಸುತ್ತಿರುತ್ತವೆ. ಹಲವು ಅಲೆಮಾರಿ ಸಮುದಾಯಗಳು ಹೀಗೆ ಮರಾಠಿ, ತೆಲುಗು, ತಮಿಳು ಮೊದಲಾದ ನುಡಿಗಳ ಒಳನುಡಿಗಳನ್ನು ಈ ನಾಡಿನಲ್ಲಿ ಆಡುತ್ತಿವೆ. ಅಂದರೆ ಇಲ್ಲಿಯೂ ಒಂದು ಮಾದರಿಯ ನುಡಿ ಬಹುಳತೆ ಇದೆ. ಈ ನುಡಿ ಬಹುಳತೆಯನ್ನು ಕಾಯ್ದುಕೊಳ್ಳುವ ಕಾರ್ಯಕ್ರಮಗಳು ಎಲ್ಲಿಯೂ ಕಾಣುವುದಿಲ್ಲ. ರಾಜ್ಯ ಸರಕಾರ ಹಲವಾರು ದಶಕಗಳ ಹಿಂದೆ ಮಾಡಿದ ಒಂದು ಕಾಯಿದೆ ಪ್ರಕಾರ ಒಂದು ತಾಲೋಕಿನಲ್ಲಿ ಯಾವುದಾದರೊಂದು ನುಡಿಯನ್ನು (ಕನ್ನಡವನ್ನು ಬಿಟ್ಟು) ಹದಿನೈದು ಸಾವಿರಕ್ಕಿಂತ ಹೆಚ್ಚು ಜನರು ಮನೆಮಾತನ್ನಾಗಿ ಬಳಸುತ್ತಿದ್ದರೆ ಆ ನುಡಿಯನ್ನು ಆ ತಾಲೋಕಿನಲ್ಲಿ ಆಡಳಿತದ ಕಾರಣಕ್ಕಾಗಿ ಮಾನ್ಯ ಮಾಡಬೇಕು. ಅಂದರೆ ಇಂತಹ ನುಡಿಗಳನ್ನು ಆಡುವ ಜನರು ತಮ್ಮ ಅಹವಾಲನ್ನು ತಮ್ಮ ನುಡಿಯಲ್ಲೇ ಬರೆದು ಕೊಡಲು ಅವಕಾಶವಿದೆ. ಕಚೇರಿಗಳು ಅಂತಹವನ್ನು ಮಾನ್ಯ ಮಾಡಬೇಕು. ಅಲ್ಲದೆ ರಾಜ್ಯ ಸರಕಾರದ ಪ್ರಕಟನೆಗಳಲ್ಲಿ ಜನರಿಗೆ ನೇರವಾಗಿ ಸಂಬಂಧಿಸಿದ ಮಾಹಿತಿ ಇದ್ದಲ್ಲಿ ಅಂತಹ ಪ್ರಕಟನೆಗಳನ್ನು ಆಯಾ ತಾಲೋಕಿನಲ್ಲಿ ಈ ಬಗೆಯ ಜನ ನುಡಿಗಳಲ್ಲಿ ಒದಗಿಸಬೇಕು. ಈ ಕಾಯಿದೆ ಕಾಗದದ ಮೇಲೆ ಮಾತ್ರ ಇದೆ. ಇದು ಜಾರಿಗೊಳ್ಳದಿರಲು ಆಡಳಿತ ಯಂತ್ರಕ್ಕೆ ಜಾರಿಗೊಳಿಸುವ ಮನಸ್ಸಿಲ್ಲದೇ ಇರುವುದಷ್ಟೇ ಕಾರಣವಲ್ಲ. ರಾಜ್ಯದಲ್ಲಿ ಜನ ಬಳಸುತ್ತಿರುವ ನೂರಾರು ನುಡಿಗಳಿಗೆ ಬರೆಹದ ಸೌಲಭ್ಯವೇ ಇಲ್ಲ. ಅವೆಲ್ಲವೂ ಬಾಯ್ದೆರೆಯ ನುಡಿಗಳು. ಅಂದರೇನಾಯ್ತು? ನುಡಿ ಕಾಪಿಡುವ ಕಾಯಿದೆಯನ್ನು ಬಳಸುವ ಅವಕಾಶಗಳೇ ಇಲ್ಲ. ಹೀಗಲ್ಲದೆ ಈ ನುಡಿಗಳನ್ನು ವ್ಯವಹಾರದ ಇತರ ವಲಯಗಳಲ್ಲಿ ಬಳಸುವ ಅವಕಾಶಗಳು ಕಡಿಮೆ. ಉದಾಹರಣೆಗೆ ಶಿಕ್ಷಣದಲ್ಲಿ, ವಾಣಿಜ್ಯ ವ್ಯವಹಾರಗಳಲ್ಲಿ, ಮಾಧ್ಯಮಗಳಲ್ಲಿ ಇವುಗಳ ಬಳಕೆ ಇಲ್ಲವೇ ಇಲ್ಲ.

ಈಚೆಗೆ ಒಂದು ಸರ್ವೇಕ್ಷಣೆಯ ವರದಿಯನ್ನು ನೀವು ನೋಡಿರುತ್ತೀರಿ. ಅದರಂತೆ ಕರ್ನಾಟಕದಲ್ಲಿ 101 ಪರಿಶಿಷ್ಟ ಜಾತಿಗಳಿವೆ. ಈ ಪಟ್ಟಿಯಲ್ಲಿರುವ ಆಯಾ ಜಾತಿಗಳ

ಜನರು ಆಡುವ ನುಡಿಗಳ ಬಗೆಗೆ ನಮ್ಮಲ್ಲಿ ಮಾಹಿತಿಗಳಿಲ್ಲ. ಪರಿಶಿಷ್ಟ ಪಂಗಡಗಳಿಗೆ ಸೇರಿದ ಜಾತಿಗಳ ಜನರು ಆಡುವ ನುಡಿಗಳ ಬಗೆಗೆ ಸುಮಾರಾದ ಮಾಹಿತಿ ಇದೆ. ಆದರೆ ಈ ಪರಿಶಿಷ್ಟ ಜಾತಿಗಳ ಜನರು ಆಡುವ ಮಾತುಗಳಲ್ಲಿ ಕನ್ನಡ, ತೆಲುಗು, ತಮಿಳು, ಮರಾಠಿ ಮತ್ತು ಲಂಬಾಣಿಗಳನ್ನು ಬಿಟ್ಟರೆ ಉಳಿದ ನುಡಿಗಳ ಬಗೆಗೆ ಹೆಚ್ಚಿನ ವಿವರಗಳು ಇಲ್ಲ. ಒಂದೋ ಈ ಎಲ್ಲ ಜಾತಿಗಳೂ ಈ ಪಟ್ಟಿಯಲ್ಲಿರುವ ನುಡಿಗಳ ಯಾವುದೋ ಒಂದು ನುಡಿಯನ್ನು ಆಡುತ್ತಿರಬೇಕು; ಇಲ್ಲವೇ ಬೇರೆ ಯಾವುದೋ ನಮಗೆ ತಿಳಿಯದ ನುಡಿಯೊಂದನ್ನು ಆಡುತ್ತಿರಬೇಕು. ಇವರೆಲ್ಲರೂ ತಮ್ಮ ಸುತ್ತಮುತ್ತ ಬಹುಮಟ್ಟಿಗೆ ಕನ್ನಡವನ್ನು ಮಾತಾಡುವ ಜನರನ್ನೇ ಕಾಣುತ್ತಿರುತ್ತಾರೆ. (ತುಳು ನುಡಿಯನ್ನಾಡುವ ಪರಿಸರದಲ್ಲಿರುವ ಕೆಲವು ಪರಿಶಿಷ್ಟ ಜಾತಿಯ ಜನರನ್ನು ಇದಕ್ಕೆ ವಿನಾಯತಿಗಳೆಂದು ತಿಳಿಯಬಹುದು) ಹಾಗಾಗಿ ಇವರು ಎಲ್ಲರೂ, ಇಲ್ಲವೇ ಕೆಲವರಾದರೂ ತಮ್ಮ ಬದುಕನ್ನು ನಡೆಸಲು ಕನ್ನಡವನ್ನು 'ಕಲಿಯ'ಬೇಕಾಗುತ್ತದೆ. ಆದರೆ ಕನ್ನಡ ಮಾತಾಡುವವರಿಗೆ ಇವರ ನುಡಿಯನ್ನು ಕಲಿಯುವ ಒತ್ತಾಯ ಇರುವುದಿಲ್ಲ.ಅಲೆಮಾರಿಗಳೋ, ಅರೆ ಅಲೆಮಾರಿಗಳೋ ಆಗಿದ್ದುಕೊಂಡು ಒಂದುವೇಳೆ ತಾತ್ಕಾಲಿಕ ನಿವಾಸಗಳನ್ನು ಹೊಂದಿದ್ದರೂ 'ಊರ ಹೊರಗೆ' ಬದುಕುವ ಈ ಜನರು ಮುಖ್ಯ ಧಾರೆಯೊಡನೆ ಸೇರುವ ಅವಕಾಶವನ್ನು ಪಡೆದಿಲ್ಲ. ಸರಕಾರ ನೀಡುತ್ತವೆ ಎಂದು ತಿಳಿದಿರುವ ಕೆಲವು ಸೌಲಭ್ಯಗಳನ್ನು ಪಡೆಯುವ ಹಂಬಲವಿದ್ದರೂ ತಮ್ಮ ಬದುಕನ್ನು ಬದಲಿಸುವ ದಿಕ್ಕಿನೆಡೆಗೆ ಹೆಜ್ಜೆ ಇಡುವ ಅವಕಾಶಗಳು ಅವರಿಗಿಲ್ಲ. ಈ ವಿವರಗಳನ್ನು ಏಕೆ ನೀಡುತ್ತಿದ್ದೇನೆ? ಈ ಜನರ ನುಡಿಗಳು ಅಳಿವಿನ ಅಂಚಿನಲ್ಲಿವೆ ಎಂದು ತಿಳಿಯಬೇಕೆ? ಆ ನುಡಿಗಳನ್ನು ಕಾಪಿಡುವ ಯೋಜನೆಗಳನ್ನು ರೂಪಿಸಬೇಕೆ? ಇಲ್ಲವೇ ಅವರು ಹಂತ ಹಂತವಾಗಿ ಕನ್ನಡ ಮಾತಾಡುವ ಜನರಾಗಿ ಬದಲಾಗುವ ದಿನಗಳನ್ನು ಎದುರು ನೋಡಬೇಕೆ? ಸಮುದಾಯ ಮತ್ತು ನುಡಿಗಳನ್ನು ಬೇರೆ ಮಾಡಿ ನೋಡುವುದರಿಂದ ಹುಟ್ಟಿಕೊಳ್ಳುವ ಪ್ರಶ್ನೆಗಳಿವು. ಈ ಸಮುದಾಯಗಳ ಬದುಕು ಹಸನಾಗುವ ದಾರಿಗಳನ್ನು ಕಟ್ಟುವ ಗುರಿ ನಮಗೆ ಮುಖ್ಯವೇ ಹೊರತು ಅವರ ನುಡಿಗಳ ಬಗೆಗೆ ಮಾತ್ರ ಚಿಂತಿತರಾಗುವುದಲ್ಲ. ಇಂತಹ ಪ್ರಸಂಗಗಳಲ್ಲಿ ಬಹುತ್ವವನ್ನು ಕಾಯ್ದುಕೊಳ್ಳುವ ಮಾತನ್ನು ಸರಿಯಾದ ಚೌಕಟ್ಟಿನಲ್ಲಿ ಗ್ರಹಿಸದೇ ಹೋದರೆ ತಪ್ಪು ಹೆಜ್ಜೆಗಳನ್ನು ಇರಿಸುವ ಸಾಧ್ಯತೆಗಳಿರುತ್ತವೆ.

ನುಡಿ ಸಮುದಾಯಗಳ ಬಹುಳತೆಯನ್ನು ಕಾಯ್ದುಕೊಳ್ಳಬೇಕು ಎನ್ನುವ ನಿಲುವು ಮತ್ತು ಜಾರಿಯಲ್ಲಿರುವ ನುಡಿ ನೀತಿ ಮತ್ತು ನುಡಿ ಯೋಜನೆಗಳ ನಡುವೆ ಹಲವು ನೆಲೆಗಳಲ್ಲಿ ವೈರುಧ್ಯಗಳು ತಲೆಹಾಕುತ್ತವೆ. ಕೆಲವು ಉದಾಹರಣೆಗಳನ್ನು ನೋಡೋಣ. ಶಾಲೆಯಲ್ಲಿ ಮಕ್ಕಳಿಗೆ ಅವರ ಮೊದಲ ನುಡಿಯನ್ನು– ಕೆಲವೊಮ್ಮೆ ತಾಯಿ ನುಡಿ ಎಂದೂ ಗುರುತಿಸಲಾಗುತ್ತದೆ– ಕಲಿಸಬೇಕು ಎನ್ನುವುದು ನುಡಿ ನೀತಿಯ ಭಾಗ. ಆದರೆ ನುಡಿ ಯೋಜನೆಗಳಲ್ಲಿ ಎಷ್ಟೋ ನುಡಿಗಳಲ್ಲಿ ಕಲಿಕೆಯ ಸಾಮಗ್ರಿಗಳೇ ಸಿದ್ಧಗೊಳ್ಳುವುದಿಲ್ಲ. ಆಗ ಮಕ್ಕಳ ಮೊದಲ ನುಡಿಯನ್ನು ಶಾಲೆಯ ಕಲಿಕೆಯಲ್ಲಿ

ಕಲಿಸುವ ಮಾತು ಜಾರಿಗೆ ಬರುವುದೇ ಇಲ್ಲ. ಇದೇ ಮಾತು ಯಾವ ನುಡಿಯ ಮೂಲಕ ಕಲಿಸಬೇಕು ಎಂಬ ವಿಚಾರದಲ್ಲಿ ನುಡಿ ನೀತಿಯು ತಳೆಯುವ ನಿಲುವಿಗೂ ಅನ್ವಯಿಸುತ್ತದೆ. ಹೆಚ್ಚು ಜನಪ್ರಿಯವಾದ ಮತ್ತು ಒಪ್ಪಿತವಾದ ನಿಲುವೆಂದರೆ ಮಕ್ಕಳಿಗೆ ಶಾಲೆಯಲ್ಲಿ ಅವರ ಮೊದಲ ನುಡಿಯ ಮೂಲಕವೇ ಎಲ್ಲ ವಿಷಯಗಳನ್ನು ಕಲಿಯುವ ಅವಕಾಶ ಇರಬೇಕು ಎಂಬುದು. ಈ ನಿಲುವನ್ನು ಸಮರ್ಥಿಸಲು ಬೇಕಾದ ವಾದಗಳನ್ನು ಮುಂದಿಡಲಾಗುತ್ತದೆ. ಆದರೆ ದಿಟವಾಗಿ ಮಕ್ಕಳ ಮೊದಲ ನುಡಿಯಲ್ಲಿ ಎಲ್ಲ ವಿಷಯಗಳನ್ನು ಕಲಿಸಲು ಸಾಮಗ್ರಿಗಳಾಗಲೀ ಕಲಿಸುವವರಾಗಲೀ ಸಿದ್ಧವಾಗಿಯೇ ಇಲ್ಲ; ಇದೆಲ್ಲವನ್ನೂ ಸಿದ್ಧಪಡಿಸುವ ಯೋಜನೆಗಳೂ ಸದ್ಯ ಎದುರಿಗೆ ಇಲ್ಲ. ಹೀಗಿರುವಾಗ ಮೊದಲ ನುಡಿ ಎನ್ನುವುದನ್ನು ಪರಿಸರದ ನುಡಿ–ಅಧಿಕೃತವಾಗಿ ರಾಜ್ಯದ ಬಹು ಸಂಖ್ಯಾತರ ನುಡಿ– ಎಂದು ಅನುಕೂಲಕ್ಕೆ ತಕ್ಕಂತೆ ಬದಲಿಸಲಾಗುತ್ತದೆ. ಶಾಲೆಗೆ ಬರುವ ಎಷ್ಟೋ ಮಕ್ಕಳಿಗೆ ಪರಿಸರದ ನುಡಿಯಲ್ಲಿ ಕಲಿಯುವ ಮಾತಿರಲಿ. ಆ ನುಡಿಯೇ ತಿಳಿದಿರುವುದಿಲ್ಲ. ಅಂದರೆ ಸಮುದಾಯದ ನುಡಿಗಳ ಬಹುಳತೆಗಳನ್ನು ಕಾಪಾಡಿಕೊಳ್ಳುವ ಮಾತು ದೂರವೇ ಉಳಿಯಿತು.

ನುಡಿ ಬಹುಳತೆಯ ಬಗೆಗೆ ತನ್ನ ಕಾಳಜಿಯನ್ನು ಯುನೆಸ್ಕೋ ಸಂಸ್ಥೆ ಬಹು ಹಿಂದಿನಿಂದಲೂ ವ್ಯಕ್ತಪಡಿಸುತ್ತಲೇ ಇದೆಯಷ್ಟೆ. 1953 ರಲ್ಲಿ ಯುನೆಸ್ಕೋ ಎಲ್ಲ ಮಕ್ಕಳಿಗೂ ಯಾವ ನುಡಿಯ ಮೂಲಕ ಕಲಿಕೆಯ ಅವಕಾಶವನ್ನು ಕಲ್ಪಿಸಬೇಕು ಎನ್ನುವುದನ್ನು ವಿವರಿಸುವ ವರದಿಯೊಂದನ್ನು ಪ್ರಕಟಿಸಿದೆ. (The Use of Vernacular Languages in Education: UNESCO- Paris 1953) ತಾಯ್ನುಡಿಯಲ್ಲೇ ಕಲಿಕೆ ನಡೆಯಬೇಕೆಂದು ಪ್ರತಿಪಾದಿಸುವವರೆಲ್ಲರೂ ತಮ್ಮ ನಿಲುವನ್ನು ಸಮರ್ಥಿಸಲು ಯುನೆಸ್ಕೋದ ಈ ವರದಿಯನ್ನು ಎತ್ತಿ ತೋರಿಸುತ್ತಾರೆ. ವಸಾಹತು ಆಡಳಿತಗಳಿಂದ ಬಹುಪಾಲು ದೇಶಗಳು ಬಿಡುಗಡೆಯನ್ನು ಪಡೆಯುತ್ತಿದ್ದ ಹೊತ್ತಿನಲ್ಲಿ ಯುನೆಸ್ಕೋದ ಈ ವರದಿ ಪ್ರಕಟವಾಗಿದೆ. ಹೀಗೆ ಬಿಡುಗಡೆ ಹೊಂದಿದ ದೇಶಗಳು ತಮ್ಮ ನಾಡಿನ ಮಕ್ಕಳಿಗೆ ಕಲಿಕೆಯ ಅವಕಾಶಗಳನ್ನು ವಸಾಹತುಗಾರರ ನುಡಿಯ ಮೂಲಕ ನೀಡುವುದರ ಬದಲು ತಮ್ಮ ನಾಡಿನ ನುಡಿಯ ಮೂಲಕ ನೀಡುವುದು ಸರಿಯಾದುದು ಎನ್ನುವ ನಿಲುವನ್ನು ಈ ವರದಿ ಹೊಂದಿದೆ. ವಸಾಹತುಗಾರರ ನುಡಿಯ ಬದಲಿಗೆ ಕಲಿಕೆಯಲ್ಲಿ ಬಳಸಬೇಕಾದ ನುಡಿಯನ್ನು 'ವರ್ನಾಕ್ಯುಲರ್' ಎಂದು ಈ ವರದಿ ಬಣ್ಣಿಸುತ್ತದೆ. ವರ್ನಾಕ್ಯುಲರ್ ನುಡಿ ಎನ್ನುವುದಕ್ಕೆ ಜನರು ಬಳಸುವ ನುಡಿ, ಸ್ಥಳೀಯ ನುಡಿ ಎಂಬೆಲ್ಲ ತಿರುಳುಗಳಿವೆ. ಈ ನುಡಿ ವ್ಯಕ್ತಿಯ ಮೊದಲ ನುಡಿಯಾಗಿರಬೇಕು; ಕಲಿತ ಎರಡನೆಯ ನುಡಿ ಆಗಿರಬಾರದು ಎನ್ನುವ ತಿರುಳೂ ಇದೆ. ಈ ತಿರುಳನ್ನು ಬಳಸಿ ವರ್ನಾಕ್ಯುಲರ್ ಎಂದರೆ ತಾಯ್ನುಡಿ ಎಂದು ವಿವರಿಸಿಕೊಳ್ಳಲಾಗಿದೆ. ಸರಿಯೇ ಸರಿ. ಆದರೆ ಹೀಗೆ ವಸಾಹತು ಆಡಳಿತದಿಂದ ಬಿಡುಗಡೆ ಪಡೆದ ನಾಡುಗಳಲ್ಲಿ ಒಂದಲ್ಲ, ಹಲವು ವರ್ನಾಕ್ಯುಲರ್‌ಗಳಿದ್ದವು. ಅವೆಲ್ಲವನ್ನೂ ಕಲಿಕೆಯ ನುಡಿಗಳನ್ನಾಗಿ ಬಳಸಲು ಹೊಸ ಆಡಳಿತ ವ್ಯವಸ್ಥೆಗೆ ನಿಡುಗಾಲದ ಅವಕಾಶ ಅಗತ್ಯವಾಗಿತ್ತು. ಹಾಗಾಗಿ ವಸಾಹತು

ನುಡಿಗೆ ಬದಲಾಗಿ ತಮ್ಮ ನಾಡಿನಲ್ಲೇ ಇದ್ದ ಬಹು ಸಂಖ್ಯಾತ ಜನರ ನುಡಿಗಳನ್ನು ಕಲಿಕೆಯಲ್ಲಿ ಬಳಸುವ ಹಾದಿಯನ್ನು ಆಯ್ದುಕೊಂಡವು; ಅದಕ್ಕೆ ಸಿದ್ಧತೆ ಮಾಡಿಕೊಳ್ಳಲು ಹೆಚ್ಚಿನ ಸಮಯ ಬೇಕಿರಲಿಲ್ಲ ಎನ್ನುವುದು ಈ ಆಯ್ಕೆಗೆ ಒಂದು ಕಾರಣ. ಈ ಆಯ್ಕೆಯಿಂದಾಗಿ ಆ ನಾಡುಗಳಲ್ಲಿ ಜನ ಬಳಸುತ್ತಿದ್ದ ಎಷ್ಟೋ ನುಡಿಗಳು ಅವುಗಳನ್ನು ಬಳಸುತ್ತಿದ್ದ ಸಮುದಾಯಗಳು 'ದುರ್ಬಲ'ವಾಗಿದ್ದುದರಿಂದ ಕಲಿಕೆಯಲ್ಲಿ ಜಾಗ ಪಡೆಯುವಲ್ಲಿ ಸೋತವು.

1953ರಲ್ಲಿ ಈ ವರದಿ ಪ್ರಕಟವಾಗುವ ಹೊತ್ತಿನಲ್ಲಿ ಇಂತಹ ನಾಡುಗಳ, ಅಷ್ಟೇಕೆ ಲೋಕದ ನುಡಿಗಳ ವೈವಿಧ್ಯ ಪರಿಚಯವಾಗಿರಲಿಲ್ಲ. ಆ ಬಳಿಕ ಸುಮಾರು ದಶಕಗಳ ಕಾಲ ನಡೆದ ಶೋಧಗಳು ಲೋಕದ ನುಡಿಗಳ ವೈವಿಧ್ಯವನ್ನು ಬಯಲಿಗೆ ತಂದಿವೆ. ವಸಾಹತು ಆಳ್ವಿಕೆಯಿಂದ ಬಿಡುಗಡೆ ಪಡೆದ ನಾಡುಗಳಲ್ಲಿಯೂ ಈ ಚಿತ್ರದ ಸಂಕೀರ್ಣತೆ ಗೋಚರವಾಗತೊಡಗಿದೆ. ತಾಯ್ನುಡಿಯಲ್ಲಿ ಕಲಿಕೆ ನಡೆಯಬೇಕು ಎಂಬ ನಿಲುವನ್ನು ಜಾರಿಗೆ ಕೊಡುವಾಗ ಆಡಳಿತಗಾರರು ಪರಿಸರದಲ್ಲಿ ಬಹು ಸಂಖ್ಯಾತರು ಆಡುವ ನುಡಿಯನ್ನೇ 'ಎಲ್ಲರ ನುಡಿ' ಎಂಬಂತೆ ಪರಿಗಣಿಸಿರುವುದನ್ನು ಕಾಣುತ್ತೇವೆ. ಇದರಿಂದ ಉಂಟಾಗಿರುವ ತಿಕ್ಕಾಟಗಳು ಏಸಿಯಾ ಮತ್ತು ಆಫ್ರಿಕಾ ಖಂಡಗಳ ನಾಡುಗಳಲ್ಲಿ ಹೆಚ್ಚಾಗಿವೆ; ಇನ್ನೂ ತೀವ್ರಗೊಳ್ಳುತ್ತಿವೆ.

ನುಡಿಯು ಸಮುದಾಯದ ಗುರುತು ಎಂದು ತಿಳಿದರೆ ಏನಾಗುತ್ತದೆ?

ನುಡಿಗಳನ್ನು ಸಮುದಾಯಗಳ ಗುರುತು ಎಂದು ತಿಳಿಯುವ ನೆಲೆ ಕೆಲವೊಮ್ಮೆ ವಿಪರ್ಯಾಸದ ಸಂದರ್ಭಗಳಿಗೆ ಕಾರಣವಾಗುವುದುಂಟು. ಕರ್ನಾಟಕದಲ್ಲಿ ಈಗ ಇರುವಂತೆ ಲಂಬಾಣಿ ಸಮುದಾಯಗಳು ತಾಂಡಾಗಳಲ್ಲಿ ವಾಸಿಸುತ್ತಿವೆ. ತಾಂಡಾಗಳಲ್ಲಿ ಇದ್ದುಕೊಂಡು ಕಲಿತು ಉದ್ಯೋಗ ಪಡೆದು ತಾಂಡಾ ತೊರೆದು ಹೊರಬಂದ ಲಂಬಾಣಿಗಳನ್ನು ಬಿಟ್ಟರೆ ಉಳಿದವರು ಈಗಲೂ ತಮ್ಮ ತಾಂಡಾಗಳ ನೆರೆಯ ಊರಿನ ಭಾಗವಾಗಿ ಬದುಕುತ್ತಿಲ್ಲ. ಸರಕಾರದ ಕಾರ್ಯಕ್ರಮಗಳಿಗೆ ಅನುಗುಣವಾಗಿ ಲಂಬಾಣಿ ಸಮುದಾಯದ ಮಕ್ಕಳಿಗೆ ಶಾಲಾ ಶಿಕ್ಷಣ ದೊರಕುವುದು ಅಗತ್ಯ. ಅದಕ್ಕಾಗಿ ಅವರು ಊರಿನ ಶಾಲೆಗಳಿಗೆ ಬರಬೇಕು. ಇಲ್ಲವೇ ತಾಂಡಾಗಳಲ್ಲೇ ಶಾಲೆಗಳನ್ನು ತೆರೆದು ಅಲ್ಲಿ ಅವರಿಗೆ ಕಲಿಯುವ ಅವಕಾಶವನ್ನು ನೀಡಬೇಕು. ಈ ಎರಡೂ ಮಾದರಿಗಳು ಬೇರೆ ಬೇರೆ ಪ್ರಮಾಣದಲ್ಲಿ ಈಗ ಜಾರಿಯಲ್ಲಿವೆ. ಹೇಗೇ ಇರಲಿ. ಎರಡೂ ಮಾದರಿಯ ಶಾಲೆಗಳಲ್ಲಿ ಕಲಿಕೆ ನಡೆಯುವುದು ಕನ್ನಡದಲ್ಲಿ. (ತಾಂಡಾದ ಪಾಲಕರು ಆಯ್ಕೆಯಿಂದ ತಮ್ಮ ಮಕ್ಕಳನ್ನು ಖಾಸಗಿ ಶಾಲೆಗಳಲ್ಲಿ ದಾಖಲು ಮಾಡಿದ್ದರೆ ಅಲ್ಲಿ ಇಂಗ್ಲಿಶ್ ನುಡಿಯಲ್ಲಿ ಕಲಿಕೆ ನಡೆಯುತ್ತಿರಬಹುದು) ಹೇಗಿದ್ದರೂ ಮಕ್ಕಳು ತಮ್ಮ ಲಂಬಾಣಿ ನುಡಿಯ ಕಸುವಿನ ಜೊತೆಗೆ ಕನ್ನಡವನ್ನೂ ಕಲಿಯುವುದು ಅನಿವಾರ್ಯ.

ಒಂದು ವೇಳೆ ಲಂಬಾಣಿ ನುಡಿ ಆ ಸಮುದಾಯದ ಗುರುತು ಮತ್ತು ಆ ನುಡಿಯ ಮೂಲಕವೇ ಕಲಿಕೆ ನಡೆಯಬೇಕು ಎಂದು ತಿಳಿದು ಆ ದಿಕ್ಕಿನಲ್ಲಿ ಹೆಜ್ಜೆ ಇಟ್ಟರೆ ಏನಾಗುತ್ತದೆ. ಲಿಪಿಯಿಲ್ಲದ ಮತ್ತು ಬಳಕೆಯ ಹಲವು ವಲಯಗಳಲ್ಲಿ ಈಗ ಇಲ್ಲದಿರುವ ಲಂಬಾಣಿ ನುಡಿಯನ್ನು 'ಸನ್ನದ್ಧ'ಗೊಳಿಸಬೇಕಾಗುತ್ತದೆ. ಈ ಕೆಲಸವನ್ನೂ ಈಗ ಮಾಡಲಾಗುತ್ತಿದೆ. ಆಕರ ಸಾಮಗ್ರಿಗಳನ್ನು ಸಿದ್ಧ ಮಾಡಲಾಗುತ್ತಿದೆ. ಹೀಗೆ 'ಸನ್ನದ್ಧ'ಗೊಂಡ ಲಂಬಾಣಿ ನುಡಿಯನ್ನು ಶಾಲೆಗಳಲ್ಲಿ ಲಂಬಾಣಿ ಮಕ್ಕಳಿಗೆ ಒದಗಿಸಿದರೆ ಆಗ ಆ ಮಕ್ಕಳು ಆ ನುಡಿಯನ್ನು ಕಲಿಕೆಯ ಮಾಧ್ಯಮವನ್ನಾಗಿ ಬಳಸಲೂ ಬಹುದು. ಅದರೆ ವಸ್ತು ಸ್ಥಿತಿ ಈ ಸನ್ನಿವೇಶ ಯಶಸ್ವಿಯಾಗಲು ಅನುವು ಮಾಡಿಕೊಡುವುದಿಲ್ಲ. ಲಂಬಾಣಿ ಸಮುದಾಯ ಮುಖ್ಯಧಾರೆಯೊಡನೆ ಹೆಜ್ಜೆ ಇಡಬೇಕಾದರೆ ತನ್ನ 'ಗುರುತಿಗೆ' ಅಂಟಿಕೊಳ್ಳಲು ಅವಕಾಶಗಳು ದೊರೆಯುವುದಿಲ್ಲ. ಬಹು ಬೇಗ ತಮ್ಮ ನುಡಿಯ ಬಳಕೆಯ ವಲಯಗಳನ್ನು ಮಿತಗೊಳಿಸಿಕೊಂಡು ಬಹುಮಟ್ಟಿಗೆ ಕನ್ನಡ ಇಲ್ಲವೇ ಇಂಗ್ಲಿಶ್ ನುಡಿಗಳಿಗೆ ತೆರೆದುಕೊಳ್ಳಬೇಕಾಗುತ್ತದೆ. ಹೀಗಾಗಿ ನುಡಿ ಬಹುಳತೆ ಎನ್ನುವುದನ್ನು ಯಾವ ಸಂದರ್ಭದಲ್ಲಿ ಹೇಗೆ ನೋಡಬೇಕು ಮತ್ತು ನಿರ್ವಹಿಸಬೇಕು ಎನ್ನುವುದು ಬಲು ಎಚ್ಚರದಿಂದ ವಿವರಿಸಿಕೊಳ್ಳಬೇಕಾದ ಸಂಗತಿಯಾಗಿದೆ.

ನುಡಿ ಅಳಿವಿನ ಕಾರಣಗಳ ಬಗೆಗೆ

ನುಡಿಯರಿಗರು ನುಡಿಗಳ ಅಳಿವಿಗೆ ಚಿಂತೆ ಪಡುವುದಕ್ಕೆ ಬೇರೆ ಇನ್ನೂ ಕಾರಣಗಳಿದ್ದರೂ ಈ ಮೇಲೆ ಹೇಳಿದ ಮೂರು ಕಾರಣಗಳಲ್ಲಿ ಮೂರನೆಯದನ್ನು ಈಗಾಗಲೇ ಕೊಂಚ ವಿವರವಾಗಿ ಗಮನಿಸಿದ್ದೇವೆ. ಹಾಗೆ ನೋಡಿದರೆ ನುಡಿಗಳ ಅಳಿವು ಜೀವ ಸಹಜವಾದ ಪ್ರಕ್ರಿಯೆ ಎಂದು ತಿಳಿಯುವ ನುಡಿಯರಿಗರೂ ಇದ್ದಾರೆ. ಯಾವುದೇ ಜೀವಂತ ವ್ಯವಸ್ಥೆಗೂ ಹುಟ್ಟು ಇರುವಂತೆ ಸಾವೂ ಇರುತ್ತದೆ. ನುಡಿಯೂ ಒಂದು ಜೀವಂತ ವ್ಯವಸ್ಥೆ. ಅದಕ್ಕೆ ಹುಟ್ಟು ಇರುವಂತೆ ಅಳಿವೂ ಇರುವುದು ಸಹಜ. ಅದಕ್ಕಾಗಿ ಚಿಂತಿತರಾಗುವ ಅಗತ್ಯವಿಲ್ಲ ಎನ್ನುವವರಿದ್ದಾರೆ. ಈ ನಿಟ್ಟಿನ ಚಿಂತನೆಗಳನ್ನು ಒಪ್ಪದ ನುಡಿಯರಿಗರು ನುಡಿಗಳ ಅಳಿವು ಸಹಜ ಪ್ರಕ್ರಿಯೆಯಾಗಿರದೆ ಮಾನವ ನಿರ್ಮಿತವಾದ ಕಾರಣಗಳಿಂದ ನಡೆಯುತ್ತಿದೆ ಎಂಬುದನ್ನು ಬೆರಳು ಮಾಡಿ ತೋರಿಸುತ್ತಾರೆ. ಅಂದರೆ ನುಡಿಗಳ ಅಳಿವನ್ನು ಸಾವು ಎನ್ನುವುದಕ್ಕಿಂತ ಹತ್ಯೆ ಎಂದು ಹೇಳುತ್ತಾರೆ. **ನುಡಿಗಳ ಹತ್ಯೆ** (ಲಿಂಗ್ವಿಸೈಡ್– ಇದು ಜಿನೊಸೈಡ್ ಎಂಬ ಜನಾಂಗ ಹತ್ಯೆಯನ್ನು ಸೂಚಿಸುವ ಪದದ ಮಾದರಿಯಲ್ಲಿ ರೂಪುಗೊಂಡ ಪದ) ಎನ್ನುವ ಮಾತು ಬಳಕೆಯಲ್ಲಿದೆ. ಮಾನವ ಸಮುದಾಯಗಳ ನಡುವೆ ನಡೆಯುತ್ತಿರುವ ತಿಕ್ಕಾಟದಲ್ಲಿ ಬಲವುಳ್ಳ ಸಮುದಾಯಗಳು ಬಲಹೀನ ಸಮುದಾಯಗಳ ಚಹರೆಗಳನ್ನು ಕಳೆಯುವ ಕೆಲಸದಲ್ಲಿ ತೊಡಗಿವೆ. 'ಸಮುದಾಯವೊಂದನ್ನು ನಿರ್ನಾಮ ಮಾಡಬೇಕೆಂದರೆ ಆ ಸಮುದಾಯದ ನುಡಿಯನ್ನು ನಾಶ ಮಾಡು' ಎಂಬ ಸೂತ್ರವನ್ನು ಅವಲಂಬಿಸಿ ಲೋಕದಲ್ಲಿ ನುಡಿಗಳ ಕತ್ತನ್ನು

ಹಿಸುಕಲಾಗುತ್ತಿದೆ ಎಂಬುದು ನುಡಿಯರಿಗರ ನಿಲುವು. ಹೀಗೆ ನುಡಿಗಳು ಅಳಿದು ಹೋಗುವಂತೆ ಮಾಡುವ ಕಾರ್ಯ ಯೋಜನೆಗಳು ನಡೆಯುತ್ತಿಲ್ಲವೆಂದು ಹೇಳಲಾಗದು.ಇಂತಹ ಪ್ರಯತ್ನಗಳು ನುಡಿಗಳ ಚಹರೆಯನ್ನು ಇಲ್ಲವಾಗಿಸುವ ಮುಖ್ಯ ಗುರಿಯನ್ನು ಹೊಂದಿರಬಹುದು ಇಲ್ಲವೇ ಬೇರೆ ಯಾವುದೋ ಒಂದು 'ಪ್ರಗತಿಪರ' ಮತ್ತು 'ಜನಪರ' ಯೋಜನೆಗಳನ್ನು ಜಾರಿಗೊಳಿಸುವಾಗ ನುಡಿಗಳು ಅಳಿದುಹೋಗಬಹುದು. ಹೀಗೆ ಅಳಿದು ಹೋಗುವಿಕೆ ಎಷ್ಟೋ ವೇಳೆ ಆ ನುಡಿಯನ್ನಾಡುವ ಸಮುದಾಯದ ಪ್ರಜ್ಞಾಸ್ತರಕ್ಕೆ ತಟ್ಟದೆಯೂ ಹೋಗಬಹುದು. ತಮ್ಮ ನುಡಿ ಕಳೆದು ಹೋಗುತ್ತಿದೆ ಮತ್ತು ತಾವು ಬೇರೆ ನುಡಿಗೆ ಅಧೀನರಾಗುತ್ತಿದ್ದೇವೆ ಎಂಬುದು ಅವರ ಅರಿವಿಗೆ ಬಾರದೆಯೂ ಹೋಗಬಹುದು.

ನುಡಿಯನ್ನಾಡುವ ಸಮುದಾಯದ ಅಳಿವಿನೊಡನೆ ಆ ಸಮುದಾಯದ ನುಡಿಗಳೂ ಅಳಿದು ಹೋಗುವ ಸನ್ನಿವೇಶವನ್ನು ಗಮನಿಸೋಣ. ಇಂತಹ ಸನ್ನಿವೇಶಗಳು ಚರಿತ್ರೆಯಲ್ಲಿ ಕಾಣಸಿಗುತ್ತವೆ. ಸಮುದಾಯಗಳನ್ನು ಅಳಿಸಿಹಾಕುವ ಇಂತಹ ಪ್ರಸಂಗಗಳಲ್ಲಿ ನುಡಿಗಳ ಅಳಿವು ಎಂಬುದು ಆ ಕ್ರಿಯೆಯ ಮುಖ್ಯ ಗುರಿಯಾಗಿರುವುದಿಲ್ಲ. ಜನಾಂಗಗಳನ್ನು ಅಳಿಸಿ ಹಾಕುವ, ಅವುಗಳ ಚಹರೆಯನ್ನು ಇಲ್ಲವಾಗಿಸುವ ಮುಖ್ಯ ಗುರಿಯ ಸಾಧನೆಗೆ ನುಡಿಗಳ ಅಳಿವು ಒಂದು ಪರಿಕರವಾಗಿ ಬರುತ್ತದೆ. ಇಂತಹ ಕಡೆಗಳಲ್ಲಿ ನುಡಿಗಳ ಅಳಿವನ್ನು ತಡೆದರೆ ಆ ನುಡಿಗಳನ್ನು ಆಡುತ್ತಿರುವ ಸಮುದಾಯಗಳಿಗೆ ಇರುವ ಅಪಾಯವನ್ನು ಇಲ್ಲವಾಗಿಸಿದಂತೆ ಆಗುವುದಿಲ್ಲ. ಅಂಚಿನ ಸಮುದಾಯಗಳ ನುಡಿಗಳನ್ನು ಕಾಪಿಡುವ ಯತ್ನವನ್ನು ನಡೆಸುತ್ತಾ ಹೋಗುತ್ತಿರುವಾಗಲೇ ಆ ಸಮುದಾಯಗಳಿಗೆ ಇರುವ ಬದುಕುವ ಅವಕಾಶಗಳನ್ನು ಕಡಿಮೆ ಮಾಡುತ್ತಾ ಹೋದರೆ ಆಗ ನುಡಿಗಳನ್ನು ಕಾಯ್ದುಕೊಳ್ಳುವ ಯತ್ನಗಳಿಗೆ ನೈತಿಕವಾಗಿ ಯಾವ ಸಮರ್ಥನೆಯೂ ಇಲ್ಲದಂತಾಗುತ್ತದೆ.

ನುಡಿ ಸಮುದಾಯಗಳು ಭೌಗೋಲಿಕವಾಗಿ ನೆರೆಹೊರೆಯಲ್ಲಿರುವಾಗ ಆ ಸಮುದಾಯಗಳ ನಡುವೆ ನಡೆಯುವ ನುಡಿ ವ್ಯಾಪಾರದ ಬಗೆ ಒಂದು ರೀತಿಯಲ್ಲಿರುತ್ತದೆ. ಆದರೆ ಆ ಸಮುದಾಯಗಳ ನಡುವೆ ಅಧಿಕಾರ-ಅಧೀನತೆಯ ಸನ್ನಿವೇಶ ರೂಪುಗೊಂಡಿದ್ದರೆ ಆಗ ಅವುಗಳ ನಡುವೆ ನಡೆಯುವ ನುಡಿ ವ್ಯಾಪಾರ ಇನ್ನೊಂದು ಬಗೆಯದು. ಇಂತಹ ಕಡೆಗಳಲ್ಲಿ ನುಡಿಗಳ ನಡುವೆಯೂ ಅಧಿಕಾರ-ಅಧೀನತೆಯ ಸಂಬಂಧ ನಿರ್ಮಾಣವಾಗುತ್ತದೆ. ಅಧೀನತೆಯ ನೆಲೆಯಲ್ಲಿರುವ ನುಡಿಯ ಬಳಕೆಯು ನಿಯಂತ್ರಿತವಾಗುತ್ತಾ ಹೋಗುತ್ತದೆ. ಈ ಪ್ರಕ್ರಿಯೆಯಲ್ಲಿ ಅಧೀನತೆಯ ನುಡಿಯನ್ನಾಡುವವರು ನಿಡುಗಾಲದಲ್ಲಿ ತಮ್ಮ ನುಡಿಯಲ್ಲಿ ಅಗಾಧ ಪ್ರಮಾಣದ ಬದಲಾವಣೆಗಳನ್ನು ಮಾಡಿಕೊಳ್ಳುವುದುಂಟು. ಕೆಲವೊಮ್ಮೆ ಈ ಬದಲಾದ ನುಡಿ ಅದರ ಮೂಲ ಸ್ವರೂಪವನ್ನು ಪೂರ್ಣವಾಗಿ ಬಿಟ್ಟುಕೊಟ್ಟಂತೆ ತೋರುವುದು. ಮುಂದೆ ಈ ಬರಹದಲ್ಲೇ ಈ ಪ್ರಕ್ರಿಯೆಯನ್ನು ನುಡಿ ಪಲ್ಲಟ ಎಂದು ಪರಿಗಣಿಸಿ ಚರ್ಚಿಸಲಾಗುತ್ತದೆ. ನುಡಿ ಪಲ್ಲಟವನ್ನು ನುಡಿಗಳ ಅಳಿವಿನ ಚೌಕಟ್ಟಿನಲ್ಲಿ ಹೇಗೆ ವಿವರಿಸಿಕೊಳ್ಳಬಹುದು ಎಂಬುದನ್ನು ಗಮನಿಸಲಾಗುತ್ತದೆ.

ಕೆಲವೊಮ್ಮೆ ಒಂದೇ ಭೌಗೋಳಿಕ ಪ್ರದೇಶದ ಒಳಗೇ ಎರಡು ನುಡಿ ಸಮುದಾಯಗಳು ಇರುವುದುಂಟು. ಆಗಲೂ ನುಡಿಗಳ ನಡುವೆ ಅಧಿಕಾರ-ಅಧೀನತೆಯ ನೆಲೆಗಳು ಏರ್ಪಡುತ್ತವೆ. ಇಂತಹ ಪ್ರಸಂಗಗಳಲ್ಲಿ ನುಡಿಗಳ ಹತ್ಯೆ ಎಂಬುದು ಸಂಭವಿಸುವ ಸಾಧ್ಯತೆ ಹೆಚ್ಚು. ಇತಿಹಾಸದಲ್ಲಿ ಇದಕ್ಕೆ ಹಲವಾರು ಉದಾಹರಣೆಗಳು ದೊರೆಯುತ್ತವೆ. ರಾಷ್ಟ್ರೀಯತೆಯನ್ನು ನೆಲೆಗೊಳಿಸುವ ಪ್ರಯತ್ನ; ನುಡಿಗಳಲ್ಲಿ ಏಕರೂಪತೆಯನ್ನು ತರಬೇಕೆಂಬ ಚಿಂತನೆಯಿಂದ ರೂಪುಗೊಂಡ ಯೋಜನೆಗಳು; ಅಲ್ಪ ಸಂಖ್ಯಾತ ಸಮುದಾಯಗಳು ಎದುರಿಸುವ ಅಧೀರತೆ ಇವೆಲ್ಲವೂ ಬಿಡಿಬಿಡಿಯಾಗಿ ಇಲ್ಲವೇ ಒಟ್ಟಾಗಿ ನುಡಿಗಳನ್ನು ಇಲ್ಲವಾಗಿಸುವ ಕ್ರಿಯೆಗೆ ಚಾಲನೆ ನೀಡುತ್ತವೆ. ರಾಷ್ಟ್ರೀಯತೆಯನ್ನು ಒಂದು ಅತಿರೇಕದಲ್ಲಿ ವ್ಯಾಖ್ಯಾನಿಸುವ ಅಧಿಕಾರ ಕೇಂದ್ರಗಳು ಒಂದು ರಾಷ್ಟ್ರ-ಒಂದು ನುಡಿ ಎನ್ನುವ ನಿಯಮವನ್ನು ಜಾರಿಗೆ ತರಲು ಯೋಜಿಸುತ್ತವೆ. ಆಗ ಚಿಕ್ಕ ಪುಟ್ಟ ಸಮುದಾಯಗಳು ತಮ್ಮ ನುಡಿಯನ್ನು ಕಳೆದುಕೊಳ್ಳುವ ಇಲ್ಲವೇ ತಮ್ಮ ನುಡಿಯ ಬಳಕೆಯನ್ನು ಕಡಿಮೆ ಮಾಡಿಕೊಳ್ಳಬೇಕಾದ ಅಪಾಯ ಎದುರಾಗುತ್ತದೆ.

ಆದರೆ ಹಾಗಿಲ್ಲದೆ ನಿಸರ್ಗದ ಹಲವು ವ್ಯಾಪಾರಗಳಿಂದಾಗಿಯೂ ಸಮುದಾಯಗಳು ನಾಶವಾಗಿ ಹೋಗುತ್ತವೆ. ಹಲವು ವಿಕೋಪಗಳಿಂದಾಗಿ ಜನವಸತಿಗಳು ಇಲ್ಲವಾಗುತ್ತವೆ. ಚಂಡಮಾರುತಗಳು, ನಿಡುಗಾಲ ನೆಲೆಯೂರಿದ ಬರಗಾಲಗಳು, ಚಿಕಿತ್ಸೆ ದೊರೆಯದ ಸಾಂಕ್ರಾಮಿಕ ರೋಗಗಳು ಸಮುದಾಯಗಳನ್ನು ಬುಡಸಮೇತ ಇಲ್ಲವಾಗಿಸುವುದುಂಟು. ಆಗ ಆ ಸಮುದಾಯಗಳೊಡನೆ ಅವುಗಳ ನುಡಿಗಳು ಇಲ್ಲವಾಗುತ್ತವೆ.ಅಲ್ಲದೆ ಆರ್ಥಿಕ, ಸಾಮಾಜಿಕ, ರಾಜಕೀಯ ಕಾರಣಗಳಿಂದಾಗಿ ಸಂಭವಿಸುವ ವಲಸೆಗಳು ಹಲವಾರು ಸಮುದಾಯಗಳ ಚಹರೆಯನ್ನೇ ಅಳಿಸಿ ಹಾಕುವುದುಂಟು. ಇದಲ್ಲದೆ ಇತರ ಸಮುದಾಯಗಳೊಡನೆ ಯಾವ ಸಂಪರ್ಕವೂ ಇಲ್ಲದೆ ಬದುಕುತ್ತಿರುವ ಬುಡಕಟ್ಟುಗಳಿಗೆ ಇಂತಹ ಅಪಾಯಗಳು ಎದುರಾಗುತ್ತವೆ. ಮಾನವ ಶಾಸ್ತ್ರಜ್ಞರು ಬುಡಕಟ್ಟುಗಳ ಜೀವನ ಕ್ರಮವನ್ನು ಅಧ್ಯಯನ ಮಾಡಿ ಕೆಲವು ಸಂಗತಿಗಳನ್ನು ಕಂಡುಕೊಂಡಿದ್ದಾರೆ. ಕೆಲವು ಬುಡಕಟ್ಟುಗಳು ನೈಸರ್ಗಿಕವಾಗಿಯೇ ಇತರ ಬುಡಕಟ್ಟುಗಳಿಂದ ದೂರವೇ ಉಳಿಯ ಬೇಕಾಗಿರುತ್ತದೆ. ಫೆಸಿಫಿಕ್ ಸಾಗರದಲ್ಲಿ (ಆಸ್ಟ್ರೇಲಿಯಾ ಖಂಡದ ನೈರುತ್ಯ ಭಾಗದಲ್ಲಿ) ನೂರಾರು ಇಂತಹ ಬುಡಕಟ್ಟುಗಳಿವೆ. ಹೊರ ಜಗತ್ತಿನ ಸಂಪರ್ಕ ಇಲ್ಲದಿರುವುದು; ಬುಡಕಟ್ಟಿನೊಳಗೇ ನಡೆಯುವ ಮದುವೆಗಳು(ಎಂಡೊಗಮಿ); ಬುಡಕಟ್ಟುಗಳ ನಡುವೆ ತಲೆ ಎತ್ತುವ ವಿವಾದಗಳು ಮುಂತಾದ ಕಾರಣಗಳಿಂದ ಎಷ್ಟೋ ಸಮುದಾಯಗಳು ಅಳಿವಿನ ಅಂಚಿಗೆ ಬರುತ್ತವೆ. ಆಗ ಅವುಗಳ ನುಡಿಗಳೂ ಅಳಿಯುತ್ತವೆ.

ನುಡಿಗಳು ಅಳಿದಾಗ ಏನಾಗುತ್ತದೆ?

ಇದೇನೇ ಇರಲಿ. ನುಡಿಗಳು ಏಕೆ ಅಳಿಯುತ್ತವೆ ಮತ್ತು ಯಾವಾಗ ಅಳಿಯುತ್ತವೆ ಎಂಬುದನ್ನು ಚರ್ಚಿಸುವುದು ಈ ಬರಹದ ಮುಖ್ಯ ಗುರಿಯಲ್ಲ. ಹಾಗೆ ನುಡಿಗಳು

ಅಳಿದಾಗ ಏನಾಗುತ್ತದೆ ಎಂಬುದನ್ನು ಮಾತ್ರ ಮುಖ್ಯವಾಗಿ ನಾವು ಈ ಬರಹದ ಈ ಭಾಗದಲ್ಲಿ ಗಮನಿಸುತ್ತಿದ್ದೇವೆ. ನುಡಿಯ ಅಳಿವಿನ ಬಗೆಗೆ ಚಿಂತಿಸುವ ನುಡಿಯರಿಗರು ಯಾವ ಕಾರಣಗಳಿಂದ ಆತಂಕಿತರಾಗಿದ್ದಾರೆ ಎಂಬುದನ್ನು ಈಗಾಗಲೇ ಮೇಲೆ ಗಮನಿಸಿದ್ದೇವೆ. ಇವುಗಳಲ್ಲಿ ಮೊದಲನೆಯದು ನುಡಿಯರಿಗರ ಅಧ್ಯಯನಕ್ಕೆ ಸಾಮಗ್ರಿಗಳು ಇಲ್ಲವಾಗುತ್ತವೆ ಎಂಬ ಮಾತು. ಈ ನಿಲುವಿನ ಹಿಂದೆ ಇರುವ ಆತಂಕವನ್ನು ಕೊಂಚ ಬದಿಗೆ ಸರಿಸಬಹುದು. ಹೀಗೆ ಬದಿಗೆ ಸರಿಸಲು ಕಾರಣಗಳಿವೆ

ಅ) ನುಡಿಗಳ ರಚನೆಯ ವೈಶಿಷ್ಟ್ಯಗಳ ತಿಳಿವು ನುಡಿಯರಿಗರಿಗೆ ಏಕೆ ಬೇಕು? ಜಗತ್ತಿನಲ್ಲಿರುವ ನುಡಿಗಳ ರಚನೆಯಲ್ಲಿ ಇರುವ ಮಾದರಿಗಳನ್ನು ಹುಡುಕುತ್ತಿರುವ ನುಡಿಯರಿಗರು ಇದ್ದಾರೆ. ಇವರು ಈವರೆಗೆ ತಮಗೆ ಕಂಡಿರುವ ಮಾದರಿಗಳಲ್ಲಿ ಇರುವುದಕ್ಕಿಂತ ಬೇರೆಯದೇ ಆದ ರಾಚನಿಕ ವೈಶಿಷ್ಟ್ಯಗಳಿರುವ ಬೇರೆ ಯಾವುದಾದರೂ ನುಡಿಯು ಇರಬಹುದೇ ಎಂದು ಹುಡುಕುತ್ತಿರುತ್ತಾರೆ. ಇದು ಸಸ್ಯ ಮತ್ತು ಪ್ರಾಣಿಗಳ ರಾಚನಿಕ ಮಾದರಿಗಳನ್ನು ಹುಡುಕುತ್ತಿರುವವರ ಬಗೆ. ಒಂದೋ ಹೊಸ ಮಾದರಿಯೊಂದು ಇದೆಯೋ ಎಂಬುದರ ಹುಡುಕಾಟ ಇಲ್ಲವೇ ಇರುವ ಮಾದರಿಗಳನ್ನು ಸಮರ್ಥಿಸುವ ಇನ್ನೊಂದು ನಿದರ್ಶನದ ಹುಡುಕಾಟ. ಈ ಹುಡುಕಾಟದಿಂದ ನುಡಿಗಳ ಅಂತಸ್ಥ ರಚನೆಯ ಬಗೆಗೆ ನಮ್ಮ ತಿಳಿವಳಿಕೆ ಬದಲಾಗುವ, ಹೆಚ್ಚಾಗುವ ಸಾಧ್ಯತೆಗಳು ಕಡಿಮೆ. ಅಂತಸ್ಥ ರಚನೆಯ ನಿಟ್ಟಿನಲ್ಲಿ ಎಲ್ಲ ನುಡಿಗಳು ಸಮಾನ ಸ್ಥಿತಿಯಲ್ಲಿವೆ ಎನ್ನುವುದನ್ನು ಈಗಾಗಲೇ ವಿವರಿಸಿಕೊಂಡಿದ್ದೇವೆ. ಹಾಗಾಗಿ ಈ ಆತಂಕವನ್ನು ಬದಿಗಿರಿಸಬಹುದು.

ಆ) ಇನ್ನೊಂದು ಕಾರಣದಿಂದಾಗಿಯೂ ಈ ಆತಂಕವನ್ನು ತೀವ್ರವಾಗಿ ಪರಿಗಣಿಸಬೇಕಿಲ್ಲ. ಏಕೆಂದರೆ ಈಗ ಇರುವ ಸಾವಿರಾರು ನುಡಿಗಳನ್ನು, ಅವುಗಳ ರಚನೆಗಳನ್ನು ಅರಿಯಲು ತುದಿಗಾಲಿನಲ್ಲಿ ನಿಂತಿರುವ ನುಡಿಯರಿಗರನ್ನು ಹುಡುಕಿ ತೆಗೆಯಬೇಕಿದೆ. ಅಂದರೆ ಇರುವ ನುಡಿಗಳನ್ನು ಅರಿಯಲು ಬಿಡುವಿಲ್ಲದವರು ಮುಂದೆಂದೋ ಇಲ್ಲವಾಗುವ ನುಡಿಗಳ ಚಿಂತೆಯಲ್ಲಿ ಆತಂಕ ಪಡುವುದು ಅಷ್ಟೇನೂ ಸಹಜ ಎನಿಸುವುದಿಲ್ಲ. ಅಲ್ಲದೆ ಹೊರಗಿನಿಂದ ನುಡಿಗಳನ್ನು ನೋಡುವ ಅಧ್ಯಯನಕಾರರ ದೃಷ್ಟಿಯಲ್ಲೇ ಒಂದು ಕೊರತೆ ಇದೆ. ಈ ನಿಟ್ಟಿನ ಅಧ್ಯಯನಗಳು ತಾವು ಅಧ್ಯಯನ ಮಾಡುತ್ತಿರುವ ನುಡಿಯನ್ನು ಒಂದು 'ವಸ್ತು' ಎಂದು ಪರಿಗಣಿಸುತ್ತವೆ. ಆ ನುಡಿಗೂ ಅದನ್ನಾಡುವ ಜನ ಸಮುದಾಯಕ್ಕೂ ಇರುವ ನಂಟನ್ನು ಮತ್ತು ಆ ನುಡಿ ಸಮುದಾಯ ಇಂತಹ ಅಧ್ಯಯನ ನಡೆಯುತ್ತಿರುವ ಸಂದರ್ಭದಲ್ಲಿ ಅನುಭವಿಸುತ್ತಿರುವ ತಾಕಲಾಟವನ್ನು ಗಣನೆಗೆ ತೆಗೆದುಕೊಳ್ಳುವುದಿಲ್ಲ. ಆದ್ದರಿಂದ ಮಾನವ ನುಡಿಗಳ ವೈವಿಧ್ಯಗಳ ಅಧ್ಯಯನಕ್ಕಾಗಿ ನುಡಿಗಳು ಉಳಿಯಬೇಕೆನ್ನುವ ನಿಲುವಿನ ಹಿಂದೆ ನೈತಿಕ ಒತ್ತಾಯಗಳು ಇರುವಂತೆ ತೋರುವುದಿಲ್ಲ.

ನುಡಿಗಳ ಅಳಿವಿನೊಡನೆ ಲೋಕವು ಮಹತ್ವದ ಸಂಗತಿಗಳನ್ನು ಕಳೆದುಕೊಳ್ಳಲಿದೆ ಎನ್ನುವ ಎರಡನೆಯ ಕಾರಣವನ್ನು ಮುಂದುಮಾಡಿ ಹಲವರು ಚರ್ಚೆಯನ್ನು

ಬೆಳೆಸುತ್ತಿದ್ದಾರೆ. ನುಡಿಗಳ ಅಳಿವಿನೊಡನೆ ಆ ನುಡಿಗಳನ್ನಾಡುತ್ತಿದ್ದ ಸಮುದಾಯದ ಲೋಕದೃಷ್ಟಿ, ಸಾಂಸ್ಕೃತಿಕ ನೆನಪು ಮತ್ತು ಆ ಸಮುದಾಯದ್ದೇ ಆದ ತಿಳಿವಳಿಕೆ ಇಲ್ಲವಾಗುತ್ತದೆ; ಇದು ಇಡೀ ಮಾನವ ಜನಾಂಗಕ್ಕೇ ಆಗುವ ನಷ್ಟ ಎನ್ನುವುದು ಈ ಚಿಂತನೆಯ ತಿರುಳು.ಈ ನೆಲೆಯನ್ನು ಕುರಿತ ಚರ್ಚೆಯನ್ನು ಮುಂದೆ ಬೆಳೆಸಲಾಗಿದೆ.

ಮೂರನೆಯ ಕಾರಣ ನುಡಿ ವೈವಿಧ್ಯ ಮತ್ತು ಜೀವ ವೈವಿಧ್ಯಗಳ ನಡುವೆ ಇರುವ ನಂಟನ್ನು ಕಾಯ್ದುಕೊಳ್ಳಬೇಕೆಂದು ಹೇಳುತ್ತದೆ. ಈ ಕಾರಣವನ್ನು ಕುರಿತ ಚರ್ಚೆಗೆ ಈಗಾಗಲೇ ಹೇಳಿದ ಮಾತುಗಳಿಗೆ ಕೆಲವು ಹೆಚ್ಚಿನ ವಿವರಗಳನ್ನು ಈಗ ಸೇರಿಸೋಣ. ಹಾಗೆ ನೋಡಿದರೆ ಇದನ್ನು ಒಂದು ಕಾರಣ ಎನ್ನುವುದಕ್ಕಿಂತ ಇದು ಪರಿಸ್ಥಿತಿಯನ್ನು ಕುರಿತ ಒಂದು ವಿವರಣೆ ಎಂದು ಮಾತ್ರ ಗಮನಿಸಬೇಕಾಗುತ್ತದೆ. ಏಕೆಂದರೆ ಜೀವ ವೈವಿಧ್ಯಕ್ಕೂ ನುಡಿ ವೈವಿಧ್ಯಕ್ಕೂ ಇರುವ ನಂಟು ಯಾವ ಬಗೆಯದು ಎಂಬ ಪ್ರಶ್ನೆಯನ್ನು ಕೇಳಿಕೊಳ್ಳೋಣ. ಇವೆರಡೂ ಸಹಜೀವನ ನಡೆಸುತ್ತಿವೆ ಎಂಬುದು ಒಂದು ವಿವರಣೆ. ಯಾವುದು ಯಾವುದಕ್ಕೆ ಕಾರಣವಾಗಿದೆ ಎಂಬುದನ್ನು ಇಂತಹ ಸಂದರ್ಭದಲ್ಲಿ ಗುರುತಿಸಲು ಆಗುವುದಿಲ್ಲ. ಚಲನಶೀಲವಲ್ಲದ ನೂರಾರು ನುಡಿಗಳನ್ನಾಡುತ್ತಿದ್ದ ಸಮುದಾಯಗಳು ತಮ್ಮ ಬದುಕಿನ ಲಯಗಳನ್ನು ಕಾಯ್ದುಕೊಳ್ಳಲು ನೆಲೆನಿಂತ ಭೂಪ್ರದೇಶಗಳಲ್ಲಿ ಜೀವ ವೈವಿಧ್ಯ ಉಂಟಾಯಿತೋ? ಇಲ್ಲವೇ ಜೀವ ವೈವಿಧ್ಯವಿದ್ದ ಭೂ ಪ್ರದೇಶದಲ್ಲಿ ಸಮುದಾಯಗಳು ಅಧಿಕ ಸಂಖ್ಯೆಯಲ್ಲಿ ನೆಲೆ ನಿಂತದ್ದರಿಂದ ನುಡಿ ವೈವಿಧ್ಯವು ಅಲ್ಲಿ ಹೆಚ್ಚು ಕಾಣಿಸುವುದಕ್ಕೆ ಕಾರಣವಾಯಿತೋ? ಈ ಪ್ರಶ್ನೆಗಳಿಗೆ ಉತ್ತರ ನೀಡುವುದು ಕಷ್ಟ.ಆದರೆ ಈ ವಲಯಗಳಲ್ಲಿ ಒಂದಕ್ಕೆ ಕುಂದು ಉಂಟಾದರೆ ಇನ್ನೊಂದಕ್ಕೂ ಧಕ್ಕೆಯಾಗುತ್ತದೆ ಎಂಬುದನ್ನು ತೋರಿಸಿಕೊಡುವ ಅಧ್ಯಯನಗಳು ನಡೆದಂತಿಲ್ಲ. ಈ ಎರಡು ವೈವಿಧ್ಯಗಳನ್ನೂ ಕಾಯ್ದುಕೊಳ್ಳಬೇಕೆಂಬ ಗುರಿಯನ್ನು ಇರಿಸಿಕೊಂಡ ಯತ್ನಗಳು ಬೇರೆ ಬೇರೆಯಾಗಿ ನಡೆಯುತ್ತಿವೆ ಎಂಬುದಂತೂ ದಿಟ. ಆದರೆ ಒಂದು ವಲಯ ಇನ್ನೊಂದನ್ನು ಅವಲಂಬಿಸಿದೆ ಎಂಬುದನ್ನು ನಿಗದಿಯಾಗಿ ಹೇಳಿದಂತಿಲ್ಲ. ಜೀವ ವೈವಿಧ್ಯಕ್ಕೆ ಧಕ್ಕೆಯಾದರೆ ಆ ಪ್ರದೇಶದಲ್ಲಿ ನೆಲೆಸಿದ ಸಮುದಾಯಗಳ ಬದುಕು ದುರ್ಭರವಾಗುತ್ತದೆ ಎಂಬುದು ದಿಟವಾದರೂ ಅದರಿಂದಾಗಿ ಅವುಗಳು ಬಳಸುತ್ತಿರುವ ನುಡಿಗಳ ಮೇಲೆ ಯಾವ ಪರಿಣಾಮ ಉಂಟಾಗುವುದು ಎಂಬುದನ್ನು ಗೊತ್ತು ಮಾಡಬೇಕಾಗಿದೆ. ಹಾಗೆಯೇ ಒಂದು ವೇಳೆ ಯಾವುದೋ ಕಾರಣಗಳಿಂದಾಗಿ ನುಡಿ ವೈವಿಧ್ಯಗಳಿರುವ ಪ್ರದೇಶಗಳಲ್ಲಿ ನುಡಿಗಳು ಅಳಿಯುವಂತಾದರೆ ಅದರಿಂದ ಅಲ್ಲಿನ ಜೀವ ವೈವಿಧ್ಯವೂ ಅಳಿಯುತ್ತದೆಯೇ? ಇದೂ ಕೂಡ ಅಧ್ಯಯನಗಳಿಂದ ಖಚಿತವಾದ ಉತ್ತರವನ್ನು ಕಂಡುಕೊಳ್ಳಬೇಕಾದ ಪ್ರಶ್ನೆಯಾಗಿದೆ. ಈ ವಿವರಗಳ ಸಾರಾಂಶವಿಷ್ಟೆ: ನುಡಿ ವೈವಿಧ್ಯ ಮತ್ತು ಜೀವ ವೈವಿಧ್ಯಗಳು ಜೊತೆ ಜೊತೆಯಾಗಿ ಇವೆ ಎಂದ ಮಾತ್ರಕ್ಕೆ ಅವೆರಡರ ನಡುವೆ ಬಿಡಿಸಲಾಗದ ನಂಟು ಇದೆ ಎನ್ನುವುದು ನೆಲೆಗೊಳ್ಳುವುದಿಲ್ಲ. ಅಲ್ಲದೆ ಒಂದರಲ್ಲಿ ಆಗುವ ವ್ಯತ್ಯಾಸಗಳು ಇನ್ನೊಂದರ ಮೇಲೂ ಉಂಟಾಗುತ್ತದೆ ಎಂಬುದನ್ನು ಸಾಧಿಸಿ ತೋರಿಸಲು ಆಗುವುದಿಲ್ಲ.

ನುಡಿ ವೈವಿಧ್ಯವನ್ನು ಕಾಯ್ದುಕೊಳ್ಳುವುದು ಏಕೆ ಅಗತ್ಯ ಎಂಬ ವಾದಕ್ಕಿರುವ ಇನ್ನೊಂದು ಮುಖವನ್ನೂ ನಾವಿಲ್ಲಿ ನೋಡಬೇಕು. ಅಪಾರ ಜೀವ ವೈವಿಧ್ಯವುಳ್ಳ ಪ್ರದೇಶಗಳನ್ನು ಅಭಯಾರಣ್ಯಗಳನ್ನಾಗಿ, ರಕ್ಷಿತ ಪ್ರದೇಶಗಳನ್ನಾಗಿ ಮಾಡುವ ಮೂಲಕ ಪರೋಕ್ಷವಾಗಿ ನುಡಿ ವೈವಿಧ್ಯವನ್ನೂ ಕಾಯ್ದುಕೊಳ್ಳಬಹುದೆಂದು ವಾದಿಸಲಾಗುತ್ತದೆ. ಆದರೆ ನಾಗರಿಕ ಸಮಾಜಗಳಲ್ಲಿ ನುಡಿ ವೈವಿಧ್ಯಗಳನ್ನು ರಾಜಕೀಯ ಕಾರಣಗಳಿಗಾಗಿ ಇಲ್ಲವಾಗಿಸುವ ಯತ್ನಗಳೇ ಕಾಣುತ್ತವೆ. ದೊಡ್ಡ ದೊಡ್ಡ ಪ್ರಭುತ್ವಗಳು ತಮ್ಮ ಅಧಿಕಾರದ ವ್ಯಾಪ್ತಿಯಲ್ಲಿ ಇರುವ ನುಡಿ ವೈವಿಧ್ಯವು ತಮ್ಮ ಅಧಿಕಾರದ ಚಾಲನೆಗೆ ಅಡ್ಡಿ ಎಂದೇ ತಿಳಿಯುತ್ತವೆ. ಪ್ರಗತಿಯನ್ನು ಕುರಿತ ಚಿಂತನೆಗಳಲ್ಲಿ ಕೆಲವು ಮಾದರಿಗಳು ನುಡಿ ವೈವಿಧ್ಯವು ಸರಾಗವಾದ ಪ್ರಗತಿಗೆ ಅಡ್ಡಿಯನ್ನು, ತಡೆಯನ್ನು ಉಂಟು ಮಾಡುತ್ತದೆ ಎಂದು ಪ್ರತಿಪಾದಿಸುತ್ತವೆ. ಇಂಡಿಯಾ, ಆಫ್ರಿಕಾ ಖಂಡ ಮತ್ತು ದಕ್ಷಿಣ ಅಮೆರಿಕಾ ಖಂಡದ ಕೆಲವು ದೇಶಗಳು ಸಾಕಷ್ಟು 'ಪ್ರಗತಿ' ಹೊಂದದೇ ಇರಲು ಅವುಗಳಲ್ಲಿರುವ ಹೆಚ್ಚು ಸಂಖ್ಯೆಯ ನುಡಿಗಳೇ ಕಾರಣವೆಂದು ತೋರಿಸುವ ಯತ್ನಗಳು ನಡೆದಿವೆ. ರಾಲ್ಫ್ ಡಬ್ಲ್ಯೂ ಫಸೋಲ್ಡ್ ಎಂಬ ನುಡಿಯರಿಮೆಗಾರ ತನ್ನ ಅಧ್ಯಯನಗಳಲ್ಲಿ ಪರುಗ್ವೆ ದೇಶದಲ್ಲಿ (ದಕ್ಷಿಣ ಅಮೆರಿಕಾ ಖಂಡದ ಒಂದು ದೇಶ) ಬಹು ಸಂಖ್ಯಾತ ಜನರ ನುಡಿಯಾದ ಗುರಾನಿ ಮತ್ತು ಸ್ಪ್ಯಾನಿಶ್ (ಆಡಳಿತ ನುಡಿ, ವಸಾಹತುಗಾರರ ನುಡಿ) ಇವುಗಳ ನಡುವಣ ತಿಕ್ಕಾಟದಿಂದ ಉಂಟಾಗಿರುವ ಸನ್ನಿವೇಶವೇ ದೇಶದ ಪ್ರಗತಿಗೆ ಅಡ್ಡಗಾಲಾಗಿದೆ ಎಂಬ ನಿಲುವನ್ನು ಮಂಡಿಸುತ್ತಾನೆ. ಇಂಡಿಯಾದ ಬಹು ನುಡಿಗಳ ಸನ್ನಿವೇಶವೇ ಇಲ್ಲಿಯೂ ಪ್ರಗತಿಗೆ ಅಡ್ಡಗಾಲು ಎನ್ನುವುದು ಫಸೋಲ್ಡ್ ಮತ್ತಿತರ ನುಡಿಯರಿಗರ ನಿಲುವು. ಹೆಚ್ಚು ಒಪ್ಪಿತವಾದ ಪ್ರಗತಿಯ ಇಲ್ಲವೇ ಅಭಿವೃದ್ಧಿಯ ಮಾದರಿಗಳು, ನುಡಿಗಳ ವೈವಿಧ್ಯವು ಅಭಿವೃದ್ಧಿಯ ವೇಗ ಮತ್ತು ಪ್ರಸಾರಗಳನ್ನು ಕುಗ್ಗಿಸುತ್ತವೆ ಎಂದು ವಾದಿಸುತ್ತವೆ. ಇದನ್ನು ಆಯಾ ನಾಡುಗಳ ಹಲವು ಕಲಿತವರೂ ಒಪ್ಪುತ್ತಾರೆ; ಅದನ್ನೇ ಪ್ರತಿಪಾದಿಸುತ್ತಾರೆ. ಇಂತಹ ಕಡೆಗಳಲ್ಲಿ ಈ ವೈವಿಧ್ಯವನ್ನು ಕಡಿಮೆ ಮಾಡುವ ಕಡೆಗೆ ಯತ್ನಗಳು ಯಾವ ಹಿಂಜರಿಕೆಯೂ ಇಲ್ಲದೆ ನಡೆಯುತ್ತವೆ. ನಾಡಿನ ಪ್ರಗತಿಗೂ ನುಡಿಗಳ ಬಹುತ್ವಕ್ಕೂ ನೇರವಾದ ನಂಟು ಇಲ್ಲ. ಒಂದು ವೇಳೆ ನುಡಿಗಳ ಬಹುಳತೆಯು ನಾಡಿನ ಪ್ರಗತಿಗೆ ಅಡ್ಡಿ ಎನ್ನುವ ವಾದವನ್ನು ಒಪ್ಪುವುದಾದರೆ ಜೀವ ವೈವಿಧ್ಯವುಳ್ಳ ಪ್ರದೇಶಗಳ ನುಡಿ ವೈವಿಧ್ಯವನ್ನು ಕಾಯ್ದುಕೊಳ್ಳಬೇಕೆಂಬ ತರ್ಕವನ್ನು ಒಪ್ಪುವುದು ಕಷ್ಟ. ಏಕೆಂದರೆ ಅಂತಹ ಪ್ರದೇಶಗಳು ಮಾನವ ಪ್ರಗತಿಯ ಮಾನದಂಡದಲ್ಲಿ ಬಹಳ ಹಿಂದುಳಿದಿವೆ. ಅಂದರೆ ಅವುಗಳ ಹಿಂದುಳಿದಿರುವಿಕೆಗೆ ನುಡಿಗಳ ಬಹುತ್ವವೇ ಕಾರಣವೆಂದಾಯ್ತು. ಹಾಗಾಗಿ ಆ ಪ್ರದೇಶಗಳ ಮಾನವ ಪ್ರಗತಿಯ ಸೂಚ್ಯಂಕ ಹೆಚ್ಚಬೇಕಾದರೆ ನುಡಿಗಳ ವೈವಿಧ್ಯವನ್ನು ಕಾಯ್ದುಕೊಳ್ಳುವ ಅಗತ್ಯವಿಲ್ಲ ಎಂಬ ವಾದವನ್ನು ಹೂಡಬೇಕಾಗುತ್ತದೆ. ಒಟ್ಟಾರೆ ನುಡಿಗಳ ಬಹುಳತೆಗೂ ನಾಡಿನ ಪ್ರಗತಿಗೂ ವಿಲೋಮ ನಂಟನ್ನು ಕಟ್ಟುವುದು ಸರಿಯಾದುದಲ್ಲ. (ನಾಡಿನ ಪ್ರಗತಿ ಹೆಚ್ಚಾಗಲು ಆ ನಾಡಿನಲ್ಲಿ ನುಡಿಗಳು ಕಡಿಮೆ ಇರಬೇಕು; ಒಂದು ವೇಳೆ ಅಲ್ಲಿ ನುಡಿಗಳು ಹೆಚ್ಚಿದ್ದರೆ ನಾಡಿನ ಪ್ರಗತಿ ಕಡಿಮೆಯಾಗುತ್ತದೆ ಎನ್ನುವುದು ವಿಲೋಮ ನಂಟಿನ ನೆಲೆ)

ನುಡಿ ವೈವಿಧ್ಯವನ್ನು ಕಾಯ್ದುಕೊಳ್ಳುವ ಬಯಕೆಯು ಪ್ರವೃತ್ತವಾಗುವ ಈ ಎರಡೂ ಪರಸ್ಪರ ವಿರುದ್ಧವಾದ ಬಗೆಗಳನ್ನು ಎಚ್ಚರದಿಂದ ಪರಿಗಣಿಸುವ ಅಗತ್ಯವಿದೆ.

ನುಡಿಯು ಸಾಂಸ್ಕೃತಿಕ ಬಂಡವಾಳವೇ?

ನುಡಿಯನ್ನು ಒಂದು ಸಮುದಾಯದ ಸಂಪನ್ಮೂಲ ಎಂದು ತಿಳಿಯುವುದುಂಟು. ಇನ್ನೂ ಮುಂದುವರೆದು ನುಡಿಯನ್ನು ಆ ಸಮುದಾಯದ ಸಾಂಸ್ಕೃತಿಕ ಬಂಡವಾಳ ಎನ್ನುವುದೂ ಉಂಟು. ಬಂಡವಾಳದ ಪರಿಭಾಷೆಯ ಬಳಕೆ ಕುತೂಹಲಕರವಾಗಿದೆ. ಬಂಡವಾಳದ ಹುಟ್ಟು, ಬೆಳವಣಿಗೆ, ಅದರ ಬಳಕೆ ಮುಂತಾದ ಸಂಗತಿಗಳನ್ನು ಹೊರತು ಪಡಿಸಿ ಕೇವಲ ಪದವನ್ನಾಗಿ ಮಾತ್ರ ಇಲ್ಲಿ ಬಳಸಬೇಕೆಂಬುದು ಅದನ್ನು ಬಳಸಿದವರ ಉದ್ದೇಶವಿರಲಾರದು. ಸಮುದಾಯವು ನುಡಿಯನ್ನು ತನ್ನ ದಿನನಿತ್ಯದ ವ್ಯವಹಾರಗಳಿಗಾಗಿ ಮಾತ್ರವಲ್ಲದೆ ತನ್ನ ಅಭಿವೃದ್ಧಿಯ ಸಾಧನವಾಗಿಯೂ ಬಳಸುತ್ತದೆ ಎಂದಾದರೆ ಆಗ ನುಡಿಯನ್ನು ಸಮುದಾಯದ ಸಾಂಸ್ಕೃತಿಕ ಬಂಡವಾಳ ಎನ್ನಬಹುದು. ಇದು ನಿಜವಾಗುವುದು ಅಧಿಕಾರ ಸಂಬಂಧದಲ್ಲಿ ಮೇಲುಗೈ ಪಡೆದ ಸಮುದಾಯಗಳ ವಿಷಯದಲ್ಲಿ ಮಾತ್ರ. ಉದಾಹರಣೆಗೆ ಇಂಗ್ಲಿಶ್ ನುಡಿಯನ್ನು ಮೊದಲ ನುಡಿಯನ್ನಾಗಿ ಪಡೆದ ಸಮುದಾಯವು ವಸಾಹತು ಆಳ್ವಿಕೆಯ ಮೂಲಕ ಮತ್ತು ಮಾರುಕಟ್ಟೆಯ ಪ್ರಭಾವದ ಮೂಲಕ ಜಗತ್ತಿನ ಹಲವು ಸಮಾಜಗಳ ಮೇಲೆ ಪ್ರಭಾವ ಬೀರುವುದು ಸಾಧ್ಯವಾಗಿದೆ. ಇಂಗ್ಲಿಶ್ ನುಡಿ ಹೀಗೆ ಆ ಸಮುದಾಯಕ್ಕೆ ಒಂದು ಬಂಡವಾಳವಾಗಿ ಕೆಲಸ ಮಾಡುತ್ತಿದೆ. ಈ ಮಾತು ಅಧಿಕಾರ ಸಂಬಂಧಗಳಲ್ಲಿ ಅಧೀನತೆಯ ಇಲ್ಲವೇ ಅನುಯಾಯಿಯ ನೆಲೆಯಲ್ಲಿರುವ ನುಡಿ ಸಮುದಾಯಗಳಿಗೆ ಹೊಂದುವ ಮಾತಾಗಲಾರದು. ಇದಕ್ಕೆ ನೂರಾರು ಉದಾಹರಣೆಗಳು ನಮ್ಮೆದುರು ಇವೆ. ಅಧಿಕಾರದ ನೆಲೆಯಲ್ಲಿರುವ ನುಡಿಗಳು ಆ ನುಡಿಗಳನ್ನಾಡುವ ಸಮುದಾಯಗಳಿಗೆ ಹೆಚ್ಚಿನ ಅವಕಾಶಗಳನ್ನು ಒದಗಿಸುತ್ತವೆ. ಅಧಿಕಾರವಿಲ್ಲದ ನುಡಿಗಳು ಅವುಗಳನ್ನಾಡುವ ಸಮುದಾಯಗಳಿಗೆ ಈ ಬಗೆಯ ಅವಕಾಶಗಳನ್ನು ಒದಗಿಸಲಾರವು. ಹಾಗಾಗಿ ನುಡಿಯು ಸಮುದಾಯದ ಸಾಂಸ್ಕೃತಿಕ ಬಂಡವಾಳ ಎನ್ನುವುದು ಒಂದು ಸಾಪೇಕ್ಷ ನೆಲೆ. ಅಂದರೆ ಅದನ್ನು ಯಾವ ಸಮುದಾಯ ಬಂಡವಾಳವನ್ನಾಗಿ ಬಳಸಿಕೊಳ್ಳುವ ಅವಕಾಶ ಪಡೆದಿದೆ ಎನ್ನುವುದು ಮುಖ್ಯವಾಗುತ್ತದೆ. ಎಲ್ಲ ಸಮುದಾಯಗಳಿಗೂ ಅದನ್ನು ಬಳಸುವ ಅವಕಾಶ ಒದಗದು.

ನಮ್ಮ ಈ ಚರ್ಚೆಗೆ ಈ ಮೇಲಿನ ವಿವರಣೆಯನ್ನು ಎಳೆದು ತರುತ್ತಿರುವುದಕ್ಕೆ ಕಾರಣಗಳಿವೆ. ಅಳಿಯುತ್ತಿರುವ ನುಡಿಗಳು ಈಗಾಗಲೇ ಅಧಿಕಾರದ ಸಂಬಂಧದಿಂದ ಹೊರಗೆ ಬಂದಿರುವಂತವು. ಆ ನುಡಿಗಳನ್ನು ಆಡುವ ಸಮುದಾಯಗಳು ಸಾಮಾಜಿಕ–ಆರ್ಥಿಕ ನೆಲೆಯಲ್ಲಿ ಪೈಪೋಟಿಯನ್ನು ಮಾಡಲಾರದ ಸ್ಥಿತಿಯಲ್ಲಿರುತ್ತವೆ. ಅವುಗಳ ನುಡಿ ಆ ಸಮುದಾಯಗಳ ಸಾಂಸ್ಕೃತಿಕ ಬಂಡವಾಳ ಎನ್ನುವುದು ಒಂದು ಕಟಕಿಯೇ

ಸರಿ. ಏಕೆಂದರೆ ಆ ಬಂಡವಾಳವನ್ನು ಆ ಸಮುದಾಯಗಳು ಚಲನಶೀಲಗೊಳಿಸಲಾರವು. ಆ ಬಂಡವಾಳ ಆ ಸಮುದಾಯಗಳ ಗುರುತು ಎನ್ನುತ್ತೇವೆ. ಆದರೆ ಹಾಗೆ ಆ ಗುರುತನ್ನು ಸಮುದಾಯಗಳೇ ಒಪ್ಪುವ, ನಂಬುವ ಸ್ಥಿತಿಯಲ್ಲಿ ಇಲ್ಲ. ನುಡಿಯನ್ನು ಸಾಂಸ್ಕೃತಿಕ ಬಂಡವಾಳವನ್ನಾಗಿಸಿಕೊಂಡು ಅದನ್ನು ಚಲನಶೀಲಗೊಳಿಸಬಲ್ಲ ಸ್ಥಿತಿಯಲ್ಲಿರುವ ಸಮುದಾಯಗಳಿಗೆ ಸದಾ ಅಧೀನವಾಗಿರುವ ವಿಪರ್ಯಾಸದ ಸ್ಥಿತಿಗೆ ಬಳಕೆ ಕುಸಿಯುತ್ತಿರುವ ನುಡಿಗಳನ್ನಾಡುವ ಸಮುದಾಯಗಳು ತಲುಪಿವೆ. ಈ ಸಮುದಾಯಗಳ ಅಧಿಕಾರ ಸಂಬಂಧದಲ್ಲಿ ಬದಲಾವಣೆ ತರದೇ ಕೇವಲ ಅವುಗಳ ನುಡಿಗಳನ್ನು ಕಾಪಾಡುವ ಯತ್ನಗಳು ನಿರುಪಯುಕ್ತವೇ ಸರಿ.

ಒಟ್ಟಾರೆಯಾಗಿ ಇಷ್ಟು ಹೇಳಬಹುದು: ನುಡಿ ಸಮುದಾಯಗಳ ಬದುಕನ್ನು ಕಾಪಿಡುವ ಯತ್ನಗಳನ್ನು ಮಾಡದೆ, ತಕ್ಕ ಕಾರ್ಯಯೋಜನೆಗಳನ್ನು ರೂಪಿಸಿ ಜಾರಿಗೆ ಕೊಡದೆ ಅವುಗಳು ಬಳಸುತ್ತಿರುವ ನುಡಿಗಳ ಬಗೆಗೆ ಕಾಳಜಿಯನ್ನು ತೋರುವುದು ಒಂದು ವಿಪರ್ಯಾಸ. ತೇಜಸ್ವಿಯವರು ಬರೆದ ಕರ್ವಾಲೋ ಕಾದಂಬರಿಯಿಂದ ಒಂದು ರೂಪಕವನ್ನು ಈ ವಿಪರ್ಯಾಸದ ಪ್ರಸಂಗವನ್ನು ಬಿಂಬಿಸಲು ನಿರೂಪಿಸಬಹುದು. ವಿಜ್ಞಾನಿ ಕರ್ವಾಲೋಗೆ, ವಿಕಾಸ ಪಥದಲ್ಲಿ ಹೇಗೋ ಯಾವಾಗಲೋ ಜೀವ ವಿಕಾಸದ ಒಂದು ಹಂತದಲ್ಲಿ ಸ್ಥಗಿತಗೊಂಡ ಹಾರುವ ಓತಿಯ ಬಗೆಗೆ ಆಸಕ್ತಿ; ಪರಿಸರದ ತಿಳಿವಳಿಕೆಯನ್ನು ಅಪಾರ ಪ್ರಮಾಣದಲ್ಲಿ ಪಡೆದಿರುವ ಮಂದಣ್ಣ ಅವರ ಕಣ್ಣಿಗೆ 'ಕಾಣುವುದೇ' ಇಲ್ಲ. ಕಾಣದಿರುವ ಆದರೆ ತಮ್ಮ ತಿಳಿವಳಿಕೆಗೆ ಹೊಸ ಸೇರ್ಪಡೆಯಾಗಬಲ್ಲ ಓತಿಯ ಬೆನ್ನು ಹತ್ತುವ ಕರ್ವಾಲೋ ಅವರ ಬೆನ್ನ ಹಿಂದೆಯೇ ಎಲ್ಲರ ನಿರ್ಲಕ್ಷ್ಯಕ್ಕೆ ಗುರಿಯಾದ ಮಂದಣ್ಣನಿದ್ದಾನೆ. ನುಡಿಯ ಬೆನ್ನು ಹತ್ತುವವರು ನುಡಿಗಳನ್ನು ಆಡುವವರನ್ನು ಮರೆಯುವುದು ಹೀಗೆಯೇ ಅಲ್ಲವೇ?

ಮೊದಲು ಕೆಲವು ಪರಿಕಲ್ಪನೆಗಳನ್ನು ಅರಿಯುವುದು ಅಗತ್ಯವಾಗಿದೆ:

ಈಗ ಮೇಲೆ ನಿರೂಪಿಸಿದಂತೆ ನುಡಿಯ ಅಳಿವನ್ನು ಕುರಿತು ಚಿಂತಿಸುವವರು ನೀಡುವ ಎರಡನೆಯ ಕಾರಣವನ್ನು ಕುರಿತಂತೆ ಚರ್ಚೆಯನ್ನು ಬೆಳೆಸೋಣ. ಇದಕ್ಕೆ ಹಿನ್ನೆಲೆಯಾಗಿ ಇಲ್ಲಿ ಬಳಸಲಾದ ಮೂರು ಪಾರಿಭಾಷಿಕ ಪರಿಕಲ್ಪನೆಗಳನ್ನು ವಿವರಿಸಿಕೊಳ್ಳುವ ಅಗತ್ಯವಿದೆ. **1. ಸಾಂಸ್ಕೃತಿಕ ನೆನಪು 2. ಲೋಕ ದೃಷ್ಟಿ ಮತ್ತು 3. ತಿಳಿವಳಿಕೆ.** ಈ ಮೂರೂ ಸಮುದಾಯವೊಂದು ಬಳಸುವ ನುಡಿಯಲ್ಲಿ ಅಂತರ್ಗತವಾಗಿರುತ್ತವೆ ಎನ್ನುವ ಚಿಂತನೆಯನ್ನು ಅರಿತುಕೊಳ್ಳಲು ಈ ಮೂರೂ ಪರಿಕಲ್ಪನೆಗಳನ್ನು ವಿವರಿಸಿಕೊಳ್ಳಬೇಕಾಗುತ್ತದೆ.

ಸಾಂಸ್ಕೃತಿಕ ನೆನಪು:

ಹೀಗೆಂದರೇನು? ಒಂದು ಸಮುದಾಯ ತಲೆಮಾರಿನಿಂದ ತಲೆಮಾರಿಗೆ ಸಾತತ್ಯವನ್ನು ಕಾಯ್ದುಕೊಳ್ಳಲು ಬಳಸುವ ಪರಿಕರ. ನಂಬಿಕೆಗಳು, ಸಾಮುದಾಯಿಕ ಆಚರಣೆಗಳು,

ಕತೆಗಳು, ಪುರಾಣಗಳು, ನಿಷೇಧಗಳು, ವ್ಯಕ್ತಿಗೆ ವಿಧಿಸುವ ಹೊಣೆಗಾರಿಕೆಗಳು, ನೈತಿಕ ಚೌಕಟ್ಟುಗಳು ಇವೆಲ್ಲವೂ ಸಾಂಸ್ಕೃತಿಕ ನೆನಪುಗಳೆಂದು ಕರೆಸಿಕೊಳ್ಳುತ್ತವೆ. ಪ್ರತಿ ತಲೆಮಾರೂ ಈ ನೆನಪುಗಳನ್ನು ಮುಂದಿನ ತಲೆಮಾರಿಗೆ ದಾಟಿಸುವ ಹೊಣೆಯನ್ನು ಹೊಂದಿರುತ್ತದೆ. ಪಡೆದುಕೊಳ್ಳುವ ತಲೆಮಾರು ಈ ನೆನಪುಗಳ ಜೊತೆಗೆ ತನ್ನ ಬದುಕಿನ ಲಯಗಳನ್ನು ಅಳವಡಿಸಿಕೊಳ್ಳುವುದನ್ನು ಕಲಿಯುತ್ತದೆ.ಇದರೊಡನೆ ಈ ನೆನಪುಗಳನ್ನು ತನ್ನ ಕಾಲಕ್ಕೆ ತಕ್ಕಂತೆ ಮಾರ್ಪಡಿಸಿಕೊಳ್ಳುತ್ತದೆ; ಅಗತ್ಯಕ್ಕೆ ತಕ್ಕಂತೆ ವ್ಯಾಖ್ಯಾನಿಸಿಕೊಳ್ಳುತ್ತದೆ; ಹೊಸ ನೆನಪುಗಳನ್ನು ಸೇರಿಸುತ್ತದೆ. ಹೀಗಾಗಿ ತಲೆಮಾರುಗಳು ದಾಟಿದಂತೆ ಈ ನೆನಪುಗಳ ಗಾತ್ರ ಹೆಚ್ಚಾಗುತ್ತಲೂ ಹೋಗುತ್ತದೆ. ಕೆಲವೊಮ್ಮೆ ಸಮುದಾಯವೇ ತನಗೆ 'ಬೇಡವೆನಿಸಿದ' ನೆನಪುಗಳನ್ನು ತೊರೆಯಲು ಮುಂದಾಗಲೂ ಬಹುದು.

ಈ ಬಗೆಯ ನೆನಪುಗಳನ್ನು ಕುರಿತು ಅಧ್ಯಯನ ಮಾಡಿದವರಲ್ಲಿ ಮುಖ್ಯವಾಗಿ ಎರಡು ಪಂಥಗಳಿಗೆ ಸೇರಿದವರಿದ್ದಾರೆ. ಒಂದು ಪಂಥದವರ ನಿಲುವು ಹೀಗಿದೆ: ಪ್ರತಿಯೊಂದು ತಲೆಮಾರೂ ತನ್ನ ವರ್ತಮಾನವನ್ನು ತನ್ನ ಸಮುದಾಯದ ಸಾಂಸ್ಕೃತಿಕ ನೆನಪುಗಳ ಮೂಲಕ ವಿವರಿಸಿಕೊಳ್ಳುತ್ತದೆ. ಅಂದರೆ ಭೂತಕಾಲವು ವರ್ತಮಾನದ ಸ್ವರೂಪವನ್ನು ನಿರ್ಧರಿಸುತ್ತಿರುತ್ತದೆ; ನಿಯಂತ್ರಿಸುತ್ತಿರುತ್ತದೆ. ಇನ್ನೊಂದು ಪಂಥದವರ ನಿಲುವು: ಪ್ರತಿಯೊಂದು ತಲೆಮಾರೂ ಕೂಡ ತನ್ನ ವರ್ತಮಾನದ ಮೂಲಕ, ಮತ್ತು ವರ್ತಮಾನದ ಅಗತ್ಯಗಳಿಗೆ ತಕ್ಕಂತೆ ತನ್ನ ಸಮುದಾಯದ ಭೂತಕಾಲದ ನೆನಪುಗಳನ್ನು ಗ್ರಹಿಸುತ್ತಿರುತ್ತದೆ. ಇವೆರಡೂ ಪಂಥಗಳ ವಿವರವಾದ ಚರ್ಚೆಗೆ ಇಲ್ಲಿ ಅವಕಾಶವಿಲ್ಲ. ಇವೆರಡು ಪಂಥಗಳೂ ಪರಸ್ಪರ ವಿರುದ್ಧವಾದ ದಿಕ್ಕಿನಲ್ಲಿ ಇರುವಂತೆ ಕಂಡರೂ ಇವೆರಡೂ ನೆಲೆಗಳು ಸಾಂಸ್ಕೃತಿಕ ನೆನಪುಗಳನ್ನು ಒಂದು ಸಿದ್ಧಗೊಂಡ ವಸ್ತು ಎಂದು ತಿಳಿಯದೆ ಅದನ್ನೊಂದು ಪ್ರಕ್ರಿಯೆ ಎಂದು ತಿಳಿದಿವೆ ಎಂಬುದಂತೂ ದಿಟ. ವರ್ತಮಾನಕಾಲದಲ್ಲಿ ಭೂತಕಾಲವನ್ನು ಗ್ರಹಿಸುವಾಗ ಆಗಲೀ ಇಲ್ಲವೇ ಭೂತಕಾಲದ ಮೂಲಕ ವರ್ತಮಾನಕಾಲವನ್ನು ಗ್ರಹಿಸುವಾಗ ಆಗಲೀ ಎರಡೂ ಸಂದರ್ಭದಲ್ಲಿ ಭೂತಕಾಲವನ್ನು 'ರಚಿಸಿ' ಕೊಳ್ಳಬೇಕಾಗುತ್ತದೆ; ಕಟ್ಟಿಕೊಳ್ಳಬೇಕಾಗುತ್ತದೆ. ಅದು ಸಿದ್ಧಗೊಂಡ ವಸ್ತುವಿನ ರೂಪದಲ್ಲಿ ಇರುವುದಿಲ್ಲ. ಇಂತಹ 'ರಚನೆ'ಗಳಿಗೆ ಅಗತ್ಯವಾದ ಆಕರಗಳಲ್ಲಿ ಕೆಲವು ಸ್ಥಗಿತವಾಗಿ ಇರಬಹುದು. ಆದರೆ ಈ ಆಕರಗಳಿಂದ 'ರಚಿಸಿದ' ನೆನಪುಗಳು ಸಿದ್ಧರೂಪದಲ್ಲಿ ಇರುವುದಿಲ್ಲ. ಅದೊಂದು ಪ್ರಕ್ರಿಯೆಯಾಗಿರುತ್ತದೆ. ಹೀಗಾಗಿ ಸಮುದಾಯವೊಂದರ ಸಾಂಸ್ಕೃತಿಕ ನೆನಪುಗಳು ಸದಾ ಚಲನಶೀಲವಾಗಿರುತ್ತವೆ ಎಂದು ತಿಳಿಯುವುದೇ ಸರಿಯಾದ ದಾರಿ.

ಸಾಂಸ್ಕೃತಿಕ ನೆನಪುಗಳನ್ನು ಕುರಿತು ಚರ್ಚಿಸುವಾಗ ಹೆಸರಾಂತ ಮನೋವಿಜ್ಞಾನಿ ಕಾರ್ಲ್ ಯೂಂಗ್‌ನ ವಿಚಾರಗಳನ್ನು ಪರಿಶೀಲಿಸುವ ಅಗತ್ಯವಿದೆ. ಪ್ರತಿ ವ್ಯಕ್ತಿಗೆ ಜಾಗ್ರತ ಪ್ರಜ್ಞೆಯ ಜೊತೆಗೆ ಸುಪ್ತ ಪ್ರಜ್ಞೆಯೊಂದು ಇರುತ್ತದೆಯಷ್ಟೆ. ಇವೆರಡರ ಜೊತೆಗೆ ಸಮಷ್ಟಿ ಪ್ರಜ್ಞೆ ಎಂಬುದೊಂದು ಇರುವುದು ಎನ್ನುವುದನ್ನು ಯೂಂಗ್ ಪ್ರತಿಪಾದಿಸಿದನು. ಸಮಷ್ಟಿ ಪ್ರಜ್ಞೆ ಎನ್ನುವುದು ವ್ಯಕ್ತಿಯ ವರ್ತನೆಗಳ ಮೇಲೆ ಪ್ರಭಾವ ಬೀರುವುದಾದರೂ

ಆ ಪ್ರಜ್ಞೆ ಮಾತ್ರ– ಜಾಗ್ರತ ಮತ್ತು ಸುಪ್ತ ಪ್ರಜ್ಞೆಗಳಂತೆ– ವ್ಯಕ್ತಿಗೆ ಸೀಮಿತವಾದುದಲ್ಲ. ಸಮುದಾಯದ ಸಾಂಸ್ಕೃತಿಕ ನೆನಪು ಎನ್ನುವಾಗ ಅದು ಈ ಸಮಷ್ಟಿ ಪ್ರಜ್ಞೆಯನ್ನೂ ಒಳಗೊಳ್ಳಬೇಕಾಗುತ್ತದೆ. ಆ ಸಮುದಾಯಕ್ಕೇ ವಿಶಿಷ್ಟವಾದ ನೆನಪುಗಳ ಜೊತೆಗೆ ತನಗೆ ದತ್ತವಾಗಿ ಬಂದಿರುವ ಸಮಷ್ಟಿ ಪ್ರಜ್ಞೆಯೂ ಈ ಸಾಂಸ್ಕೃತಿಕ ನೆನಪಿನಲ್ಲಿ ಸೇರುತ್ತವೆ. ಯೂಂಗ್ ಸಮಷ್ಟಿ ಪ್ರಜ್ಞೆ ಎಂಬುದು ಮಾನವ ಜನಾಂಗಕ್ಕೆ ಸಮಾನವಾದುದು ಎನ್ನುವ ನೆಲೆಯವನು. ಅಂದರೆ ಇಡೀ ಮಾನವ ಜನಾಂಗದ ಸದಸ್ಯರೆಲ್ಲರೂ ಈ ಸಮಷ್ಟಿ ಪ್ರಜ್ಞೆಗೆ ಹಕ್ಕುದಾರರು ಮತ್ತು ಹೊಣೆಗಾರರು. ಹಾಗಾಗಿ ಅದನ್ನು ಯಾವುದೋ ಒಂದು ಸಮುದಾಯದ ಮಟ್ಟಿಗೆ ಸೀಮಿತಗೊಳಿಸಲು ಬರುವುದಿಲ್ಲ. ಆದರೆ ಸಮಷ್ಟಿ ಪ್ರಜ್ಞೆಯು ಬಹಿರಂಗವಾಗಿ ಅಭಿವ್ಯಕ್ತವಾಗಲು ನೆರವಾಗುವ ಕೆಲವು ಸಂಗತಿಗಳಿವೆ. ಇವುಗಳನ್ನು ಪುರಾಣ ಪ್ರತೀಕಗಳು (ಆರ್ಕಿಟೈಪ್ಸ್) ಎನ್ನುತ್ತಾರೆ. ಈ ಪ್ರತೀಕಗಳು ಸಮುದಾಯಗಳಿಗೆ ವಿಶಿಷ್ಟವಾದ ರೂಪವನ್ನು ಹೊಂದಿರಬಹುದು. ಆ ಪುರಾಣ ಪ್ರತೀಕಗಳು ಬಿಂಬಿಸುವ ಸಮಷ್ಟಿ ಪ್ರಜ್ಞೆಯ ನೆಲೆ ಎಲ್ಲ ಮಾನವ ಜನಾಂಗಕ್ಕೂ ಒಂದೇ. ಆದರೂ ಅದು ಸಮುದಾಯ ವಿಶಿಷ್ಟವಾದ ಆಕಾರದಲ್ಲಿ ಕಾಣಿಸಿಕೊಳ್ಳಬಹುದು. ಯೂಂಗ್‌ನ ಈ ಚಿಂತನೆಯನ್ನು ಒಪ್ಪುವುದಾದರೆ, ಸಮಷ್ಟಿ ಪ್ರಜ್ಞೆಯೊಡನೆ ಹೆಣೆದುಕೊಂಡ ಸಮುದಾಯದ ನೆನಪುಗಳು ಆ ಸಮುದಾಯಕ್ಕೇ ವಿಶಿಷ್ಟವಾಗಿ ಮತ್ತು ಆ ಸಮುದಾಯಕ್ಕೆ ಮಾತ್ರ ಸೀಮಿತವಾಗಿರುವುದು ಸಾಧ್ಯವಿಲ್ಲ.

ಇನ್ನೊಂದು ಪ್ರಶ್ನೆ ಇಲ್ಲಿ ಪ್ರಸ್ತುತವಾಗುತ್ತದೆ. ಸಮುದಾಯಗಳಿಗೆ ಸಾಂಸ್ಕೃತಿಕ ನೆನಪುಗಳು ಇರುತ್ತವೆ ಎನ್ನುವುದನ್ನು ಒಪ್ಪಿಕೊಳ್ಳೋಣ. ಈ ನೆನಪುಗಳಿಗೂ ಸಮುದಾಯದಲ್ಲಿರುವ ಜನರಿಗೂ ಇರುವ ನಂಟು ಯಾವ ಬಗೆಯದ್ದಾಗಿರುತ್ತದೆ? ಜನರು ಆ ನೆನಪುಗಳಿಗೆ ತಾವು ಹಕ್ಕುದಾರರು ಎಂದು ತಿಳಿಯುತ್ತಾರೋ ಇಲ್ಲವೇ ಆ ನೆನಪುಗಳನ್ನು ತಲೆಮಾರಿನಿಂದ ತಲೆಮಾರಿಗೆ ದಾಟಿಸುವ ಹೊಣೆ ಮಾತ್ರ ತಮ್ಮದು ಎಂದು ತಿಳಿಯುತ್ತಾರೋ? ಇದಲ್ಲದೆ ಆ ಸಮುದಾಯದ ಜನರ ಹಲವು ನೆಲೆಯ ವರ್ತನೆಗಳನ್ನು ಈ ನೆನಪುಗಳು ಪ್ರಭಾವಿಸುತ್ತಿರುತ್ತವೆಯೋ? ಈ ಮೊದಲೇ ಹೇಳಿದಂತೆ ವರ್ತಮಾನಕಾಲ ಮತ್ತು ಭೂತ ಕಾಲಗಳನ್ನು ಸಂಪರ್ಕಿಸುವ ನೆಲೆಯಲ್ಲಿ ಸಮುದಾಯಗಳು ತಮ್ಮ ಸಾಂಸ್ಕೃತಿಕ ನೆನಪುಗಳನ್ನು ಜಾಗ್ರತಗೊಳಿಸಿಕೊಳ್ಳುತ್ತವೆ. ಒಂದು ಉದಾಹರಣೆಯ ಮೂಲಕ ಈ ಸಮಸ್ಯೆಯನ್ನು ತಿಳಿದುಕೊಳ್ಳಲು ಯತ್ನಿಸೋಣ. ಬೇಟೆಯ ಮೂಲಕ ಆಹಾರವನ್ನು ಸಂಪಾದಿಸಿಕೊಳ್ಳುತ್ತಿದ್ದ ಮತ್ತು ಬೇಟೆಯೇ ಪ್ರಧಾನ ಆರ್ಥಿಕ ಚಟುವಟಿಕೆಯಾಗಿದ್ದ ಹಂತದಿಂದ ಸಮುದಾಯವೊಂದು ದಾಟಿ ಬಂದಿದೆ ಎಂದುಕೊಳ್ಳಿ. ಈಗ ಪಶುಪಾಲನೆಯೋ ಕೃಷಿಯೋ ಆ ಸಮುದಾಯದ ಆರ್ಥಿಕ ಚಟುವಟಿಕೆಯಾಗಿದ್ದರೆ ಈಗ ಆ ಸಮುದಾಯದ ಬೇಟೆಯ ಸಂಬಂಧದ ಸಾಂಸ್ಕೃತಿಕ ನೆನಪುಗಳು ಹೇಗೆ ಕಾರ್ಯಪ್ರವೃತ್ತವಾಗುತ್ತವೆ ಎಂಬುದು ಒಂದು ಪ್ರಶ್ನೆ. ಬೇಟೆಯ ನೆನಪು ಒಂದು ಆಚರಣೆಯಾಗಿ ಬದಲಾಗಬಹುದು. ಬೇಟೆಯ ಕೌಶಲಗಳು ಆ ಸಮುದಾಯದ ಆ ಹೊತ್ತಿನ ಆರ್ಥಿಕ ಚಟುವಟಿಕೆಗೆ ಹೊಂದಿಕೊಳ್ಳುವ ಜೀವನ ಕೌಶಲಗಳಾಗಿ ಮರುರೂಪವನ್ನು ಪಡೆಯಬಹುದು.

ಸಾಂಸ್ಕೃತಿಕ ನೆನಪುಗಳು ರೂಪುಗೊಳ್ಳುವುದು ಮತ್ತು ಕ್ರಿಯಾಶೀಲವಾಗುವುದು ಹೇಗಿರುತ್ತದೆ ಎಂಬುದನ್ನು ಅರಿಯಲು ಒಂದು ಉದಾಹರಣೆಯನ್ನು ಗಮನಿಸೋಣ. ಹೆಸರಾಂತ ವನ್ಯಜೀವಿ ಛಾಯಾಗ್ರಾಹಕರಾದ ಕೃಪಾಕರ ಮತ್ತು ಸೇನಾನಿ ಇವರು ಮಧ್ಯ ಕರ್ನಾಟಕದ ಕುರಿಗಾಹಿಗಳ ಜೊತೆಗೆ ಇದ್ದು ಒಂದು ಸಾಕ್ಷ್ಯಚಿತ್ರವನ್ನು ತಯಾರಿಸಿದ್ದಾರೆ. 'ವಾಕಿಂಗ್ ವಿತ್ ವೂಲ್ವ್ಸ್' ಎಂಬುದು ಆ ಚಿತ್ರದ ಹೆಸರು. ಕುರಿಗಾಹಿಗಳು ಮತ್ತು ತೋಳಗಳ ಸಹಜೀವನವನ್ನು ಕುರಿತ ಕೆಲವು ಮುಖ್ಯ ಸಂಗತಿಗಳು ಅಲ್ಲಿ ಬರುತ್ತವೆ. ಹೊರಗಿನಿಂದ ನೋಡುವ ನಮಗೆ, ತೋಳಗಳು ಕುರಿಗಳನ್ನು ಹಾರಿಸಿಕೊಂಡು ಹೋಗುವ ಪ್ರಾಣಿಗಳಾದ್ದರಿಂದ ಅವು ಕುರಿಗಾಹಿಗಳಿಗೆ ಶತ್ರುಗಳು ಎನಿಸುವುದು ಸಹಜ. ಆದರೆ ಕುರಿಗಾಹಿಗಳು ಹಾಗೆ ತಿಳಿಯುವುದಿಲ್ಲ. ಹೀಗೇಕೆ ಎನ್ನುವುದನ್ನು ಗ್ರಹಿಸಲು ನಿರೂಪಕರು ಯತ್ನಿಸಿ ಎಷ್ಟೋ ಸಮಯ ಕಳೆದ ಮೇಲೆ ಆ ಕುರಿಗಾಹಿಗಳ ಹಿರಿಯನೊಬ್ಬನಿಂದ ಒಂದು ಕತೆಯನ್ನು ಕೇಳಿಸಿಕೊಳ್ಳುತ್ತಾರೆ. ಆ ಕತೆಯ ಪ್ರಕಾರ ತೋಳಗಳನ್ನು ಅವರು ತಮ್ಮ ಯಾವುದೋ ತಲೆಮಾರಿನ ದಾಯಾದಿ ಎಂದು ಅವರು ತಿಳಿಯುತ್ತಾರೆ. ಒಂದಾನೊಂದು ಕಾಲದಲ್ಲಿ ಮೂವರು ಅಣ್ಣತಮ್ಮಂದಿರಿರುತ್ತಾರೆ. ಅವರು ಕುರಿಗಾಹಿಗಳು. ತಮ್ಮಲ್ಲಿರುವ ಕುರಿಗಳನ್ನು ತಮ್ಮತಮ್ಮಲ್ಲಿ ಹಂಚಿಕೊಳ್ಳುವ ಸಮಯ ಬಂದಾಗ ಅವುಗಳ ಹಂಚಿಕೆಯಲ್ಲಿ ಇಬ್ಬರು ಒಬ್ಬನಿಗೆ ಅನ್ಯಾಯ ಮಾಡಿರುತ್ತಾರೆ. ಆತ ಕೋಪ ಮಾಡಿಕೊಂಡು ಇವರಿಬ್ಬರಿಗೆ ಸದಾಕಾಲ ನೆಲೆಯಿಲ್ಲದೆ ಕುರಿಗಳನ್ನು ಮೇಯಿಸಿಕೊಂಡು ಸಾಕುತ್ತಾ ಸುತ್ತುತ್ತಿರುವಂತೆ ಶಾಪ ನೀಡಿ ತಾನು ಕಾಡಿಗೆ ಹೋಗಿಬಿಡುತ್ತಾನೆ. ಅಲ್ಲಿಂದ ತೋಳದ ವೇಷದಲ್ಲಿ ಆಗಾಗ ಬಂದು ಇವರಲ್ಲಿದ್ದ ಕುರಿಗಳಲ್ಲಿ ಕೆಲವನ್ನು 'ಅವು ತನ್ನ ಪಾಲಿನವೋ ಎಂಬಂತೆ' ಒಯ್ಯುತ್ತಿರುತ್ತಾನೆ. ಹಿಂದೆ ಅತಿ ಆಸೆಯಿಂದಾಗಿ ತಾವು ಮಾಡಿದ ತಪ್ಪಿಗೆ ದಂಡವೆಂಬಂತೆ ಈಗ ಹಲವು ತಲೆಮಾರು ಕಳೆದರೂ ತೋಳದ ರೂಪದಲ್ಲಿ ಬರುವ ಆ ದಾಯಾದಿಗೆ ತಮ್ಮ 'ಆಸ್ತಿ'ಯಲ್ಲಿ ಪಾಲು ಕೊಡುವುದು, ಈ ಕುರಿಗಾಹಿಗಳಿಗೆ ನ್ಯಾಯಬದ್ಧ ನಡೆ ಎನಿಸುತ್ತದೆ. ಅಲ್ಲದೆ ಆತ ತಮ್ಮ ದಾಯಾದಿ; ರಕ್ತ ಹಂಚಿಕೊಂಡವನು. ಅವನನ್ನು ಕೊಲ್ಲುವುದು ಸರಿಯಾದ ನಡೆ ಎನಿಸುವುದಿಲ್ಲ. ಅವರಿಗೆ ತೋಳಗಳು ಶತ್ರುವೆನಿಸುವುದಿಲ್ಲ. ತಮ್ಮೊಡನೆ ಸದಾ ಇರುವ ತಮ್ಮ ಅಂತರಂಗವನ್ನು ಚುಚ್ಚುತ್ತಿರುವ ಸಹಜೀವಿ ಎನಿಸುತ್ತದೆ.

ಕುರಿಗಾಹಿಗಳು ತೋಳಗಳ ಬಗೆಗೆ ತೋರುವ ನಡಾವಳಿಯನ್ನು 'ಅರ್ಥ' ಮಾಡಿಕೊಳ್ಳಲು ಕಷ್ಟಪಡುತ್ತಿದ್ದ ಸಾಕ್ಷ್ಯಚಿತ್ರಕಾರರಿಗೆ ಆ ಕುರಿಗಾಹಿಗಳಲ್ಲಿ ನೆನಪಾಗಿರುವ ಈ 'ನಿರೂಪಣೆ'ಯನ್ನು ಹೊರತರಲು ತುಂಬಾ ಸಮಯ ಬೇಕಾಗುತ್ತದೆ. ಈ ನಿರೂಪಣೆಯನ್ನು ಸಾಕ್ಷ್ಯಚಿತ್ರಕಾರರು ಹೇಗೆ ವ್ಯಾಖ್ಯಾನಿಸಿಕೊಳ್ಳುತ್ತಾರೆ ಅಥವಾ ನಾವು ಹೇಗೆ ಅರ್ಥ ಮಾಡಿಕೊಳ್ಳುತ್ತೇವೆ ಎನ್ನುವುದು ನನಗೆ ಇಲ್ಲಿ ಮುಖ್ಯವಲ್ಲ. ವನ್ಯಜೀವಿಗಳೊಡನೆ ನಿಡುಗಾಲದಿಂದ ಬದುಕುತ್ತಾ ಬಂದಿರುವ ಹಲವಾರು ಸಮುದಾಯಗಳಲ್ಲಿ ಇಂತಹ ನಿರೂಪಣೆಗಳು ಸಿಗುತ್ತವೆ. ಇವು ಅವರ ನಂಬಿಕೆಯ ಲೋಕ. ಇವುಗಳಿಗೆ ನುಡಿಯ ರೂಪ ಸಿಗುವುದು ಅವರು ಹೊರಗಿನವರೊಡನೆ

ತಮ್ಮ ನಂಬಿಕೆಯನ್ನು ಹಂಚಿಕೊಂಡಾಗ ಮಾತ್ರ. ಆದರೆ ಅವರ ಆ ನಂಬಿಕೆ ಅವರ ಜೀವನ ಕ್ರಮದ ಭಾಗವಾಗಿರುತ್ತದೆ. ಈ ಸಾಕ್ಷ್ಯ ಚಿತ್ರದಲ್ಲೇ ನಾವು ಗಮನಿಸುವಂತೆ ಹೊರಗಿನವರು, ಅಂದರೆ ಸುತ್ತಮುತ್ತಲಿನ ಪ್ರದೇಶದ ರೈತರು ವಿಷವಿರಿಸಿ ತೋಳಗಳನ್ನು ಕೊಲ್ಲುತ್ತಿರುತ್ತಾರೆ. ತೋಳಗಳು ಅವರ ಜಾನುವಾರುಗಳಿಗೆ ಅಪಾಯಕಾರಿ ಎನ್ನುವುದು ಅವರ ಭಾವನೆ. ಅದಕ್ಕಾಗಿ ಆ ತೋಳಗಳನ್ನು ಕೊಲ್ಲುವುದು ಅವರಿಗೆ ತಪ್ಪು ನಡೆ ಎನಿಸುವುದಿಲ್ಲ. ಸಾಕ್ಷ್ಯಚಿತ್ರದಲ್ಲಿ ಒಂದು ಕಡೆ ಹೀಗೆ ವಿಷ ತಿಂದು ಸತ್ತ ತೋಳದ ಮೂಳೆಗಳನ್ನು ಕಂಡ ಕುರಿಗಾಹಿಗಳು ವಿಷಣ್ಣತೆಯನ್ನು ತೋರುತ್ತಾರೆ. ಚಿತ್ರದ ನಿರೂಪಣೆಯಲ್ಲಿ ಈ ಮಾತು ಬರುತ್ತದೆ, ಕ್ಯಾಮೆರಾ ಕೂಡ ಕುರಿಗಾಹಿಯ ಕಣ್ಣಿನಲ್ಲಿ ಮೂಡಿದ ವಿಷಣ್ಣತೆಯನ್ನು ದಾಖಲಿಸುತ್ತದೆ.

ಬದಲಾಗುತ್ತಿರುವ ಪರಿಸರದಲ್ಲಿ ಕುರಿಗಾಹಿಗಳಿಗೆ ಕುರಿ ಮೇಯಿಸಲು ಜಾಗವಿಲ್ಲದಂತಾಗುತ್ತಿದೆ; ತೋಳಗಳಿಗೆ ಅವಿತಿಟ್ಟುಕೊಳ್ಳಲು, ತಮ್ಮ ಮರಿಗಳನ್ನು ಕಾಯ್ದುಕೊಳ್ಳಲು ತಾಣಗಳು ಇಲ್ಲವಾಗುತ್ತಿವೆ. ಹೀಗಿರುವಾಗ ಕುರಿಗಾಹಿಗಳ ನಂಬಿಕೆಯ ಭಾಗವಾಗಿರುವ ಇಂತಹ ನಿರೂಪಣೆಗಳು ಹೊರಗಿನವರಿಗೆ 'ರೋಚಕ'ವಾಗಿ ತೋರುತ್ತವೆ. ಇಲ್ಲವೇ ಕುರಿಗಾಹಿಗಳ ವರ್ತನೆಯನ್ನು ಮತ್ತು ತೋಳಗಳಿಗೆ ದೊರೆಯುತ್ತಿರುವ ರಕ್ಷಣೆಯನ್ನು ತಮ್ಮ ತರ್ಕಗಳಿಗೆ ಹೊಂದಿಸಿ ವಿವರಿಸಲು ನೆರವಾಗುತ್ತದೆ. ಆದರೆ ಕುರಿಗಾಹಿಗಳ ನಂಬಿಕೆಯ ಈ ನಿರೂಪಣೆಗೆ ಬೇಕಾದ ಜೀವನ ಕ್ರಮವೇ ಕುಸಿದು ಹೋಗುತ್ತಿರುವುದು ಕಣ್ಣೆದುರಿಗೆ ಸಂಭವಿಸುತ್ತಿರುತ್ತದೆ. ಸಮುದಾಯದ ನೆನಪುಗಳಿಗೆ ಒಟ್ಟು ಲೋಕ ವಿನ್ಯಾಸದಲ್ಲಿ ಸ್ವತಂತ್ರ ಅಸ್ತಿತ್ವ ಇರುವುದಿಲ್ಲ ಎಂದಾಯ್ತು.

ಲೋಕ ದೃಷ್ಟಿ :

ವ್ಯಕ್ತಿ ಮತ್ತು ಸಮುದಾಯದ ನೆಲೆಗಳಲ್ಲಿ ಲೋಕ ದೃಷ್ಟಿಯನ್ನು ವ್ಯಾಖ್ಯಾನಿಸಲಾಗುತ್ತದೆ. ಇವೆರಡೂ ಒಂದೇ ಆಗಿರುತ್ತವೋ ಇಲ್ಲವೇ ಎರಡೂ ಬೇರೆ ಬೇರೆಯೋ ಎಂಬ ಪ್ರಶ್ನೆಯಿದೆ. ಬೇರೆ ಬೇರೆ ಆಗಿದ್ದರೆ ಅವೆರಡರ ನಡುವೆ ಇರುವ ನಂಟು ಯಾವ ಬಗೆಯದ್ದು ಎಂಬ ಇನ್ನೊಂದು ಪ್ರಶ್ನೆಯೂ ಇದೆ. ಸದ್ಯ ನಾವು ಸಮುದಾಯದ ಲೋಕ ದೃಷ್ಟಿಯನ್ನು ಕುರಿತು ಮಾತ್ರ ಯೋಚಿಸುತ್ತಿದ್ದೇವೆ.

ಲೋಕ ದೃಷ್ಟಿ ಎಂಬ ಮಾತನ್ನು ರೂಪಿಸಿ ಬಳಸಿದವರು ಜರ್ಮನ್ ಚಿಂತಕರು. ಸಮುದಾಯವೊಂದು ತಾನಿರುವ ಲೋಕವನ್ನು ಹೇಗೆ ನೋಡುತ್ತದೆ; ಗ್ರಹಿಸಿ ಅರ್ಥ ಮಾಡಿಕೊಳ್ಳುತ್ತದೆ; ಆ ಕುರಿತು ತನ್ನದೇ ಆದ ನಿಲುವುಗಳನ್ನು ರೂಪಿಸಿಕೊಳ್ಳುತ್ತದೆ ಎಂಬಿತ್ಯಾದಿ ಸಂಗತಿಗಳು ಲೋಕ ದೃಷ್ಟಿ ಎನಿಸಿಕೊಳ್ಳುತ್ತವೆ. ಲೋಕ ದೃಷ್ಟಿಯ ಸ್ವರೂಪವನ್ನು ವಿವರಿಸುವ ನೆಲೆಯಲ್ಲಿ ಸಮಾಜ ಶಾಸ್ತ್ರಜ್ಞರು ಮತ್ತು ನುಡಿಯರಿಗರು ಬೇರೆ ಬೇರೆ ದಿಕ್ಕುಗಳಲ್ಲಿ ಚಲಿಸುತ್ತಾರೆ. ಇವರೆಲ್ಲರ ವಿವರಣೆಗಳಲ್ಲಿರುವ ವ್ಯತ್ಯಾಸಗಳೇನು ಎಂಬ ಗಹನ ಚರ್ಚೆ ಏನೇ ಇರಲಿ, ಮುಖ್ಯವಾಗಿ ಲೋಕ ದೃಷ್ಟಿ ಎಂಬುದು ಹೇಗೆ

ರೂಪುಗೊಳ್ಳುತ್ತದೆ ಮತ್ತು ಸಮುದಾಯದ ಬದುಕಿನೊಡನೆ ಯಾವ ಬಗೆಯ ನಂಟನ್ನು ಹೊಂದುತ್ತದೆ ಎಂಬುದನ್ನು ಪರಿಶೀಲಿಸುವುದು ಅಗತ್ಯವಾಗಿದೆ.

ಸಮುದಾಯಗಳು ತಮ್ಮ ಜೀವನ ಕ್ರಮದಲ್ಲಿ ಎದುರಿಸಿದ ಸಮಸ್ಯೆಗಳಿಗೆ ಕಂಡುಕೊಂಡ ಪರಿಹಾರಗಳಿಂದ ಆ ಸಮುದಾಯದ ಲೋಕ ದೃಷ್ಟಿ ರೂಪುಗೊಳ್ಳುತ್ತಾ ಹೋಗುತ್ತದೆ. ಈ ಪರಿಹಾರಗಳು ಪರಿಷ್ಕೃತವಾಗುತ್ತಾ ಹೋದಂತೆ ಲೋಕ ದೃಷ್ಟಿಯಲ್ಲೂ ಬದಲಾವಣೆಗಳಾಗುತ್ತಲೇ ಹೋಗುತ್ತವೆ. ಲೋಕ ದೃಷ್ಟಿಯಲ್ಲಿ ಆಗುವ ಬದಲಾವಣೆಗಳಲ್ಲಿ ಹೊಸದು ಹಿಂದಿನದನ್ನು ಮರೆಮಾಡುವುದಿಲ್ಲ. ಎಲ್ಲ ಬೆಳವಣಿಗೆಯ ಹಂತಗಳೂ ಪದರ ಪದರಗಳಾಗಿ ಆ ಸಮುದಾಯದ ನೆನಪಿನಲ್ಲಿ ಸಂಗ್ರಹಗೊಂಡಿರುತ್ತವೆ. ಲೋಕ ದೃಷ್ಟಿಯನ್ನು ಅರಿಯ ಹೊರಡುವವರು ಒಂದು ಬಗೆಯಲ್ಲಿ ಪ್ರಾಕ್ತನ ಶಾಸ್ತ್ರಜ್ಞರ ರೀತಿಯಲ್ಲಿ ಕೆಲಸಮಾಡಬೇಕಾಗುತ್ತದೆ. ಅಂದರೆ ಅಗೆಯುತ್ತ ಹೋದಂತೆ ಹುದುಗಿಹೋಗಿರುವ ಕುರುಹುಗಳ ಪದರಗಳು ನೋಡಲು ಸಿಗುತ್ತವೆ. ಈ ಪಳೆಯುಳಿಕೆಗಳ ಮೂಲಕ ಪ್ರಾಕ್ತನ ಶಾಸ್ತ್ರಜ್ಞರು ಪುನಾರಚನೆಯ ಕೆಲಸದಲ್ಲಿ ತೊಡಗುತ್ತಾರೆ. ಲೋಕ ದೃಷ್ಟಿಯ ಅಧ್ಯಯನಕಾರರೂ ಸಮುದಾಯದ ನುಡಿಯಲ್ಲಿ ಮತ್ತು ಅಶಾಬ್ದಿಕ ಆಚರಣೆ ಮತ್ತು ಕಲೆಗಳಲ್ಲಿ ಅಡಕವಾಗಿರುವ ಪದರುಗಳನ್ನು ಹೊರತೆಗೆದು ಅವುಗಳ ಮೂಲಕ ಲೋಕ ದೃಷ್ಟಿಯ ಪುನಾರಚನೆ ಮಾಡಬೇಕಾಗುವುದು.

ಸಮುದಾಯದ ಲೋಕ ದೃಷ್ಟಿಯ ಬೆಳವಣಿಗೆಯನ್ನು ಪರಿಶೀಲಿಸಿದಾಗ ಕಾಣಸಿಗುವ ವಿವಿಧ ಹಂತಗಳಲ್ಲಿ, ಈಗಾಗಲೇ ಹೇಳಿದಂತೆ, ಪರಸ್ಪರ ಪೂರಕ ಬೆಳವಣಿಗೆ ಇರುವಂತೆ ವಿರೋಧಗಳೂ ಇರಲು ಸಾಧ್ಯ. ಹಾಗಾಗಿ ಈ ವಿವಿಧ ನೆಲೆಗಳಲ್ಲಿ ಸಮುದಾಯದ ಅಧಿಕೃತ ಲೋಕ ದೃಷ್ಟಿ ಯಾವುದು ಎಂಬುದನ್ನು ಗುರುತಿಸಲು ಆಗುವುದಿಲ್ಲ. ಸಮುದಾಯದ ಒಳಗೇ ಇರುವವರಿಗೆ ಈ ಲೋಕ ದೃಷ್ಟಿಯ ವಿವಿಧ ನೆಲೆಗಳಲ್ಲಿ ಒಂದು ಸೂತ್ರವನ್ನು ಹುಡುಕುವ ಚೌಕಟ್ಟು ದೊರಕಿರುತ್ತದೆ. ಆದರೆ ಅಧ್ಯಯನ ಮಾಡುವವರಿಗೆ ಈ ನೆಲೆಗಳನ್ನು ಹೊಂದಿಸಿ ಒಂದು ಸೂತ್ರವನ್ನು ಹುಡುಕಲು ಸಾಧ್ಯವಾಗದೆ ಹೋಗುತ್ತದೆ.

ಒಂದು ಉದಾಹರಣೆಯ ಮೂಲಕ ಈ ಸಂದರ್ಭವನ್ನು ಅರಿಯಲು ತೊಡಗೋಣ. ಹಣೆಬರಹವನ್ನು ಕುರಿತ ನಂಬಿಕೆಗಳು ಒಂದು ಸಮುದಾಯದಲ್ಲಿ ಬೇರೂರಿದೆ ಎಂದುಕೊಳ್ಳಿ. ಇದನ್ನು ವಿಧಿಲಿಖಿತವೆಂದು ಕರೆದು ಈ ಹಣೆಬರಹ ವ್ಯಕ್ತಿಯು ಹುಟ್ಟುವಾಗಲೇ ಬ್ರಹ್ಮ ಬರೆದಿರುತ್ತಾನೆ ಎಂದು ನಂಬಿರುವವರುಂಟು. ಇಲ್ಲವೇ ಮಗು ಹುಟ್ಟಿದ ಮೇಲೆ 'ಇದಿಯಮ್ಮ' ಬಂದು ಯಾರೂ ಕಾಣದಂತಿರುವಾಗ ಬರೆದು ಹೋಗುತ್ತಾಳೆ ಎಂದು ನಂಬಿರುವವರೂ ಉಂಟು.ಯಾರೇ ಬರೆದಿರಲಿ ಈ ಬರಹವನ್ನು ಅಳಿಸಲು 'ಹರಿಹರವಿರಿಂಚ್ಯಾದಿ'ಗಳಿಗೂ ಸಾಧ್ಯವಿಲ್ಲ ಎಂದು ನಂಬಲಾಗುತ್ತದೆ. ವ್ಯಕ್ತಿಯ ವರ್ತನೆಗಳನ್ನು ಮತ್ತು ಆ ವರ್ತನೆಗಳ ಪರಿಣಾಮವನ್ನು ಈ ಹಣೆಯ ಬರಹವೇ ನಿಯಂತ್ರಿಸುತ್ತದೆ ಎಂಬಂತೆ ಸಮುದಾಯದ ಜನರು ತಿಳಿದಿರುತ್ತಾರೆ. ಇದೇ ಸಮುದಾಯದಲ್ಲಿ 'ಕರ್ಮ'ವನ್ನು ನಂಬುವ ಬಗೆಯೂ ಇದೆ ಎಂದುಕೊಳ್ಳಿ.

ಕರ್ಮವೆಂಬುದು ಮರುಹುಟ್ಟನ್ನು ನಂಬುತ್ತದೆ. ಅಂದರೆ ಈ ಹುಟ್ಟಿನಲ್ಲಿ ಏನನ್ನು ಅನುಭವಿಸುತ್ತೇವೆಯೋ ಅದು ಹಿಂದಿನ ಹುಟ್ಟುಗಳಲ್ಲಿ ಮಾಡಿದ ಕರ್ಮದ ಫಲಿತವೆಂದು ತಿಳಿಯಲಾಗುತ್ತದೆ. ಈ ಫಲಿತ ಒಳಿತೋ ಕೆಡುಕೋ ಎಂಬುದು ಸಂಚಯಿತ ಕರ್ಮದ ಚಹರೆಯನ್ನು ಅವಲಂಬಿಸಿರುತ್ತದೆ. ಅಷ್ಟೇ ಅಲ್ಲ. ಈ ಹುಟ್ಟಿನಲ್ಲೂ ಈ ಕರ್ಮದ ಲೆಕ್ಕ ಮುಂದುವರೆಯುತ್ತದೆ. ಮುಂದಿನ ಹುಟ್ಟುಗಳ ಮೇಲೆ ಈ ಲೆಕ್ಕ ಪರಿಣಾಮ ಬೀರಲಿದೆ ಎಂದು ವಿವರಿಸಲಾಗುತ್ತದೆ. ಹಣೆಯ ಬರಹ ಮತ್ತು ಕರ್ಮ ಇವೆರಡೂ ಬೇರೆ ಬೇರೆ ಲೋಕ ದೃಷ್ಟಿಗಳು. ಎರಡೂ ಜೊತೆಜೊತೆಗೆ ಒಂದೇ ಸಮುದಾಯದಲ್ಲಿ ಚಾಲನೆಯಲ್ಲಿರಬಹುದು. ಇವೆರಡಕ್ಕೂ ಸಮಾನವಾದ ಅಂಶವೊಂದಿದೆ. ಈ ಲೋಕ ದೃಷ್ಟಿಗಳು ಮನುಷ್ಯರ ವರ್ತನೆಗಳ ಪರಿಣಾಮಗಳಿಗೆ ಅವರು 'ನೇರವಾಗಿ' ಕಾರಣರಲ್ಲ ಎಂದು ಹೇಳುತ್ತವೆ. ಹಣೆಯ ಬರಹವು ಬೇರೆ ಯಾರೋ ಇದನ್ನು ನಿಯಂತ್ರಿಸುತ್ತಾರೆ ಎನ್ನುತ್ತದೆ. ಕರ್ಮದ ನೆಲೆಯು ಹಿಂದಿನ ಹುಟ್ಟುಗಳ ಕಾರ್ಯಸಂಚಯವನ್ನು ಹೊಣೆಯನ್ನಾಗಿ ಮಾಡುತ್ತದೆ. ಅಂದರೆ **ಈಗ** ಮತ್ತು ಇಲ್ಲಿ ಎಂಬುದನ್ನು ಈ ಎರಡೂ ಲೋಕ ದೃಷ್ಟಿಗಳು ಒಪ್ಪುವುದಿಲ್ಲ.

ಇದೇ ಸಮುದಾಯಕ್ಕೆ ಒಂದು ಕಾನೂನು ವ್ಯವಸ್ಥೆ ಇದೆ ಎಂದುಕೊಳ್ಳಿ. ಈ ವ್ಯವಸ್ಥೆಯು ನಿರೂಪಿಸುವ ಅಪರಾಧ ಮತ್ತು ಶಿಕ್ಷೆಯ ವ್ಯಾಖ್ಯಾನವು ಕ್ರಿಯೆಗೆ ವ್ಯಕ್ತಿಯನ್ನೇ ಹೊಣೆಯನ್ನಾಗಿ ಮಾಡುತ್ತದೆ. ಈ ವ್ಯವಸ್ಥೆ ಇಡಿಯಾಗಿ **ಈಗ** ಮತ್ತು ಇಲ್ಲಿ ಎಂಬ ನೆಲೆಯನ್ನೇ ಅವಲಂಬಿಸಿದೆ. ಒಂದು ವೇಳೆ ಆ ಸಮುದಾಯದ ಒಬ್ಬ ವ್ಯಕ್ತಿಯ ನಡವಳಿಕೆಯು ಕಾನೂನು ವ್ಯವಸ್ಥೆಗೆ 'ಸಮ್ಮತವಾದ' ರೀತಿಯಲ್ಲಿ ಇರುವುದಿಲ್ಲ ಎಂದುಕೊಳ್ಳಿ. ಆಗ ಆ ಅಸಮ್ಮತ ನಡೆಗೆ ಆ ವ್ಯಕ್ತಿಯೇ ಹೊಣೆಗಾರನಾಗುತ್ತಾನೆ. ಆ ವ್ಯಕ್ತಿ ಆ ನಡವಳಿಕೆಗೆ ತಕ್ಕ ಪರಿಣಾಮವನ್ನು (ಕಾನೂನಿನ ರೀತ್ಯಾ ಶಿಕ್ಷೆ) ಅನುಭವಿಸಲೇ ಬೇಕು; ಮತ್ತು ಈ ಶಿಕ್ಷೆಯನ್ನು ಎಂದಾದರೂ ಒಂದು ದಿನ ಪಡೆಯುವಂತಿಲ್ಲ; ಅದು ಈಗ ಮತ್ತು ಇಲ್ಲಿಯೇ ಆಗಬೇಕು. ಈ ಮೂರು ಲೋಕ ದೃಷ್ಟಿಗಳೂ ಸಮುದಾಯದಲ್ಲಿ ಇವೆ. ಇವುಗಳಲ್ಲಿ ಮೂರನೆಯದು ಸಮುದಾಯ ಆಯ್ದುಕೊಂಡ ಇಲ್ಲವೇ ಕಟ್ಟಿಕೊಂಡ ಲೋಕ ದೃಷ್ಟಿಯಾಗದೇ ಇರಬಹುದು. ಆದರೆ ಅದನ್ನು ನಂಬಿ ಬದುಕುವ ಅನಿವಾರ್ಯ ಸಮುದಾಯಕ್ಕೆ ಇರುತ್ತದೆ ಎಂಬುದನ್ನು ಅಲ್ಲಗಳೆಯಲು ಸಾಧ್ಯವಿಲ್ಲ.

ಈ ಮೂರೂ ನೆಲೆಗಳೂ ಒಂದೇ ಕಾಲದಲ್ಲಿ ಸಮುದಾಯದ ಬದುಕಿನ ಭಾಗವಾಗಿರುವ ಸಾಧ್ಯತೆಗಳಿಲ್ಲ.ಬೇರೆ ಬೇರೆ ಕಾಲಘಟ್ಟಗಳಲ್ಲಿ ಹಲವು ಸಾಂಸ್ಕೃತಿಕ ಕಾರಣಗಳಿಂದಾಗಿ ಇವು ಸಮುದಾಯದ ಬದುಕಿನೊಳಗೆ ಬಂದು ನೆಲೆ ನಿಂತಿರುತ್ತವೆ. ಇವುಗಳಲ್ಲಿ ಯಾವುದು ಆ ಸಮುದಾಯದ ಅಧಿಕೃತ ಲೋಕ ದೃಷ್ಟಿ ಎಂದು ತಿಳಿಯುವುದು? ಇವು ಒಂದು ಸಂದರ್ಭದಲ್ಲಿ ಒಂದಕ್ಕೊಂದು ಡಿಕ್ಕಿ ಹೊಡೆಯುತ್ತಲೂ ಇರಬಹುದು. ಈ ತಿಕ್ಕಾಟವನ್ನು ಅರಿತುಕೊಳ್ಳಲು ಒಂದು ಉದಾಹರಣೆಯನ್ನು ನೋಡೋಣ.

ಜನ್ನ ಕವಿ ಬರೆದ ಕೃತಿ ಯಶೋಧರ ಚರಿತೆ. ಈ ಕೃತಿಯಲ್ಲಿ ಬರುವ ರಾಜ ಯಶೋಧರ ಜೈನ ಧರ್ಮದ ಅನುಯಾಯಿ. ಹಾಗಾಗಿ ಒಂದು ಬಗೆಯ ಕರ್ಮ

ಸಿದ್ಧಾಂತಕ್ಕೆ ಬದ್ಧನಾದವನು. ಅಂದರೆ ತಪ್ಪು ಮತ್ತು ಅದಕ್ಕೆ ಶಿಕ್ಷೆ ಇವೆರಡೂ ಇದೇ ಜನ್ಮದಲ್ಲೇ ನಡೆಯಬೇಕಿಲ್ಲವೆಂಬ ನಂಬಿಕೆಗೆ ಬದ್ಧನಾದವನು. ಆದರೆ ತನ್ನ ಹೆಂಡತಿ ಅಮೃತಮತಿ ಆನೆಯ ಲಾಯದ ಬದಗನೊಡನೆ ಇರುವುದನ್ನು ಕಂಡಾಗ ಕುಪಿತನಾಗಿ ತಾನೇ ಅವಳನ್ನು ಶಿಕ್ಷಿಸಲು ಕತ್ತಿ ಹಿರಿಯುತ್ತಾನೆ. ಆದರೆ ಆಗ ಅವಳನ್ನು ಕೊಲ್ಲುವುದಿಲ್ಲ. ಈ ಮಾತು ಬದಿಗಿರಿಸಿರಿ. ಆದರೆ ಈಗ ಮಾಡುತ್ತಿರುವ 'ತಪ್ಪಿಗೆ' ಈಗಲೇ ಮತ್ತು ಇಲ್ಲೇ ಶಿಕ್ಷೆ ವಿಧಿಸುವ ರೀತಿಯ ವರ್ತನೆ ಅವನದಾಯಿತು. ಹೀಗೆ ಕೊಲ್ಲಲು ಮುಂದಾಗುವ ಮೂಲಕ ಹಿಂಸೆಯ ಸಂಕಲ್ಪ ಮಾಡಿದ. ಬಳಿಕ ತಾಯಿಯ ನಂಬಿಕೆಯ ಲೋಕಕ್ಕೆ ಬದ್ಧನಾಗಿ ಹಿಟ್ಟಿನ ಕೋಳಿಯ ಬಲಿಕೊಡುವ ಇಚ್ಛೆಯಿಂದ ಹಿಂಸೆಯ ಸಂಕಲ್ಪ ಮಾಡಿದನೆಂದು ಕತೆ ಹೇಳುತ್ತದೆ. ಅದೇನೇ ಇರಲಿ. ಯಶೋಧರನಲ್ಲಿ ಎರಡು ಲೋಕ ದೃಷ್ಟಿಗಳು ತಿಕ್ಕಾಟಕ್ಕೆ ಒಳಗಾದುದಷ್ಟೆ ನಮಗೆ ಇಲ್ಲಿ ಮುಖ್ಯ.

ಈ ಲೋಕ ದೃಷ್ಟಿಗಳು ಹಲವು ಇರುವುದನ್ನು ಕುರಿತ ಉದಾಹರಣೆಯನ್ನು ನೀಡಿದ್ದರ ಉದ್ದೇಶವಿಷ್ಟೆ. ಒಂದು ಸಮುದಾಯಕ್ಕೆ ಒಂದೇ ಲೋಕ ದೃಷ್ಟಿ ಎಂಬುದು ಎಲ್ಲ ಕಡೆಯೂ ಸಲ್ಲುವ ನಿಯಮವಲ್ಲ ಎಂಬುದನ್ನು ಗಮನಿಸಲೆಂದು ಈ ಉದಾಹರಣೆಯನ್ನು ನೀಡಲಾಯಿತು. ಅಲ್ಲದೆ ಈ ಮೊದಲೇ ಹೇಳಿದಂತೆ ಸಮುದಾಯಗಳನ್ನು ಹೊರಗಿನಿಂದ ನೋಡುವವರಿಗೆ ಅವುಗಳ ಲೋಕ ದೃಷ್ಟಿಗಳ ಗೋಜಲು ಕಾಣಬಹುದೇ ಹೊರತು ಆ ಸಮುದಾಯಗಳೇ ತಮ್ಮ ಲೋಕ ದೃಷ್ಟಿಗಳ ನಿರ್ವಹಣೆಯ ಬಗೆಗೆ ರೂಪಿಸಿಕೊಂಡಿರುವ ಅಳವಡಿಕೆಯ ಬಗೆ ಹೊರಗಿನವರಿಗೆ ಗೊತ್ತಾಗುವುದು ಕಷ್ಟ.

ಮುಂದಿನ ಪ್ರಶ್ನೆ ಎಂದರೆ ಸಮುದಾಯದ ಲೋಕ ದೃಷ್ಟಿಗೂ ಆ ಸಮುದಾಯದ ನುಡಿಗೂ ಮತ್ತು ನುಡಿ ಬಳಕೆಗೂ ಇರುವ ನಂಟು ಎಂತಹುದು ಎಂಬುದು. ಸಮದಾಯದ ನುಡಿಯಲ್ಲಿ ಆ ಸಮುದಾಯದ ಲೋಕ ದೃಷ್ಟಿಯ ಸೂಚಕಗಳು ಕಾಣಬಹುದು. ಆದರೆ ಅದು ಸೂಚಕವಾಗಿ ಮಾತ್ರ ಕಾರ್ಯ ನಿರ್ವಹಿಸುತ್ತದೆ. ನುಡಿಯಲ್ಲಿ ಅದರ ರಚನೆಗಳಲ್ಲಿ ಈ ಸೂಚಕಗಳು ಇರುತ್ತವೆ. ಉದಾಹರಣೆಗೆ ನುಡಿಯಲ್ಲಿರುವ ಗಾದೆ ಮಾತುಗಳಲ್ಲಿ, ಹಾಡುಗಳಲ್ಲಿ, ಕತೆಗಳಲ್ಲಿ ಈ ಸೂಚಕಗಳನ್ನು ಹುಡುಕಿ ತೆಗೆಯಬಹುದು. ಅಲ್ಲದೆ ಲೋಕ ದೃಷ್ಟಿಯು ನುಡಿಯಲ್ಲಿ ಅಡಕಗೊಳ್ಳದೆಯೂ ಇರಬಹುದು. ಸಮುದಾಯುದ ಇತರ ಚಟುವಟಿಕೆಗಳಲ್ಲಿಯೂ ಇಂತಹ ಸೂಚಕಗಳಿರುತ್ತವೆ. ಮಕ್ಕಳು, ಹಿರಿಯರು ಆಡುವ ಆಟಗಳಲ್ಲಿ, ಕಾಲಬದ್ಧವಾದ ಆಚರಣೆಗಳಲ್ಲಿ ಕೂಡ ಈ ಸೂಚಕಗಳಿರುತ್ತವೆ. ಈ ಹಿನ್ನೆಲೆಯಲ್ಲಿ ನುಡಿಯ ಅಳಿವಿನೊಡನೆ ಆ ನುಡಿಯನ್ನಾಡುವ ಸಮುದಾಯದ ಲೋಕ ದೃಷ್ಟಿಯೂ ಅಳಿದು ಹೋಗುತ್ತದೆ ಎಂಬ ನಿಲುವನ್ನು ಕೊಂಚ ಎಚ್ಚರಿಕೆಯಿಂದ ಪರಿಶೀಲಿಸಬೇಕಾಗುತ್ತದೆ.ಮುಂದೆ ಈ ಬಗೆಗೆ ಚರ್ಚೆ ಬೆಳೆಸಲಾಗುತ್ತದೆ.

ತಿಳಿವಳಿಕೆ:

ತಿಳಿವಳಿಕೆ ಎಂಬುದಕ್ಕೆ ಸರಳವಾದ ವಿವರಣೆ ಏನು? ನಮಗೆ ಏನು ಗೊತ್ತಿದೆಯೋ ಅದು ನಮ್ಮ ತಿಳಿವು. ಸಮುದಾಯಕ್ಕೂ ಅದರದೇ ಆದ ತಿಳಿವು ಇರುತ್ತದೆ ಎಂಬ ನಂಬಿಕೆಯೊಂದಿದೆ. ಇದು ಸಟೆಯಲ್ಲ. ಸಮುದಾಯವು ತಲೆಮಾರುಗಳಿಂದ ತಲೆಮಾರುಗಳಿಗೆ ಈ ತಿಳಿವನ್ನು ದಾಟಿಸುತ್ತದೆ ಎಂಬುದೂ ದಿಟ. ಸಮುದಾಯಕ್ಕೆ ಈ ತಿಳಿವು ದೊರೆಯುವುದು ಹೇಗೆ ಎಂಬುದನ್ನು ನೋಡೋಣ. ತಾನು ಬದುಕುತ್ತಿರುವ ಪರಿಸರದ ಪರಿಚಯದಿಂದ ಮತ್ತು ಆ ಪರಿಸರ ಒಡ್ಡುವ ಸವಾಲುಗಳಿಗೆ ಉತ್ತರವನ್ನು ಕಂಡುಕೊಳ್ಳುವ ನೆಲೆಯಲ್ಲಿ ಸಮುದಾಯ ತನ್ನ ತಿಳಿವನ್ನು ಬೆಳೆಸಿಕೊಳ್ಳುತ್ತದೆ. ಸೋಲಿಗರಿಗೆ ಆನೆಗಳ ಬಗೆಗೆ, ಜೇನು ಕುರುಬರಿಗೆ ಜೇನಿನ ಬಗೆಗೆ ಇರುವ ತಿಳಿವು ಅನನ್ಯವಾದುದು. ಅಂದರೆ ಬೇರೆ ಸಮುದಾಯಗಳಿಗೆ ಈ ಬಗೆಯ ತಿಳಿವು ಇರುವುದು ಅಸಾಧ್ಯ. ಇದ್ದರೂ ಅದು ಆಂಶಿಕವಾಗಿರುತ್ತದೆ. ಅಂದರೆ ಸಮುದಾಯವೊಂದು ತನ್ನ ಮುಖ್ಯ ಆರ್ಥಿಕ ಚಟುವಟಿಕೆಯ ನಿರ್ವಹಣೆಯಲ್ಲಿ, ಪರಿಸರದ ಹತ್ತಾರು ಬಿಕ್ಕಟ್ಟುಗಳನ್ನು ನಿಭಾಯಿಸುವಲ್ಲಿ ತನ್ನ ತಿಳಿವನ್ನು ಪಡೆದುಕೊಳ್ಳುತ್ತದೆ; ಬೆಳೆಸಿಕೊಳ್ಳುತ್ತದೆ.

ಸಮುದಾಯದ ತಿಳಿವು ಆ ಸಮುದಾಯದ ಎಲ್ಲರಲ್ಲೂ ಇರುವುದಿಲ್ಲ. ಇದು ಗಮನಿಸಬೇಕಾದ ಸಂಗತಿ. ಆ ಸಮುದಾಯದಲ್ಲಿ ಕೆಲವರು ಮಾತ್ರ ಆ ತಿಳಿವಿನ ಹಕ್ಕುದಾರರಾಗಿರುತ್ತಾರೆ; ಅವರು ತಾವೇ ಆಯ್ಕೆ ಮಾಡಿದವರಿಗೆ ಮಾತ್ರ ಆ ತಿಳಿವನ್ನು ದಾಟಿಸುತ್ತಾರೆ. ಆದರೆ ತಮ್ಮ ತಿಳಿವಿನ ಉಪಯೋಗ ಎಲ್ಲರಿಗೂ ದೊರೆಯುವುದನ್ನು ಅವರು ತಡೆಯುವುದಿಲ್ಲ. ಆ ಪ್ರಯೋಜನ ಎಲ್ಲರಿಗೂ ಒದಗಿಯೇ ತೀರುತ್ತದೆ. ಈ ತಿಳಿವು ಎನ್ನುವುದು ಕ್ರಿಯಾವರ್ತದಲ್ಲಿ ಚಾಲನೆಯಲ್ಲಿ ಇರುವುದೇ ಹೊರತು ಅದಕ್ಕೊಂದು ನುಡಿಯ ದೇಹ ದೊರಕುವುದು ಅಪರೂಪ. ಅಂದರೆ ತಿಳಿವನ್ನು ಹೊಂದಿದವರು ತಮ್ಮ ನೆನಪಿನಲ್ಲಿ ಅದನ್ನು ಇರಿಸಿಕೊಂಡಿರುತ್ತಾರೆ. ಅದನ್ನು ಇತರರಿಗೆ ತಿಳಿಸಿಕೊಡುವಾಗಲೂ ಆ ತಿಳಿವಿಗೆ ಸಂಬಂಧಿಸಿದ ಕ್ರಿಯೆಯನ್ನು ಮಾಡುತ್ತಾ ಅದರಲ್ಲಿ ಆ ತಿಳಿವಳಿಕೆಯನ್ನು ಪಡೆಯಬೇಕಾದವರು ಪಾಲ್ಗೊಳ್ಳಲು ಅವಕಾಶ ನೀಡುತ್ತಾರೆ. ಹಾಗೆ ಪಾಲ್ಗೊಳ್ಳುತ್ತಲೇ ತಿಳಿವು ಇನ್ನೊಬ್ಬರಿಗೆ ದಾಟುತ್ತದೆ. ಮಡಕೆ ಮಾಡುವ ಕೌಶಲವನ್ನು ಬಲ್ಲವರು ತಮ್ಮ ಕೌಶಲವನ್ನು ಮುಂದಿನ ತಲೆಮಾರಿಗೆ ದಾಟಿಸುತ್ತಿದ್ದ ಬಗೆ ಹೇಗೆ? ಕಲಿಯುವವರು ಮಾಡಬೇಕಾದುದೇನು? ಮಡಕೆ ಮಾಡುವವರು ಹೇಗೆ ತಮ್ಮ ಕೌಶಲವನ್ನು ಬಳಸುತ್ತಿದ್ದಾರೆ ಎಂಬುದನ್ನು ನೋಡುತ್ತಾ ನೋಡುತ್ತಾ, ಪ್ರಯೋಗ ಮಾಡುತ್ತಾ, ತಪ್ಪುಗಳನ್ನು ತಿದ್ದಿಕೊಳ್ಳುತ್ತಾ ಕಲಿಯುತ್ತಾರೆ. ಮಡಕೆ ಮಾಡುವ ಕೌಶಲವನ್ನು ಗಳಿಸಿಕೊಳ್ಳುತ್ತಾರೆ. ಈ ಕೌಶಲಕ್ಕೆ ನುಡಿಯ ಶರೀರವು ದೊರಕಿರುವುದಿಲ್ಲ.

ಈ ತಿಳಿವು ಕೆಲವೊಮ್ಮೆ ನುಡಿಯ ರೂಪದಲ್ಲಿರಬಹುದು; ಇಲ್ಲವೇ ಜನರ ನಡಾವಳಿಯಲ್ಲಿ ಸೇರಿಹೋಗಿರಬಹುದು. ಅಲ್ಲದೆ ಇದು ತನ್ನ ಅಂತಿಮ ಹಂತವನ್ನು ತಲುಪಿರುವುದಿಲ್ಲ. ನಿರಂತರವಾಗಿ ಬದಲಾಗುತ್ತಿರುತ್ತದೆ ಮತ್ತು ಬೆಳೆಯುತ್ತಿರುತ್ತದೆ. ಬೇಡದ ತಿಳಿವನ್ನು ಬಿಟ್ಟುಕೊಡಬೇಕಾಗುತ್ತದೆ. ಒಂದು ಉದಾಹರಣೆಯನ್ನು ನೋಡೋಣ.

ಬೆಳೆ ಇರುವ ಹೊಲಗಳಿಗೆ ಸುತ್ತಮುತ್ತಣ ಅಡವಿಗಳಿಂದ ಕಾಡುಹಂದಿಗಳು ನುಗ್ಗಿ ಬೆಳೆಯನ್ನು ತಿನ್ನುವುದೇ ಅಲ್ಲದೆ ಬೆಳೆದುದನ್ನು ಹಾಳುಗೆಡುಹುತ್ತಲೇ ಇರುತ್ತವೆ. ಅವುಗಳನ್ನು ತಡೆಯಲು ಬೇಲಿಗಳನ್ನು ಹಾಕುವುದು ಮುಂತಾದ ವಿಧಾನಗಳು ಯಾವಾಗಲೂ ಕೆಲಸಕ್ಕೆ ಬರುವುದಿಲ್ಲ. ರೈತರು ಈ ಹಾವಳಿಯನ್ನು ನಿವಾರಿಸಲು ಬೇರೊಂದು ದಾರಿಯನ್ನು ಕಂಡುಕೊಂಡದ್ದನ್ನು ಈಚೆಗೆ ನಾನು ನನ್ನ ಹಳ್ಳಿಯಲ್ಲಿ ಗಮನಿಸಿದೆ. ದಿನವೂ ಈ ಹಂದಿಗಳು ಬರುವ ದಾರಿ ಮತ್ತು ಒಳನುಸುಳುವ ಕಿಂಡಿಗಳು ಯಾವುವು ಎಂಬುದನ್ನು ರೈತರು ಗುರುತಿಸುತ್ತಾರೆ. ಆ ಕಿಂಡಿಗಳ ಹೊರಗೆ ನೆಲದ ಮೇಲೆ ಹೇರ್ ಕಟಿಂಗ್ ಸಲೂನ್‌ನಿಂದ ತಂದ ತುಂಡು ತುಂಡು ಕೂದಲನ್ನು ಒತ್ತಾಗಿ ಹರಡುತ್ತಾರೆ. ನೆಲ ಮೂಸಿಕೊಂಡು ಬರುವ ಹಂದಿಗಳು ಒಳಕಿಂಡಿಯ ಬಳಿ ಬರುವಾಗ ನೆಲದ ಮೇಲಿರುವ ಈ ಕೂದಲಿನ ತುಂಡುಗಳು ಅವುಗಳ ಮೂಗಿನೊಳಕ್ಕೆ ಸೇರುತ್ತವೆ. ಆಗ ಅವುಗಳಿಗೆ ಉಸಿರಾಡಲು ತೊಂದರೆ ಉಂಟಾಗುತ್ತದೆ. ಅದರಿಂದ ದಿಕ್ಕು ತೋಚದಂತಾಗಿ ಹಂದಿಗಳು ಅಲ್ಲಿಂದ ದೂರ ಓಡುತ್ತವೆ. ಮತ್ತೆ ಆ ಕಡೆ ಅವು ಸುಳಿಯುವ ಸಂಭವ ಕಡಿಮೆ. ಹಿಂದೆ ರೈತರ ತಿಳಿವಳಿಕೆಯಲ್ಲಿ ಈ ಉಪಾಯ ಇರಲಿಲ್ಲ. ಈಗ ಪರಿಸ್ಥಿತಿಯ ಒತ್ತಡದಿಂದಾಗಿ ಸೇರ್ಪಡೆಯಾದ ತಿಳಿವಳಿಕೆ. ಇದಕ್ಕೆ ನಾನು ಈ ಬರಹದಲ್ಲಿ ನುಡಿಯ ರೂಪವನ್ನು ಕೊಟ್ಟಿದ್ದೇನೆ. ಜನರು ಇದನ್ನು ಕೇವಲ ಆಚರಿಸುತ್ತಾರೆ. ಈ ಉಪಾಯವನ್ನು ಕುರಿತು ಯಾರೊಡನೆಯೂ 'ಮಾತಾಡ'ಬಾರದು, ಈ ಉಪಾಯವನ್ನು ಯಾರಿಗೂ ಹೇಳಿಕೊಡಬಾರದು ಎಂಬ ನಂಬಿಕೆಯೂ ಆ ರೈತರಲ್ಲಿ ಇದೆ. ಏಕೆಂದರೆ ಹಾಗೆ ಮಾತಾಡಿಕೊಳ್ಳುವುದನ್ನು 'ಕೇಳಿಸಿ'ಕೊಳ್ಳುವ ಹಂದಿಗಳು ಮರುದಿನ ಬೇರೆ ಕಡೆ ಒಳಗಿಂಡಿಗಳನ್ನು ಮಾಡುತ್ತವಂತೆ. ಅಂದರೆ ತಿಳಿವಳಿಕೆಯನ್ನು ನುಡಿ ರೂಪಕ್ಕೆ ಪರಿವರ್ತಿಸುವುದಕ್ಕೆ ನಿಷೇಧವೇ ಇದೆ.

ಸಮುದಾಯದ ತಿಳಿವಿಗೆ ಸಂಬಂಧಿಸಿದಂತೆ ಇನ್ನೂ ಒಂದು ಗಮನಿಸಬೇಕಾದ ಸಂಗತಿ ಇದೆ. ಈ ತಿಳಿವಿಗೆ ಸಂಬಂಧಿಸಿದ ಸಂಗತಿಗಳೂ ಪ್ರಮಾಣೀಕರಣಗೊಂಡಿರುವುದಿಲ್ಲ. ತಿಳಿವನ್ನು ಬಳಸುವವರು ತಮ್ಮ ಅನುಭವವನ್ನೇ ಪ್ರಾಮಾಣ್ಯವನ್ನಾಗಿ ಇರಿಸಿಕೊಂಡು ಮುನ್ನಡೆಯುತ್ತಿರುತ್ತಾರೆ. ಒಂದು ಸರಳ ಉದಾಹರಣೆಯನ್ನು ನೋಡಿ. ಅಡಿಗೆ ಮಾಡುವಾಗ ಅಡುಗೆಗೆ ಎಷ್ಟು ಉಪ್ಪು ಹಾಕಬೇಕೆಂಬುದನ್ನು ಅಳತೆಯಲ್ಲಿ ಯಾರೂ ಹೇಳುವುದಿಲ್ಲ. ಹೇಳಿದರೂ ಅದನ್ನು ಪಾಲಿಸಲು ಬರುವುದಿಲ್ಲ. 'ಕೈಯಳತೆ'. 'ರುಚಿಗೆ ತಕ್ಕಷ್ಟು' ಎಂಬ ಮಾತುಗಳಲ್ಲಿ ಇದನ್ನು ವಿವರಿಸಲಾಗುತ್ತದೆ.

ತಿಳಿವಿಗೆ ಸಂಬಂಧಿಸಿದ ಎಲ್ಲ ವಿವರಗಳೂ ತಲೆಮಾರಿನಿಂದ ತಲೆಮಾರಿಗೆ ಯಥಾವತ್ತಾಗಿ ದಾಟುವುದಿಲ್ಲ. ಅದರ ಅತ್ಯಂತ ಮಹತ್ವದ ಸಂದರ್ಭದ ತಿಳಿವನ್ನು ಗುಪ್ತವಾಗಿಯೇ ಇರಿಸಿಕೊಳ್ಳಲಾಗುವುದು. ಬಾಯ್ದೆರೆಯಲ್ಲಿ ಬದುಕು ನಿಭಾಯಿಸುವ ಸಮುದಾಯಗಳಲ್ಲಿ ಮಾತ್ರವಲ್ಲ, ಬರಹಕ್ಕೆ ತೆರೆದುಕೊಂಡ ಸಮುದಾಯಗಳಲ್ಲೂ ಈ ಮಾತು ದಿಟ. ರೋಗ ನಿವಾರಣೆಯನ್ನು ತಿಳಿಸುವ ಹಲವು ವೈದ್ಯಶಾಸ್ತ್ರ ಗ್ರಂಥಗಳಲ್ಲಿ ಎಲ್ಲ ವಿವರಗಳನ್ನೂ ನೀಡಿದಂತೆ ತೋರಿದರೂ ಆಯಕಟ್ಟಿನ ಕೆಲವು ವಿವರಗಳು ಬರಹಗಳಲ್ಲಿ

ಲೋಪಗೊಂಡಿರುತ್ತವೆ ಎಂಬುದನ್ನು ವಿದ್ವಾಂಸರು ಗುರುತಿಸುತ್ತಾರೆ. ಹೀಗೆ ಮಾಡಲು ಸಮುದಾಯಗಳ ನಂಬಿಕೆಯೂ ಕಾರಣ. ತಿಳಿವು ಎಲ್ಲರಿಗೂ ದಕ್ಕುವುದರಿಂದ ಅಪಾಯವೇ ಹೆಚ್ಚು ಎಂದು ಬಹುಪಾಲು ಸಮುದಾಯಗಳು ನಂಬುತ್ತವೆ. ಹೀಗೆ ರಹಸ್ಯ ಕಾಯ್ದುಕೊಳ್ಳುವುದಕ್ಕೆ ತಿಳಿವಿನ ಮೇಲೆ ಹಕ್ಕನ್ನು ಇರಿಸಿಕೊಳ್ಳಬೇಕೆಂಬ ಹಂಬಲದೊಡನೆ ಅದು ತಪ್ಪು ಕೈಗಳಿಗೆ ಬೀಳಬಾರದೆಂಬ ಎಚ್ಚರವೂ ಇರುವುದೆಂದು ಸಾಮಾನ್ಯವಾಗಿ ತಿಳಿಯಲಾಗುತ್ತದೆ.

ಈ ಎಲ್ಲ ವಿವರಗಳಿಂದ ತಿಳಿಯುವುದಿಷ್ಟು:

ಅ) ಸಮುದಾಯದ ತಿಳಿವಳಿಕೆ ಎಂದರೆ ಸಮುದಾಯದಲ್ಲಿರುವ ತಿಳಿವಳಿಕೆ. ಸಮುದಾಯದ ಎಲ್ಲರಲ್ಲೂ ಇರುವ ತಿಳಿವಳಿಕೆ ಅಲ್ಲ.

ಆ) ಸಮುದಾಯದ ತಿಳಿವಳಿಕೆ ತಲೆಮಾರಿನಿಂದ ತಲೆಮಾರಿಗೆ ಹರಿದು ಬಂದರೂ ಆಯ್ದ ಕೆಲವರಿಗೆ ಮಾತ್ರ ಆ ತಿಳಿವಳಿಕೆ ದಕ್ಕುತ್ತಿರುತ್ತದೆ. ತಿಳಿವಳಿಕೆ ಯಾರಲ್ಲಿ ಇರಬೇಕು ಮತ್ತು ಯಾರಿಗೆ ಅದನ್ನು ಪಡೆದುಕೊಳ್ಳುವ ಹಕ್ಕು ಇದೆ ಎಂಬುದನ್ನು ಗೊತ್ತು ಮಾಡುವ ಆಯ್ಕೆಯ ಮಾನದಂಡಗಳನ್ನು ಸಮುದಾಯ ಒಪ್ಪಿಕೊಂಡಿರುತ್ತದೆ.

ಇ) ಸಮುದಾಯದ ತಿಳಿವಳಿಕೆಗೂ ನುಡಿಗೂ ಇರಬಹುದಾದ ನಂಟು ಎಂದರೆ ಅದು ಸೂಚ್ಯ ಮತ್ತು ಸೂಚಕಗಳ ನಡುವೆ ಇರುವ ನಂಟು.

ಈ) ಸಮುದಾಯದ ತಿಳಿವು ಮೇಲೆ ಹೇಳಿದ ಕಾರಣಗಳಿಂದ ಪ್ರಮಾಣೀಕರಣಗೊಂಡಿರುವುದಿಲ್ಲ. ಅದನ್ನು ಸಮುದಾಯದ ಹೊರಗಿನವರಿಗೆ ಹೀಗಾಗಿ ಸುಲಭವಾಗಿ ದಾಟಿಸಲು ಆಗುವುದಿಲ್ಲ.

ಮೇಲಿನ ಪಟ್ಟಿಯಲ್ಲಿ ಇರುವ ಕೊನೆಯ ಅಂಶದ ಬಗೆಗೆ ಕೊಂಚ ವಿವರಣೆ ಅಗತ್ಯ. ಒಂದು ಉದಾಹರಣೆಯನ್ನು ನೋಡೋಣ. ಒಂದು ಸಮುದಾಯದ ಜನರಿಗೆ ತಾವು ಬದುಕುತ್ತಿರುವ ಪರಿಸರದಲ್ಲಿರುವ ಗಿಡಮೂಲಿಕೆಗಳ ಔಷಧೀಯ ಗುಣದ ಬಗೆಗೆ ತಿಳಿವಳಿಕೆ ಇದೆ ಎಂದುಕೊಳ್ಳೋಣ. ಅದನ್ನು ಅವರಲ್ಲಿ 'ಬಲ್ಲವರು' ಕೆಲವರು ಸಮುದಾಯದ ಎಲ್ಲ ಸದಸ್ಯರ ಚಿಕಿತ್ಸೆಯ ಸಂದರ್ಭದಲ್ಲಿ ಬಳಸುತ್ತಿರುತ್ತಾರೆ. ಆ ಸಮುದಾಯದಲ್ಲಿರುವ ಈ 'ಬಲ್ಲವರ' ತಿಳಿವನ್ನು ಆ ಸಮುದಾಯದ ಹೊರಗಿನವರು ಗುಟ್ಟಾಗಿ ಗೊತ್ತುಮಾಡಿಕೊಂಡರೂ ಅದನ್ನು ತಮಗೆ ಬೇಕಾದ ಹಾಗೆ ಬಳಸಲಾರರು. ಏಕೆಂದರೆ ಅವರು ಗೊತ್ತುಮಾಡಿಕೊಂಡ ತಿಳಿವು ಪ್ರಮಾಣೀಕರಣಗೊಂಡಿರುವುದಿಲ್ಲ. ಯಾವ ಗಿಡಮೂಲಿಕೆಗಳು ಅಗತ್ಯ ಎಂಬುದು ತಿಳಿಯುವುದೇ ಹೊರತು ಆ ಗಿಡಮೂಲಿಕೆಗಳನ್ನು ಯಾವ ಪ್ರಮಾಣದಲ್ಲಿ ಹೇಗೆ ಬೆರೆಸಬೇಕು ಎಂಬುದು ಆ ತಿಳಿವಿನ ಭಾಗವಾಗಿರುವುದಿಲ್ಲ. ಅದು ಸಮುದಾಯದೊಳಗಿನ 'ಬಲ್ಲವರ' ರಹಸ್ಯವಾಗಿರುತ್ತದೆ. ಹೀಗೆ ತಿಳಿದುಕೊಂಡದ್ದನ್ನು ಯುಕ್ತವಾಗಿ ಬಳಸಲೇಬೇಕೆಂದರೆ ಮತ್ತೊಮ್ಮೆ ಪ್ರಯೋಗಶಾಲೆಯಲ್ಲಿ ಅವೆಲ್ಲವನ್ನೂ ಪರೀಕ್ಷಿಸಿ ತಕ್ಕ ಬೆರಕೆಯ ಪ್ರಮಾಣವನ್ನು ಗೊತ್ತುಮಾಡಿಕೊಳ್ಳಬೇಕಾಗುತ್ತದೆ. ನುಡಿಗಳ ಅಳಿವನ್ನು ವಿವರವಾಗಿ ಚರ್ಚಿಸುವಾಗ ಈ ಅಂಶವನ್ನು ಮರಳಿ ಗಮನಿಸಲಿದ್ದೇವೆ.

ನುಡಿ ಮತ್ತು ತಿಳಿವಳಿಕೆ: ಭಾರತೀಯ ಲಿಖಿತ ಪರಂಪರೆಯ ಚಿಂತನೆ:

ಈ ಸಂದರ್ಭದಲ್ಲೇ ನುಡಿ ಮತ್ತು ತಿಳಿವಳಿಕೆಗಳ ನಂಟನ್ನು ಕುರಿತಂತೆ ಭಾರತೀಯ ಚಿಂತನಾಕ್ರಮವನ್ನು ಈ ಸಂದರ್ಭದಲ್ಲಿ ಗಮನಿಸಬಹುದಾಗಿದೆ. ಇದು ನಮ್ಮ ಚರ್ಚೆಗೆ ನೇರವಾಗಿ ಸಂಬಂಧಿಸಿಲ್ಲವಾದರೂ ಪರ್ಯಾಯ ಚಿಂತನಾ ಕ್ರಮವೊಂದನ್ನು ಪರಿಚಯ ಮಾಡಿಕೊಳ್ಳುವ ಉದ್ದೇಶದಿಂದ ಈ ಮುಂದಿನ ಮಾತುಗಳನ್ನು ಬರೆಯಲಾಗಿದೆ. ಭಾರತೀಯ ಎನ್ನುವಾಗ ನುಡಿಯ ಆಕಾರದಲ್ಲಿ ಮತ್ತು ಸಂಸ್ಕೃತ ನುಡಿಯಲ್ಲಿ ಮಂಡಿತವಾಗುತ್ತಿದ್ದ ಚಿಂತನಾಕ್ರಮವನ್ನು ಮಾತ್ರ ಗಮನಿಸಲಾಗಿದೆ.

ವೈಯಾಕರಣಿಗಳು, ತಾರ್ಕಿಕರು, ಮೀಮಾಂಸಕರು, ನೈಯಾಯಿಕರು ಮೊದಲಾಗಿ ಹಲವು ಬಗೆಯ ಚಿಂತನಾ ಕ್ರಮಗಳನ್ನು ಪ್ರತಿನಿಧಿಸುವವರು ಈ ನಿಟ್ಟಿನಲ್ಲಿ ತಮ್ಮ ವಿಚಾರಗಳನ್ನು ಮಂಡಿಸಿದ್ದಾರೆ. ನುಡಿ ಮತ್ತು ತಿಳಿವುಗಳು ಬೇರೆ ಬೇರೆ ವಲಯಗಳಿಗೆ ಸೇರಿವೆ ಎಂಬ ಒಂದು ತುದಿಯ ವಾದವಿದ್ದರೆ, ಇನ್ನೊಂದು ತುದಿಯಲ್ಲಿ ನುಡಿಯೇ ಪ್ರಧಾನ, ತಿಳಿವು ಅದಕ್ಕೆ ಅಧೀನ ಎಂಬ ವಾದವೂ ಇದೆ. ನುಡಿ ಮತ್ತು ತಿಳಿವುಗಳು ಬೇರೆ ಬೇರೆ ಎಂದು ವಾದಿಸುವವರಲ್ಲೂ ಹಲವು ಪ್ರಭೇದಗಳಿವೆ. ಈ ಪ್ರಭೇದಗಳು ಇವೆರಡರ ನಡುವೆ ಸಂಬಂಧ ಹೇಗೆ ರೂಪಿತವಾಗುತ್ತದೆ ಎಂಬ ಸಂಗತಿಯನ್ನು ಅವಲಂಬಿಸಿ ಬೆಳೆದಿವೆ. ಈ ಸಂಬಂಧವನ್ನು ಕಾರ್ಯ-ಕಾರಣ, ಜನ್ಯ-ಜನಕ, ಗಮ್ಯ-ಗಮಕ, ಜ್ಞಾಪ್ಯ-ಜ್ಞಾಪಕ ಇವೇ ಮುಂತಾದ ಬಗೆಗಳಲ್ಲಿ ನಿರೂಪಿಸಿರುವುದುಂಟು. ನುಡಿಯೇ ಪ್ರಧಾನ, ತಿಳಿವು ಅದಕ್ಕೆ ಅಧೀನ ಎನ್ನುವ ಶಬ್ದನಿತ್ಯ ವಾದಿಗಳೂ ಕೂಡ ತಿಳಿವು ಮತ್ತು ನುಡಿಗಳ ನಂಟು ಬೆಳಕಿಗೆ ಬರುವ ಬಗೆಯನ್ನು ಹಲವು ಬಗೆಗಳಲ್ಲಿ ವಿವರಿಸಿದ್ದಾರೆ. ದೀಪ ಮತ್ತು ಬೆಳಕಿನ ನಂಟನ್ನು ಅರಿಯಲು ಬಳಸುವ ಉದಾಹರಣೆಯನ್ನು ನೋಡೋಣ. ಬೆಳಕು ದೀಪದ ಪರಿಣಾಮ ಎಂದು ತಿಳಿದರೆ ಆ ಬೆಳಕಿನಲ್ಲಿ ದೀಪವೂ ಕಾಣುತ್ತಿದೆ ಎಂಬುದನ್ನು ಗಮನಿಸಬೇಕಾಗುತ್ತದೆ. ಹಾಗಾಗಿ ನುಡಿಯು ನಿತ್ಯ ಎನ್ನುವಾಗಲೂ ಅದು ಬಿಂಬಿಸುವ ತಿಳಿವು ನುಡಿಯಿಂದ ಹುಟ್ಟಿಮದೋ, ನುಡಿಯಿಂದ ದೀಪ್ಯಮಾನವಾದುದೋ ಎಂಬ ಪ್ರಶ್ನೆ ಹಾಗೇ ಉಳಿಯುತ್ತದೆ. ಇದೆಲ್ಲವೂ ಭಾರತೀಯ ಚಿಂತನೆಗಳ ಹಲವು ನೆಲೆಗಳನ್ನು ಸೂಚಿಸುತ್ತವೆ. ಒಟ್ಟಾರೆ ನುಡಿ ಮತ್ತು ತಿಳಿವುಗಳ ನಂಟನ್ನು ಕುರಿತಂತೆ ಭಾರತೀಯ ಚಿಂತಕರು ಮಂಡಿಸಿರುವ ಚಿಂತನೆಗಳು ಐರೋಪ್ಯ ಚಿಂತನೆಗಳಷ್ಟೇ ಸಂಕೀರ್ಣವಾಗಿವೆ. ನುಡಿ ಮತ್ತು ತಿಳಿವುಗಳ ನಂಟನ್ನು ವ್ಯಕ್ತಿಗತ ನೆಲೆಯಿಂದ ಮಾತ್ರವಲ್ಲದೆ ನುಡಿ ಸಮುದಾಯದ ನೆಲೆಯಿಂದಲೂ ಚರ್ಚಿಸಲಾಗಿದೆ. ತಾರ್ಕಿಕರು ಈ ನೆಲೆಯಲ್ಲಿ ಮುಖ್ಯರಾಗುತ್ತಾರೆ. ನುಡಿಯಿಂದ ಪ್ರತೀತವಾಗುವ ತಿಳಿವು ಆ ಸಮುದಾಯದ ತಿಳಿವಿನ ಭಾಗವೆನ್ನುವುದು ಅವರ ನಿಲುವು. ಈ ತಿಳಿವಿನಲ್ಲಿ ಆಗುವ ಬದಲಾವಣೆಗೆ, ಪಲ್ಲಟಕ್ಕೆ ಆ ಸಮುದಾಯದ ಸಮ್ಮತಿ ಅಗತ್ಯವೆನ್ನುವ ಅಂಶವನ್ನೂ ಗಮನಕ್ಕೆ ತರುತ್ತಾರೆ. ಉದಾಹರಣೆಗೆ, ಪದಗಳಿಗಿರುವ ತಿರುಳನ್ನು ಅಭಿಧಾ ಮತ್ತು ಲಕ್ಷಣಾ ಎಂದು ವಿಭಜಿಸಿ ತೋರಿಸುವ ನೆಲೆಯನ್ನೆ ಗಮನಿಸಿದರೆ ಈ ಸಂಗತಿ ಸ್ಪಷ್ಟವಾಗುತ್ತದೆ. ಅಭಿಧಾರ್ಥವನ್ನು ನಿಘಂಟುಗಳು ತಿಳಿಸುತ್ತವೆ.

ಆದರೆ ಲಕ್ಷಣಾರ್ಥಕ್ಕೆ ಆ ನುಡಿ ಸಮುದಾಯದ ಸಮ್ಮತಿ ದೊರಕುವುದು ಅಗತ್ಯ. ಅದು ವ್ಯಕ್ತಿಗತ ನೆಲೆಯಲ್ಲಿ ಮಾತ್ರ ಇರಲು ಸಾಧ್ಯವಿಲ್ಲ. ಲಕ್ಷಣಾರ್ಥದಲ್ಲಿ ಹಿಗ್ಗುವಿಕೆ, ಕುಗ್ಗುವಿಕೆ, ಬದಲಾವಣೆಗಳು ಆಗಬಹುದು. ಆದರೆ ಆಗಲೂ ನುಡಿ ಸಮುದಾಯದ ಸಮ್ಮತಿ ಅಗತ್ಯ.

ವಾಕ್ಯವೊಂದರ ಅರ್ಥಪ್ರತೀತಿ ಹೇಗೆ ಆಗುತ್ತದೆ ಎಂಬುದನ್ನು ವಿವರಿಸುವ ಎರಡು ಚಿಂತನಾಕ್ರಮಗಳು ಸಂಸ್ಕೃತ ಚಿಂತನೆಯಲ್ಲಿ ಕಂಡು ಬರುತ್ತವೆ. ವಾಕ್ಯದ ಘಟಕಗಳ ಅರ್ಥ ಹಂತಹಂತವಾಗಿ ಪ್ರತೀತವಾಗುತ್ತಾ ಬಂದು ಕೊನೆಗೆ ಆ ಎಲ್ಲ ಅರ್ಥ ಘಟಕಗಳ ಮೊತ್ತವಾಗಿ ಇಡೀ ವಾಕ್ಯದ ಅರ್ಥ ಗೋಚರವಾಗುತ್ತದೆ ಎನ್ನುವುದು ಒಂದು ವಾದ. ಇದನ್ನು ಒಪ್ಪದ ಇನ್ನೊಂದು ವಾದವಿದೆ. ಇಡೀ ವಾಕ್ಯವನ್ನು ಕೇಳಿ ಮುಗಿಸುವವರೆಗೂ ಅರ್ಥಪ್ರತೀತಿ ಎಂಬುದು ಜರುಗುವುದಿಲ್ಲ; ವಾಕ್ಯ ಮುಗಿದ ಕೂಡಲೇ ಅರ್ಥವು ಸ್ಫೋಟಗೊಳ್ಳುತ್ತದೆ ಎನ್ನುವುದು ಈ ವಾದದ ನಿಲುವು. ಇವೆರಡೂ ವಾದಗಳನ್ನು ಅಭಿಹಿತಾನ್ವಯವಾದ (ಇದನ್ನು ಪ್ರತಿಪಾದಿಸಿದವರು ಭಾಟ್ಟ ಮೀಮಾಂಸಕರು) ಮತ್ತು ಅನ್ವಿತಾಭಿಧಾನವಾದ (ಇದನ್ನು ಪ್ರತಿಪಾದಿಸಿದವರು ಪ್ರಾಭಾಕರ ಮೀಮಾಂಸಕರು) ಎಂದು ಕರೆಯಲಾಗಿದೆ. ನಮಗೆ ಎರಡನೆಯ ವಾದ (ಸ್ಫೋಟವಾದ) ಇಲ್ಲಿ ಮುಖ್ಯ. ಹೀಗೆ ವಾಕ್ಯದ ಕೊನೆಗೆ ಪ್ರತೀತವಾಗುವ ಅರ್ಥವು ವಾಕ್ಯದಲ್ಲೇ ಇರುತ್ತದೋ ಅಥವಾ ಕೇಳುಗರಲ್ಲಿ/ ಓದುಗರಲ್ಲಿ ಅಂತರ್ಗತವಾಗಿದ್ದುದು ವಾಕ್ಯವನ್ನು ಕೇಳಿದಾಗ/ಓದಿದಾಗ ಹೊರಬರುತ್ತದೋ ಎಂಬುದು ಪ್ರಶ್ನೆ. ಅಂತಸ್ಥವಾಗಿದ್ದುದು ವಾಕ್ಯ ಶ್ರವಣ/ವಾಚನಗಳೇ ಕಾರಣವಾಗಿ ಹೊರಬರುತ್ತದೆ ಎನ್ನುವುದಾದರೆ ಆಗ ಆ ಅರ್ಥವು ಕೇಳುಗರಲ್ಲಿ/ವಾಚಕರಲ್ಲಿ ಎಲ್ಲಿ ನೆಲೆಗೊಂಡಿರುತ್ತದೆ ಎನ್ನುವುದು ಇನ್ನೊಂದು ಪ್ರಶ್ನೆ. ನಮಗೆ ಈ ಪ್ರಶ್ನೆಗಳನ್ನು ಬಿಡಿಸಿ ಚರ್ಚಿಸುವುದು ಸದ್ಯ ಅಗತ್ಯವಿಲ್ಲ. ಆದರೆ ವಾಕ್ಯದ ಶಬ್ದರೂಪ ಮತ್ತು ಅರ್ಥರೂಪಗಳು ಬೇರೆ ಬೇರೆ ನೆಲೆಯಲ್ಲಿ ಇರುತ್ತವೆ ಎನ್ನುವುದನ್ನು ಗಮನಿಸಬೇಕು.

ಭಾರತೀಯ ಚಿಂತಕರು ಈ ಎಲ್ಲ ಚಿಂತನೆಗಳನ್ನು ಮಂಡಿಸುವ ಹೊತ್ತಿನಲ್ಲಿ ಎಲ್ಲ ನುಡಿಗಳಿಗೂ ಸಮಾನವಾದ ನೆಲೆಗಳನ್ನು ಗುರುತಿಸಿದ್ದರೋ ಇಲ್ಲವೇ ತಮ್ಮ ಚಿಂತನೆಗಳನ್ನು ಮಂಡಿಸಲು ಬಳಸುತ್ತಿದ್ದ ಸಂಸ್ಕೃತ ನುಡಿಯನ್ನು ಮಾತ್ರವೇ ಗಮನಿಸುತ್ತಿದ್ದರೋ ಎಂಬುದೊಂದು ಪ್ರಶ್ನೆಯಿದೆ. ಆದರೆ ಪಾಳಿ, ಪ್ರಾಕೃತಗಳನ್ನು ತಮ್ಮ ಚಿಂತನೆಯ ಮಂಡನೆಗೆ ಬಳಸುತ್ತಿದ್ದ ಬೌದ್ಧ ಮತ್ತು ಜೈನ ಧರ್ಮದ ಚಿಂತಕರಲ್ಲಿ ಇದಕ್ಕೆ ಉತ್ತರಗಳನ್ನು ಹುಡುಕಬೇಕಿದೆ. ಈ ಚಿಂತಕರು ನುಡಿ ಮತ್ತು ತಿಳಿವು ಇವೆರಡನ್ನೂ ಬೇರೆ ಬೇರೆ ಕಾರಣಗಳಿಂದ ನಿರಾಕರಿಸುತ್ತಿದ್ದವರು. ಅಂದರೆ ಇವೆರಡನ್ನೂ, ನಿವಾರಣೆ ಮಾಡಿಕೊಳ್ಳಬೇಕಾದವು ಮತ್ತು ಎರಡೂ ಕೂಡ ಮಾಲಿನ್ಯಗಳು ಎಂದು ತಿಳಿದಿದ್ದವರು. ಇವರು ನಮ್ಮ ಪ್ರಶ್ನೆಯನ್ನೇ ಬುಡಮೇಲು ಮಾಡಿದಂತಿದೆ. ಹಾಗಾಗಿ ಈ ಕುರಿತು ಇನ್ನೂ ವಿಚಾರ ಮಾಡುವ ಅಗತ್ಯವಿದೆ. ಅದು ಈ ಬರಹದ ವ್ಯಾಪ್ತಿಗೆ ಹೊರತಾದುದು.

ನುಡಿ ವಿಧಿವಾದದ ಹುಟ್ಟು, ಬೆಳವಣಿಗೆ

ನುಡಿಗಳಲ್ಲಿ ಜನರ ತಿಳಿವಳಿಕೆ, ಲೋಕದೃಷ್ಟಿ ಮತ್ತು ಸಾಂಸ್ಕೃತಿಕ ನೆನಪುಗಳು ಅಡಗಿರುತ್ತವೆ ಎಂಬ ನಿಲುವಿಗೆ ಕಾರಣವಾಗಿರುವ ಚಿಂತನೆಯ ಹಿಂದೆ ಕಳೆದ ಶತಮಾನದಲ್ಲಿ ಮಂಡಿತವಾದ ಒಂದು ನುಡಿಯರಿಮೆಯ ಎಳೆ ಇದೆ. ಎಡ್ವರ್ಡ್ ಸಪೀರ್ ಮತ್ತು ಬೆಂಜಮಿನ್ ಲೀ ವೂರ್ಫ್ ಎಂಬ ನುಡಿಯರಿಗರು ಮಂಡಿಸಿದರೆಂದು ಹೇಳಲಾಗುತ್ತಿರುವ ಚಿಂತನೆಯಿದು. **ಸಪೀರ್-ವೂರ್ಫ್ ಪ್ರಮೇಯವೆಂದೇ** ಇದನ್ನು ಹೆಸರಿಸಲಾಗಿದೆ. ಕಳೆದ ಶತಮಾನದ ಆದಿಯಲ್ಲಿ ಅಮೆರಿಕಾದ ಫ್ರಾನ್ಜ್ ಬೋಅಸ್ ಎಂಬ ಮಾನವಶಾಸ್ತ್ರಜ್ಞ ಈ ಚಿಂತನೆಯ ಬೀಜವನ್ನು ಬಿತ್ತಿದ್ದನು. ಈತನಿಗೂ ಮೊದಲು ಯುರೋಪಿನ ವಿವಿಧ ದೇಶಗಳಲ್ಲಿ ನುಡಿಗೂ ತಿಳಿವಿಗೂ ಇರುವ ನಂಟನ್ನು ಕುರಿತ ಹಲವು ಚಿಂತನೆಗಳು ಮಂಡಿತವಾಗಿದ್ದವು. ಈ ಚಿಂತನೆಗಳ ಬೆಳವಣಿಗೆಯನ್ನು ಸಂಗ್ರಹ ರೂಪದಲ್ಲಿ ನಿರೂಪಿಸುವ ಅಗತ್ಯವಿದೆ.

1660 ರಲ್ಲಿ ಫ್ರಾನ್ಸ್ ದೇಶದಲ್ಲಿ ಲ್ಯಾನ್ಸ್‌ಲೆಟ್ ಮತ್ತು ಆರ್ನಾಲ್ಡ್ ಅವರಿಂದ ರಚನೆಗೊಂಡ ಪೋರ್ಟ್ ರಾಯಲ್ ಗ್ರಾಮರ್ ಕೃತಿಯು ಮಾನವ ನುಡಿಗಳಿಗೆಲ್ಲಾ ಸಾಮಾನ್ಯವಾದ ರಚನೆಯೊಂದು ಇದೆಯೆಂಬ ಚಿಂತನೆಯನ್ನು ಆಧರಿಸಿ ರೂಪುಗೊಂಡಿತ್ತು. ಆ ಹೊತ್ತಿನಲ್ಲಿ ಆ ಕೃತಿ ರಚನೆಯಾದ ಪರಿಸರಕ್ಕೆ ಯುರೋಪಿನ ಕೆಲವು ನುಡಿಗಳನ್ನು ಬಿಟ್ಟರೆ ಹೆಚ್ಚು ಮಾನವ ಸಹಜ ನುಡಿಗಳ ಪರಿಚಯವಿರುವುದು ಸಾಧ್ಯವಿರಲಿಲ್ಲ. ಆದರೆ ಪೋರ್ಟ್ ರಾಯಲ್ ಗ್ರಾಮರ್ ಕೃತಿಯ ತಳಹದಿಯು ಎಲ್ಲ ನುಡಿಗಳಿಗೂ ಸಮಾನವಾದ ನೆಲೆಗಟ್ಟನ್ನು ಪ್ರತಿಪಾದಿಸಿತ್ತು. ಈ ಕೃತಿ ರಚನೆಯಾದ ಒಂದು ಶತಮಾನದ ಬಳಿಕ ಜರ್ಮನ್ ದೇಶದ ಚಿಂತಕರು, ಮುಖ್ಯವಾಗಿ ಹಮನ್ ಮತ್ತು ಹರ್ಡರ್, ಎಲ್ಲ ನುಡಿಗಳಿಗೆ ಇರುವ ಸಮಾನ ನೆಲೆಗಟ್ಟನ್ನು ಕುರಿತು ತಮ್ಮ ಚಿಂತನೆಗಳನ್ನು ವಿಸ್ತರಿಸಿದರು. ಅವರ ಗ್ರಹಿಕೆಯಂತೆ ತಿಳಿವು, ಚಿಂತನೆ ಇವೆಲ್ಲವೂ ಆಕಾರ ಪಡೆಯುವಾಗ ಅದಕ್ಕೆ ನುಡಿಯ ಬೆಂಬಲ ಅಗತ್ಯವಿರುವುದಿಲ್ಲ. ಆದರೆ ಹೀಗೆ ಮೈದಳೆದ ತಿಳಿವನ್ನು ಅನ್ಯರಿಗೆ ತಲುಪಿಸಲು ಒಂದು ಮಾಧ್ಯಮ ಅಗತ್ಯವಾಗುತ್ತದೆ. ಆ ಮಾಧ್ಯಮವೇ ನುಡಿ.ತಿಳಿವು ಮತ್ತು ನುಡಿಗಳು ಬೇರೆ ಬೇರೆ ವಲಯಗಳಿಗೆ ಸೇರಿವೆ ಎಂಬ ಈ ಚಿಂತನೆ ಆ ಕಾಲಕ್ಕೆ ಕ್ರಾಂತಿಕಾರಕವಾಗಿತ್ತು. ಏಕೆಂದರೆ ನುಡಿಯು ದೈವ ಸೃಷ್ಟಿ ಎಂದು ಪ್ರತಿಪಾದಿಸುತ್ತಿದ್ದ ಕ್ರಿಶ್ಚಿಯನ್ ಧರ್ಮದ ನಿಲುವನ್ನು ಇದು ಮಾನ್ಯ ಮಾಡಿರಲಿಲ್ಲ. ನುಡಿಯು ಸಂವಹನದ ಅಗತ್ಯಕ್ಕಾಗಿ ಮನುಷ್ಯ ಮಾಡಿಕೊಂಡದ್ದು ಎಂದು ಹೇಳುವ ಮೂಲಕ ಯುರೋಪಿನ ಜ್ಞಾನೋದಯ ಯುಗದ ಚಿಂತನೆಯ ನೆಲೆಗಳನ್ನು ಸಮರ್ಥಿಸಿದಂತಾಗಿತ್ತು.

ಹಮನ್ ಮತ್ತು ಹರ್ಡರ್, ಅದರಲ್ಲೂ ಮುಖ್ಯವಾಗಿ ಹರ್ಡರ್, ನುಡಿಯ ಅಗತ್ಯವನ್ನು ಕುರಿತಂತೆ ಎರಡು ನೆಲೆಗಳನ್ನು ಕಂಡುಕೊಂಡರು. ಮೊದಲನೆಯದಾಗಿ ಮನಸ್ಸಿನಲ್ಲಿ ರೂಪುಗೊಂಡ ತಿಳಿವನ್ನು ಇತರರಿಗೆ ರವಾನಿಸುವ ಅಗತ್ಯ ಕಂಡುಬಂದು ಅದಕ್ಕಾಗಿ ನುಡಿಯನ್ನು ಆಶ್ರಯಿಸಬೇಕೆಂದು ತಿಳಿಯಲಾಯಿತು. ಇದಲ್ಲದೆ ಮನಸ್ಸಿನಲ್ಲಿ

ಮೈದಳೆಯುವ ಭಾವಜಗತ್ತನ್ನು (ಸೋವು, ನಲಿವು, ಉದ್ವೇಗ, ಕೋಪ, ಶೋಕ ಮುಂತಾದವು) ಹೊರಹಾಕುವುದು ಅಗತ್ಯವಾಗಿ ಕಂಡದ್ದರಿಂದ ಆ ನೆಲೆಯಲ್ಲೂ ನುಡಿಯ ಆಶ್ರಯ ಬೇಕಾಯಿತು. ಇವೆರಡೂ ಬೇರೆ ಬೇರೆ ನೆಲೆಗಳು ಎನಿಸಿದರೂ ಇವೆರಡರ ನಡುವೆ ಒಂದು ನಂಟು ಇರುವುದನ್ನು ಮರೆಯುವಂತಿಲ್ಲ. ಏಕೆಂದರೆ ಜ್ಞಾನೋದಯವನ್ನು ಅನುಸರಿಸಿ ಬೆಳೆದ ರೊಮ್ಯಾಂಟಿಕ್ ಚಿಂತನೆಗಳ ಅವಧಿಯಲ್ಲಿ ಈ ನಂಟು ಮುಂಚೂಣಿಗೆ ಬರುವುದನ್ನು ಕಾಣುತ್ತೇವೆ.

ಹದಿನೆಂಟು–ಹತ್ತೊಂಬತ್ತನೆಯ ಶತಮಾನಗಳ ಜರ್ಮನ್ ಚಿಂತಕ ವಿಲಿಯಂ ಹಂಬೋಲ್ಟ್‌ನ ಅಧ್ಯಯನಗಳು ಕೇವಲ ಒಂದು ನುಡಿಗೆ ಇಲ್ಲವೇ ಯುರೋಪಿನ ನುಡಿಗಳಿಗೆ ಮಾತ್ರ ಸೀಮಿತವಾಗಿರಲಿಲ್ಲ. ರೊಮಾನ್ಸ್ ಮತ್ತು ಜರ್ಮಾನಿಕ್ ನುಡಿಗಳ ಹೊರತಾಗಿಯೂ ಹಲವಾರು ನುಡಿಗುಂಪುಗಳಿಗೆ ಸೇರಿದ ನುಡಿಗಳ ಮಾಹಿತಿಗಳು ಅವನಲ್ಲಿ ಇದ್ದವು. ನಿಡುಗಾಲದ ಪ್ರವಾಸಗಳಿಂದಾಗಿ ಈ ಮಾಹಿತಿಗಳನ್ನು ಸಂಗ್ರಹಿಸುವುದು ಅವನಿಗೆ ಸಾಧ್ಯವಾಗಿತ್ತು. ಇದರಿಂದಾಗಿ ಅವನಲ್ಲಿ ಹಲವಾರು ಗೊಂದಲಗಳು ಉಂಟಾಗಿದ್ದವು. ಪರಸ್ಪರ ವಿರುದ್ಧವಾದ ಚಿಂತನೆಗಳ ತುಯ್ದಾಟಕ್ಕೆ ಅವನು ಒಳಗಾಗಿದ್ದನು. ತಾತ್ವಿಕ ನಿರೂಪಣೆಗಳಿಗಾಗಿ ವಿಚಾರವಾದವು ಅವಲಂಬಿಸುವ ನಿಗಮನ ತರ್ಕ ಮತ್ತು ಲಭ್ಯ ಮಾಹಿತಿಗಳನ್ನು ಬಳಸಿ ವಿಶ್ಲೇಷಣೆ ಮಾಡುವ ಅನುಗಮನ ತರ್ಕಗಳ ನಡುವೆ ಅವನ ಆಯ್ಕೆ ತುಯ್ದಾಡುತ್ತಿತ್ತು. ಪೋರ್ಟ್ ರಾಯಲ್ ಗ್ರಾಮರ್ ಪ್ರತಿಪಾದಿಸುತ್ತಿದ್ದ ಎಲ್ಲ ನುಡಿಗಳಿಗೂ ಸಮಾನವಾದ ರಾಚನಿಕತೆಯು ಇರುವುದೆಂಬ ನಿಲುವು ಮತ್ತು ತನ್ನದೇ ಆದ ಅಧ್ಯಯನಗಳಿಂದ ದೊರೆತಿದ್ದ ವಿವಿಧ ನುಡಿಗಳ ರಚನೆಗಳು ಒಂದಕ್ಕಿಂತ ಒಂದು ಬೇರೆ ಆಗಿರಬಹುದು ಎಂಬ ಚಿಂತನೆ ಇವುಗಳ ನಡುವೆ ಯಾವುದು ಸರಿ ಎಂಬ ತುಯ್ದಾಟಕ್ಕೆ ಆತ ಒಳಗಾಗಿದ್ದನು. ಹಂಬೋಲ್ಟ್‌ಗೆ ವ್ಯಕ್ತಿಯು ತನ್ನ ಅನನ್ಯ ಚಿಂತನೆಗಳನ್ನು ನುಡಿಯ ಮೂಲಕ ಅಭಿವ್ಯಕ್ತಿ ಮಾಡಬಲ್ಲನೆಂದು ನಂಬಿಕೆ ಇತ್ತು. ರೊಮ್ಯಾಂಟಿಕ್ ಯುಗವು ನಂಬಿದ್ದ ವ್ಯಕ್ತಿಗತ ಸೃಜನಶೀಲತೆಯ ಹಿನ್ನೆಲೆಯಲ್ಲಿ ಈ ನಿಲುವು ಸಹಜವೇ ಆಗಿತ್ತು. ಆದರೆ ನುಡಿಯು ವ್ಯಕ್ತಿಯ ಚಿಂತನೆಯನ್ನು ನಿಯಂತ್ರಿಸುತ್ತದೆ ಎನ್ನುವುದೂ ಕೂಡ ಅವನಿಗೆ ಒಪ್ಪಿಗೆ ಆದ ವಿಚಾರವಾಗಿತ್ತು. ಈ ಎಲ್ಲ ತುಯ್ತಗಳು ಹಂಬೋಲ್ಟ್‌ನ ಜೀವಿತಾವಧಿಯ ಮೊದಲ ಹಂತದಲ್ಲಿ ಇದ್ದಿತಾದರೂ ಚಿಂತನೆಗಳು ಪಕ್ವಗೊಂಡಂತೆ ಆತ ತನ್ನ ತುಯ್ತಗಳಿಂದ ಹೊರಬಂದೆನೆಂದು ಅವನ ವಿಚಾರಗಳನ್ನು ಕುರಿತು ಅಧ್ಯಯನ ಮಾಡಿದವರು ಸ್ಪಷ್ಟಪಡಿಸುತ್ತಾರೆ.

ತನ್ನ ಜೀವಿತಾವಧಿಯ ಉತ್ತರಾರ್ಧದಲ್ಲಿ ಹಂಬೋಲ್ಟ್ ನುಡಿಯ ರಾಚನಿಕ ನೆಲೆಗಳು ವ್ಯಕ್ತಿಯ ಚಿಂತನೆಯ ಸ್ವರೂಪವನ್ನು ಪ್ರಭಾವಿಸುತ್ತವೆ ಎಂದು ಪ್ರತಿಪಾದಿಸಿದನು. ಎಲ್ಲ ನುಡಿಗಳಿಗೂ ಸಮಾನವಾದ ಚಿಂತನಾ ನೆಲೆಗಳಿರುತ್ತವೆ ಎಂದು ಹೇಳಿದ್ದ ಕಾಂಟ್‌ನ ನಿಲುವನ್ನು ಹಂಬೋಲ್ಟ್ ತನ್ನ ಜೀವಿತಾವಧಿಯಲ್ಲಿ ಮೊದಮೊದಲು ಒಪ್ಪಿದ್ದನಾದರೂ ಬಳಿಕ ತನ್ನ ಅಧ್ಯಯನದ ಮೂಲಕ ದೊರೆತ ಮಾಹಿತಿಗಳನ್ನು ಆಧರಿಸಿ ನುಡಿಗಳ ನಡುವೆ ರಾಚನಿಕ ವ್ಯತ್ಯಾಸಗಳಿರುತ್ತವೆ ಎಂಬ ನಿಲುವಿಗೆ ತಲುಪಿದ್ದನು. ಹಾಗಾಗಿ ತನ್ನ

ವಿಚಾರಗಳನ್ನು ಮಾರ್ಪಡಿಸಿಕೊಳ್ಳುವ ಅಗತ್ಯವನ್ನು ಮನಗಂಡಿದ್ದನು. ನುಡಿಗಳು ಹೇಗೆ ಹುಟ್ಟಿದವು ಎಂಬುದು ಹಂಬೋಲ್ಟ್‌ನನ್ನೂ ಕಾಡಿಸುತ್ತಿದ್ದ ಪ್ರಶ್ನೆಯಾಗಿತ್ತು. ಈ ಪ್ರಶ್ನೆಯನ್ನು ಬಿಡಿಸುವಲ್ಲಿ ಇರುವ ಸಂಕಷ್ಟಗಳನ್ನು ಆತ ಅರಿತಿದ್ದನು. ಹಾಗಾಗಿ ಅದನ್ನು ಬಿಡಿಸುವ ಗೋಜಿಗೆ ಹೋಗದೆ ಬೇರೊಂದು ರೀತಿಯಲ್ಲಿ ನುಡಿಗಳ ಬೆಳವಣಿಗೆಯನ್ನು ಕುರಿತಂತೆ ತನ್ನ ವಿಚಾರಗಳನ್ನು ಮಂಡಿಸಿದನು. ಅವನು ಹೇಳುವಂತೆ ನುಡಿಗಳು ಒಂದು ಹಂತದವರೆಗೆ ವಿಕಾಸ ಹೊಂದುತ್ತಾ ಹೋಗುತ್ತವೆ. ಆದರೆ ಅದನ್ನು ಬಳಸುವವರಿಗೆ ತಮ್ಮ ವಿಚಾರಗಳನ್ನು ಮಂಡಿಸುವಾಗ ಹೆಚ್ಚು ಸ್ವಾತಂತ್ರ್ಯವಿರುತ್ತದೆ. ಒಂದು ಹಂತ ಕಳೆದ ಬಳಿಕ ನುಡಿಗಳು 'ಪ್ರಬುದ್ಧ' ಹಂತವನ್ನು ತಲುಪುತ್ತವೆ. ಆಗ ಅವುಗಳನ್ನು ಬದಲಿಸಲು ಸಾಧ್ಯವಿಲ್ಲ. ಅದನ್ನು ಬಳಸುವ ವ್ಯಕ್ತಿ ತನ್ನ ಸ್ವಂತ ಯತ್ನದಿಂದ ತನಗೆ ಬೇಕಾದಂತೆ ಅದರ ರಚನೆಯನ್ನು ಬದಲಿಸಲಾರ. ನುಡಿಗಳು ತಲುಪುವ ಈ ಹಂತ ಅಂತಿಮವಾದುದು. ಮತ್ತು ಆ ಹಂತದಿಂದ ಮರಳಿ ಹಿಂದಕ್ಕೆ ಆ ನುಡಿಯನ್ನು ಒಯ್ಯಲು ಸಾಧ್ಯವಾಗದು. ನಾವು ಬಲ್ಲ ಎಲ್ಲ ನುಡಿಗಳೂ ಈ ಹಂತವನ್ನು ತಲುಪಿಬಿಟ್ಟಿವೆ ಎಂಬುದು ಹಂಬೋಲ್ಟ್‌ನ ಅಭಿಮತವಾಗಿತ್ತು.ಆದ್ದರಿಂದ ನುಡಿಗಳು ಮತ್ತು ಅವು ಒದಗಿಸುವ ಚೌಕಟ್ಟುಗಳು ಆ ನುಡಿಯನ್ನಾಡುವ ಜನರ ಚಿಂತನಾಕ್ರಮದ ಮೇಲೆ ಪ್ರಭಾವ ಬೀರುತ್ತವೆ ಎನ್ನುವುದು ಹಂಬೋಲ್ಟ್‌ನ ನಿಲುವಾಗಿತ್ತು ಎಂದು ತಿಳಿಯಬಹುದು.

ಮುಂದೆ ಈ ವಿಚಾರಗಳನ್ನು ಚರ್ಚೆಗೆ ಗುರಿಪಡಿಸಿದಾತ ಫ್ರಾನ್ಜ್ ಬೋಆಸ್. ಈತ ಅಮೆರಿಕಾದ ಮಾನವ ಶಾಸ್ತ್ರಜ್ಞ. ಅವನ ಚಿಂತನೆಗಳನ್ನು ಸಂಗ್ರಹಿಸಿ ಹೇಳುವುದಾದರೆ ಹೀಗೆ ಹೇಳಬಹುದು: ಬೇರೆ ಬೇರೆ ಸಂಸ್ಕೃತಿಗಳಲ್ಲಿ ಮೇಲುಕೀಳು ಎಂಬ ತಾರತಮ್ಯ ಸಲ್ಲದು; ಪ್ರತಿಯೊಂದು ಸಂಸ್ಕೃತಿಯೂ ತನ್ನದೇ ಆದ ಅಸ್ಮಿತೆಯನ್ನು ಹೊಂದಿರುತ್ತದೆ. ಈ ಅಸ್ಮಿತೆಯು ಅದರ ಲೋಕ ದೃಷ್ಟಿಯಲ್ಲಿದೆ: ಈ ಲೋಕ ದೃಷ್ಟಿಯು ಅವರ ಲೋಕ ಗ್ರಹಿಕೆಯನ್ನು ರೂಪಿಸುತ್ತದೆ; ಮತ್ತು ಅವರ ಆಲೋಚನಾ ಕ್ರಮವನ್ನು ನಿರ್ದೇಶಿಸುತ್ತದೆ. ಇವೆಲ್ಲವೂ ಆ ಸಂಸ್ಕೃತಿಯ ನುಡಿಯಲ್ಲಿ ಬಿಂಬಿತವಾಗುತ್ತದೆ. ಇದಿಷ್ಟು ಬೋಆಸ್‌ನ ವಿಚಾರಗಳು. ಬೋಆಸ್‌ಗೆ ಹಮನ್, ಹರ್ಡರ್ ಮತ್ತು ಹಂಬೋಲ್ಟ್ ಇವರು ತಮ್ಮ ಚಿಂತನೆಗಳನ್ನು ಮಂಡಿಸಿದ ಬರಹಗಳ ಪರಿಚಯ ಇದ್ದಿತೇ ಇಲ್ಲವೇ ಎಂಬ ಬಗೆಗೆ ಖಚಿತವಾಗಿ ಹೇಳಬರುವುದಿಲ್ಲ. ಆದರೆ ಪ್ರಾಸಂಗಿಕ ಮಾಹಿತಿಗಳಿಂದ ಆತನಿಗೆ ಅವರ ಚಿಂತನೆಗಳ ಎಳೆಗಳು ಗೊತ್ತಿದ್ದವು ಎಂದು ಊಹಿಸಲು ಸಾಧ್ಯವಿದೆ. ಬೋಆಸ್‌ನ ವಿಚಾರಗಳ ಎಳೆ ಹಿಡಿದು ತಮ್ಮ ಚಿಂತನೆಗಳನ್ನು ಬೆಳೆಸಿದವರೆಂದು ಸಪೀರ್ ಮತ್ತು ವೂರ್ಫ್ ಇವರನ್ನು ಗುರುತಿಸಲಾಗಿದೆ. ಎಡ್ವರ್ಡ್ ಸಪೀರ್ ಬೋಆಸ್‌ನ ವಿದ್ಯಾರ್ಥಿಯಾಗಿದ್ದನು. ಅವನಿಂದ ಪ್ರೇರಿತನಾಗಿ ಅಮೆರಿಕದ ಸ್ಥಳೀಯ ಬುಡಕಟ್ಟುಗಳ ನುಡಿಗಳ ಅಧ್ಯಯನದಲ್ಲಿ ತೊಡಗಿಸಿಕೊಂಡಿದ್ದನು. ಆದರೆ ತನ್ನ ಸ್ನಾತಕೋತ್ತರ ಪದವಿಗಾಗಿ ಹರ್ಡರ್‌ನ ನುಡಿ ಕುರಿತು ಬರೆದ ಹೊತ್ತಗೆಯಾದ 'ಟ್ರೀಟೀಸ್ ಆನ್ ದ ಆರಿಜಿನ್ ಆಫ್ ಲಾಂಗ್ವೇಜ್' ಅನ್ನು ವಿವರವಾಗಿ ಅಧ್ಯಯನ ಮಾಡಿದ್ದನು; ಅದನ್ನು ತನ್ನ ವಿಶ್ಲೇಷಣೆಗೆ ಒಳಪಡಿಸಿದ್ದನು.

ಬೆಂಜಮಿನ್ ಲಿ ವೂರ್ಫ್ ಕೆಮಿಕಲ್ ಎಂಜಿನಿಯರಿಂಗ್ ವಿದ್ಯಾರ್ಥಿ. ತನ್ನ ಅಧ್ಯಯನಾವಧಿಯಲ್ಲಿ ಯಾವುದೋ ಹಂತದಲ್ಲಿ ನುಡಿಗಳ ಅಧ್ಯಯನದಲ್ಲಿ ಆಸಕ್ತಿ ಬೆಳೆಸಿಕೊಂಡನು. ಆತ ಯೇಲ್ ವಿಶ್ವವಿದ್ಯಾಲಯದಲ್ಲಿ ಸಪೀರ್‌ನ ವಿದ್ಯಾರ್ಥಿಯಾಗಿ ನುಡಿಯರಿಮೆಯಲ್ಲಿ ತರಬೇತಿಯನ್ನು ಪಡೆದಿದ್ದನು. ನುಡಿ ಮತ್ತು ಸಮುದಾಯದ ಚಿಂತನಾ ಕ್ರಮಗಳ ನಂಟನ್ನು ಕುರಿತಂತೆ ಸಪೀರ್ ಮಂಡಿಸಿದ್ದ ವಿಚಾರಗಳನ್ನು ಅವನ ಉಪನ್ಯಾಸಗಳ ಮೂಲಕ ಕೇಳಿದ್ದನು. ಆದರೆ ದಿಟವಾಗಿ ಇವರಿಬ್ಬರೂ ಬೋಆಸ್‌ನ ಬರಹಗಳನ್ನು ಓದಿ ಅವುಗಳಿಂದ ಪ್ರಭಾವಿತರಾಗಿದ್ದರು ಎಂಬುದನ್ನು ಖಚಿತಪಡಿಸುವ ಆಕರಗಳು ದೊರಕುವುದಿಲ್ಲ. ಪ್ರಾಸಂಗಿಕವಾಗಿ ಬರುವ ಒಂದೆರಡು ಉಲ್ಲೇಖಗಳನ್ನು ಬಿಟ್ಟರೆ ಇವರಿಗೆ ಬೋಆಸ್ ವಿಚಾರಗಳು ಅಪರಿಚಿತವಾಗಿದ್ದವೆಂದೇ ತಿಳಿಯಬೇಕಿದೆ.

ಎಡ್ವರ್ಡ್ ಸಪೀರ್ ಈಗಾಗಲೇ ಹೇಳಿದಂತೆ ಅಮೆರಿಕನ್ ಇಂಡಿಯನ್ ನುಡಿಗಳನ್ನಾಡುವವರಿಂದಲೇ ಮಾಹಿತಿಯನ್ನು ಸಂಗ್ರಹಿಸಿ ಆ ನುಡಿಗಳನ್ನು, ಅವುಗಳ ರಚನೆಯನ್ನು ಅಧ್ಯಯನ ಮಾಡಿದ್ದನು. ಎಲ್ಲ ನುಡಿಗಳಿಗೂ ಸಮಾನವಾದ ರಾಚನಿಕ ನೆಲೆಗಟ್ಟು ಇರುವುದೆಂಬ ಪೋರ್ಟ್ ರಾಯಲ್ ಗ್ರಾಮರ್ ನಿರೂಪಿಸಿದ್ದ ನಿಲುವನ್ನು ಒಪ್ಪುವುದು ಈ ಹೊಸ ಮಾಹಿತಿಯ ಬೆಳಕಿನಲ್ಲಿ ಈತನಿಗೆ ಅಸಾಧ್ಯವೆನಿಸಿತ್ತು. ಆ ಕಾಲಕ್ಕೆ ಪ್ರಚಲಿತವಿದ್ದ ಮಾನವಶಾಸ್ತ್ರದ ಪರಿಕಲ್ಪನೆಗಳೂ ಆದಿಮ ಜನಾಂಗಗಳ ಬಗೆಗೆ ಆಸಕ್ತಿಯನ್ನು ಹೊಂದಿದ್ದವು. ಈ ಪರಿಕಲ್ಪನೆಗಳು 'ಆದಿಮ' ಎನ್ನುವ ಮಾತನ್ನು ಹಳೆಯದು, ಬಹು ಹಿಂದಿನಿಂದಲೂ ಬದುಕುಳಿದಿರುವುದು ಎಂಬ ನೆಲೆಯ ಜೊತೆಗೆ ಇನ್ನೂ ವಿಕಾಸ ಹೊಂದದಿರುವುದು, ನಿಧಾನಗತಿಯಲ್ಲಿ ಬೆಳೆಯುತ್ತಿರುವುದು ಎಂಬ ನೆಲೆಯಲ್ಲೂ ವ್ಯಾಖ್ಯಾನಿಸುತ್ತಿದ್ದವು. ಈ ವಿವರಣೆಗಳನ್ನು ಆ ಆದಿಮ ಸಮುದಾಯಗಳು ಬಳಸುತ್ತಿದ್ದ ನುಡಿಗಳಿಗೂ ಅನ್ವಯಿಸುತ್ತಿದ್ದರು. ಅಂದರೆ ನಾಗರಿಕ ನುಡಿಗಳು ಈಗಾಗಲೇ ವಿಕಾಸ ಹೊಂದಿರುವಂತಹವು; ಬುಡಕಟ್ಟುಗಳ ನುಡಿಗಳು ಇನ್ನೂ ಆದಿಮ ಸ್ಥಿತಿಯಲ್ಲೇ ಇರುವಂತಹವು ಎಂಬುದು ಈ ನಿಲುವಿನ ತಿರುಳಾಗಿತ್ತು. ಆದರೆ ಇದನ್ನು ಒಪ್ಪದಿರುವ ಚಿಂತಕರೂ ಇದ್ದರು. ಅವರು ನುಡಿಗಳಲ್ಲಿ ಇರುವ ಭಿನ್ನತೆಗಳು, ಆ ನುಡಿಗಳು ವಿಕಾಸದ ಯಾವ ಹಂತದಲ್ಲಿವೆ ಇಲ್ಲವೇ ಆ ನುಡಿಗಳನ್ನು ಆಡುವ ಸಮುದಾಯಗಳು ವಿಕಾಸದ ಯಾವ ಹಂತದಲ್ಲಿವೆ ಎನ್ನುವುದನ್ನು ಅವಲಂಬಿಸಿರುವುದಿಲ್ಲ. ಏಕೆಂದರೆ ಎಲ್ಲ ನುಡಿಗಳೂ ಸಮಾನವಾಗಿ ವಿಕಾಸ ಹೊಂದಿರುತ್ತವೆ. ಹಾಗಿದ್ದರೆ ಅವುಗಳ ನಡುವಣ ಭಿನ್ನತೆಗೆ ಕಾರಣಗಳೇನು? ಸಪೀರ್ ಮುಂತಾದವರು ಈ ಭಿನ್ನತೆಯನ್ನು ಆಯಾ ನುಡಿಗಳನ್ನಾಡುವ ಸಮುದಾಯಗಳು ಹೊಂದಿರುವ ಲೋಕ ದೃಷ್ಟಿಗೆ ಆರೋಪಿಸಿದರು. ಅಂದರೆ ಸಮುದಾಯಗಳ ಲೋಕ ದೃಷ್ಟಿ ಭಿನ್ನವಾಗಿರುವಂತೆ ಅವರಾಡುವ ನುಡಿಗಳೂ ಭಿನ್ನವಾಗಿರುತ್ತವೆ ಎಂದು ತಿಳಿದರು.

ಈ ಹಿನ್ನೆಲೆಯಲ್ಲಿ ಸಪೀರ್ ಮಂಡಿಸಿದ ಚಿಂತನೆಯ ತಿರುಳು ಹೀಗಿದೆ: ನುಡಿಯನ್ನಾಡುವವರು ಲೋಕವನ್ನು ಹೇಗೆ ಗ್ರಹಿಸುತ್ತಾರೆ ಎಂಬುದು ಅವರು ಆಡುವ ನುಡಿಯಲ್ಲಿ ಅದರ ಪದಕೋಶದಲ್ಲಿ (ಕೆಲವೊಮ್ಮೆ ಅದರ ವ್ಯಾಕರಣಾಂಶಗಳಲ್ಲಿ)

ಅಂತಸ್ಥವಾಗಿರುತ್ತದೆ. ಸಮುದಾಯಗಳ ಸಂಬಂಧ ಸೂಚಕ ಪದಗಳು, ಎಣಿಕೆಯ ಪದಗಳು, ಬಣ್ಣಗಳನ್ನು ಸೂಚಿಸುವ ಪದಗಳು ಇವೇ ಮೊದಲಾದ ನೆಲೆಗಳಲ್ಲಿ ಆಯಾ ಸಮುದಾಯದ್ದೇ ಆದ ಲೋಕ ದೃಷ್ಟಿ ಇರುವುದನ್ನು ಗುರುತಿಸಲು ಸಾಧ್ಯ. ಲೋಕಾನುಭವವನ್ನು ಸಾಮಾನ್ಯೀಕರಿಸುವ ನೆಲೆಯಲ್ಲೂ ಸಮುದಾಯದಿಂದ ಸಮುದಾಯಕ್ಕೆ ವ್ಯತ್ಯಾಸಗಳಿರುತ್ತವೆ. ಪ್ರತಿಯೊಂದು ಮರ ಗಿಡಗಳ ವರ್ಗಕ್ಕೂ ಬೇರೆ ಬೇರೆ ಪದಗಳಿದ್ದರೂ ಕೇವಲ ಮರ ಇಲ್ಲವೇ ಗಿಡ ಎಂಬ ಅಮೂರ್ತ ನೆಲೆಗೆ ಒಂದು ಪದವಿಲ್ಲದೇ ಇರಬಹುದು. ಒಂದು ಸಮುದಾಯ ಕೆಂಪು ಎಂದು ಗುರುತಿಸುವ ಬಣ್ಣವನ್ನು ಬೇರೊಂದು ಸಮುದಾಯ ಹಲವು ಬೇರೆ ಬೇರೆ ಬಣ್ಣಗಳ ಸರಣಿಯೆಂದು ಗುರುತಿಸಬಹುದು. ಅಲ್ಲದೆ ಆ ಸರಣಿಯ ಬೇರೆ ಬೇರೆ ಛಾಯೆಗಳಿಗೂ ಬೇರೆ ಬೇರೆ ಹೆಸರುಗಳನ್ನು ಬಳಸುತ್ತಿರಬಹುದು. ಕೆಂಪು ಎಂಬ ಒಂದೇ ಪದವಿರುವ ಸಮುದಾಯದವರು ಕೆಂಪಿನ ಹಲವು ಛಾಯೆಗಳನ್ನು ಗುರುತಿಸಲು ಸೋಲುತ್ತಾರೆ. ಇದರಿಂದ ಪ್ರತಿ ನುಡಿ ಸಮುದಾಯದ ಲೋಕ ಗ್ರಹಿಕೆಗೂ ಆ ಸಮುದಾಯದ ನುಡಿಗೂ ಬಿಡಿಸಲಾರದ ನಂಟು ಇರುತ್ತದೆ.

ಬೆಂಜಮಿನ್ ಲಿ ವೂರ್ಫ್ ದಕ್ಷಿಣ ಅಮೆರಿಕಾದ ಮಾಯಾ ಸಂಸ್ಕೃತಿ ಪ್ರದೇಶದ ಸಮುದಾಯಗಳ ನುಡಿಗಳನ್ನು ಆಡುವ ಜನರನ್ನು ಗಮನಿಸಿದ್ದನು. ಜೊತೆಗೆ ಸಫೀರ್‌ನ ಸಂಪರ್ಕಕ್ಕೆ ಬಂದ ಮೇಲೆ ಉತ್ತರ ಅಮೆರಿಕಾದ ಮೂಲ ನಿವಾಸಿಗಳ ನುಡಿಯಾಗಿರುವ ಹೋಪಿಯನ್ನು ಕುರಿತು ಅಧ್ಯಯನ ನಡೆಸಿದ್ದನು. ಹೋಪಿ ಎಂಬುದು ಉತ್ತರ ಅಮೆರಿಕಾ ದೇಶದ ಅರಿಜೋನಾ ಪ್ರಾಂತ್ಯದ ಮೂಲ ನಿವಾಸಿಗಳು ಆಡುವ ನುಡಿ. ಈ ನುಡಿಯ ರಚನೆಯನ್ನು ಅರಿಯಲು ತೊಡಗಿದ ವೂರ್ಫ್ ತನ್ನ ಅಧ್ಯಯನದ ಫಲಿತಗಳನ್ನು ಹೋಪಿ ನುಡಿಯ ವ್ಯಾಕರಣ ಎಂಬ ಚೌಕಟ್ಟಿನಲ್ಲಿ ಹೊರತಂದನು. ಆತ ಕಂಡುಕೊಂಡ ಸಂಗತಿಗಳಲ್ಲಿ ಆತನಿಗೆ ಮುಖ್ಯವೆನಿಸಿದ ಅಂಶವೊಂದಿತ್ತು. ಅದೆಂದರೆ ಹೋಪಿ ನುಡಿಯಲ್ಲಿ ಕಾಲವನ್ನು ಭೂತ, ವರ್ತಮಾನ ಮತ್ತು ಭವಿಷ್ಯ ಎಂದು ಬೇರ್ಪಡಿಸುವ ವ್ಯವಸ್ಥೆಯೇ ಇಲ್ಲ ಎಂಬುದಾಗಿತ್ತು. ವೂರ್ಫ್‌ಗೆ ಪರಿಚಿತವಾಗಿದ್ದ ಇಂಗ್ಲಿಶ್ ನುಡಿಯಲ್ಲಿ ವ್ಯವಸ್ಥಿತವಾಗಿ ಕಾಣಬರುತ್ತಿದ್ದ ಕಾಲವ್ಯವಸ್ಥೆಯ ಪ್ರತಿನಿಧೀಕರಣ ಹೋಪಿ ನುಡಿಯಲ್ಲಿ ಇಲ್ಲದೇ ಇರುವುದು ಅವನಿಗೆ ಬಹಳ ಮುಖ್ಯ ಎನಿಸಿತ್ತು. ಅದನ್ನು ಆಧರಿಸಿ ಒಂದು ಸಿದ್ಧಾಂತವನ್ನು ಆತ ರೂಪಿಸಿದನು. ಒಂದು ನುಡಿಯ ರಚನೆಯ ಚಹರೆಗಳು ಆ ನುಡಿಯನ್ನಾಡುವ ಜನ ಸಮುದಾಯದ ಲೋಕ ದೃಷ್ಟಿಯನ್ನು ನಿಯಂತ್ರಿಸುತ್ತವೆ ಎಂಬುದು ಆ ಸಿದ್ಧಾಂತದ ತಿರುಳಾಗಿತ್ತು. ಅಂದರೆ ಹೋಪಿ ನುಡಿಯಲ್ಲಿ ಕಾಲವನ್ನು ಬಿಂಬಿಸುವ ವ್ಯವಸ್ಥೆ ಇಲ್ಲವಾದ್ದರಿಂದ ಹೋಪಿ ನುಡಿಯನ್ನು ಆಡುವ ಜನ ಸಮುದಾಯವೂ ಕಾಲವನ್ನು ನಿನ್ನೆ-ಇಂದು-ನಾಳೆಗಳೆಂದು ಬೇರೆ ಮಾಡಿ ಪರಿಗ್ರಹಿಸಲಾರದು ಎಂದು ಆತನ ಸಿದ್ಧಾಂತದ ತಿರುಳಾಗಿತ್ತು. ಇಲ್ಲವೇ ಇದನ್ನು ಹೀಗೂ ಹೇಳಬಹುದು: ಹೋಪಿ ನುಡಿಯನ್ನು ಆಡುವ ಜನರ ಲೋಕ ದೃಷ್ಟಿಯಲ್ಲಿ ಕಾಲವನ್ನು ನಿನ್ನೆ-ಇಂದು-ನಾಳೆ ಎಂದು ವರ್ಗೀಕರಿಸುವ ಕ್ರಮ ಇಲ್ಲವಾದ್ದರಿಂದ

ಅವರ ನುಡಿಯಲ್ಲೂ ಈ ವರ್ಗೀಕರಣ ಇಲ್ಲವೆಂಬುದು ಅವನ ತೀರ್ಮಾನವಾಗಿತ್ತು. ಹೋಪಿ ನುಡಿಯ ಮಾಹಿತಿಯನ್ನು ಹೊರತುಪಡಿಸಿಯೂ ತಾನು ಗಮನಿಸಿದ್ದ ಇತರ ನುಡಿಗಳ ಮತ್ತು ನುಡಿ ಬಳಕೆಗಳ ಸನ್ನಿವೇಶಗಳನ್ನು ಆಧರಿಸಿ ವೂರ್ಫ್ ತನ್ನ ಈ ಮೇಲಿನ ಸಿದ್ಧಾಂತವನ್ನು ಸಮರ್ಥಿಸಿದ್ದನು.

ವೂರ್ಫ್ ಪ್ರತಿಪಾದಿಸಿದ ಈ ಸಿದ್ಧಾಂತದ ಹಿಂದೆ ಅವನಿಗೆ ಆಗ ಹೆಚ್ಚು ಪ್ರಚಾರಕ್ಕೆ ಬಂದಿದ್ದ ಐನ್‌ಸ್ಟೀನ್‌ನ ಸಾಪೇಕ್ಷ ಸಿದ್ಧಾಂತದ ಛಾಯೆ ಇತ್ತು. ಆತ ಓದಿದ್ದು ಎಲೆಕ್ಟ್ರಿಕಲ್ ಇಂಜನಿಯರಿಂಗ್. ಹಾಗಾಗಿ ಆತನಿಗಿದ್ದ ವಿಜ್ಞಾನದ ಹಿನ್ನೆಲೆ ಐನ್‌ಸ್ಟೀನ್ ಪ್ರತಿಪಾದಿಸಿದ ಸಾಪೇಕ್ಷ ಸಿದ್ಧಾಂತವನ್ನು ಗ್ರಹಿಸಲು ನೆರವಾಗಿತ್ತು. ಕಾಲ ಮತ್ತು ದೇಶಗಳ ಹರಿವಿನ ನಂಟನ್ನು ಸಾಪೇಕ್ಷ ಸಿದ್ಧಾಂತವು ಗ್ರಹಿಸಿದ ರೀತಿಗೆ ಹೋಪಿ ನುಡಿಯಲ್ಲಿ ತಕ್ಕ ಪುರಾವೆ ಇದೆ ಎಂದು ವೂರ್ಫ್‌ಗೆ ಅನಿಸಿದ್ದರೆ ಅಚ್ಚರಿಯೇನೂ ಇಲ್ಲ.

ಹೀಗಿದ್ದರೂ ವೂರ್ಫ್‌ಗೆ ನುಡಿ ಮತ್ತು ಸಮುದಾಯದ ಚಿಂತನಾಕ್ರಮ/ಲೋಕ ದೃಷ್ಟಿಗಳ ನಡುವೆ ಇರುವ ನಂಟಿನ ಸ್ವರೂಪದ ಬಗೆಗೆ ಖಚಿತವಾದ ನಿಲುವು ಇದ್ದಿತು ಎಂದು ಹೇಳಲು ಬರುವುದಿಲ್ಲ. ನುಡಿಯ ರಚನೆ ಮತ್ತು ಲೋಕ ದೃಷ್ಟಿಗಳ ನಡುವೆ ನಂಟು ಇರುವುದೆಂಬ ಬಗೆಗೆ ಆತನಿಗೆ 'ಅನಿಸಿತ್ತೇ' ಹೊರತು ಅದನ್ನು ಸಾಧಿಸಿ ತೋರಿಸುವ ದಾರಿಗಳಿವೆ ಎಂದು ಆತ ನಂಬಿರಲಿಲ್ಲ. ತನ್ನ ಬರಹದಲ್ಲಿ ಒಂದೆಡೆ ಆತ 'ಯಾವುದು ಮೊದಲು? ನುಡಿ ರಚನೆಯೋ ಇಲ್ಲವೇ ಸಂಸ್ಕೃತಿಯ ಚೌಕಟ್ಟೋ? ಮುಖ್ಯವಾಗಿ ಇವೆರಡೂ ಒಟ್ಟೊಟ್ಟಿಗೆ ಬೆಳೆದಿವೆ; ಒಂದು ಇನ್ನೊಂದನ್ನು ನಿರಂತರವಾಗಿ ಪ್ರಭಾವಿಸುತ್ತಿವೆ. ಆದರೆ ಈ ಸಹಯೋಗದಲ್ಲಿ ನುಡಿಯ ಚಹರೆಗಳು ಬೆಳವಣಿಗೆಯ ಮುಕ್ತತೆಯನ್ನು, ನಮನಶೀಲತೆಯನ್ನು ಹತ್ತಿಕ್ಕಿ ನಿಯಂತ್ರಿಸುತ್ತವೆ' (Which was first: the language patterns or the cultural norms? In main they have grown up together, constantly influencing each other. But in this partnership the nature of the language is the factor that limits free plasticity and rigidifies channels of development in the more autocratic way) ಎಂದು ಹೇಳಿರುವುದುಂಟು. ನುಡಿ ಮತ್ತು ಲೋಕ ದೃಷ್ಟಿಗಳಲ್ಲಿ ಯಾವುದು ಯಾವುದನ್ನು ನಿಯಂತ್ರಿಸುತ್ತದೆ ಎಂಬುದನ್ನು ಗುರುತಿಸಲು ಬರುವುದಿಲ್ಲ. ಆದರೆ ಒಂದು ಇನ್ನೊಂದನ್ನು ಪ್ರಭಾವಿಸುತ್ತದೆ ಎಂದಷ್ಟೇ ಹೇಳಬಹುದು. ನುಡಿಯಲ್ಲಿ ಬದಲಾವಣೆ ಎನ್ನುವುದು ತೀರಾ ಮಂದಗತಿಯಲ್ಲಿ ನಡೆಯುತ್ತದೆ; ಸಮುದಾಯದ ಸಂಸ್ಕೃತಿಯಲ್ಲಿ ಬದಲಾವಣೆ ಎಂಬುದು ತೀವ್ರಗತಿಯಲ್ಲಿ ನಡೆಯುತ್ತದೆ. ಹಾಗಾಗಿ ನುಡಿ ರಚನೆಯ ಚೌಕಟ್ಟಿಗೆ ಸಮುದಾಯದ ಚಿಂತನಾಕ್ರಮವು ಹೊಂದಿಕೊಳ್ಳಬೇಕಾದ ಅನಿವಾರ್ಯ ಒದಗಿಬರುತ್ತದೆ ಎನ್ನುವುದು ವೂರ್ಫ್‌ನ ಗ್ರಹಿಕೆ ಆಗಿದ್ದಿರಬಹುದೆಂದು ಊಹಿಸಲಾಗಿದೆ. ಹಾಗೆ ನೋಡಿದರೆ ಅವನ ಬರಹಗಳನ್ನು ಸಮಗ್ರವಾಗಿ ಪರಿಶೀಲಿಸಿದರೆ ಮೂಡುವ ಚಿತ್ರವೇ ಬೇರೆಯಾಗಿದೆ. ವೂರ್ಫ್‌ನ ಬರಹಗಳಲ್ಲಿ (ಜೆ.ಬಿ.ಕ್ಯಾರೊಲ್ ಸಂಪಾದಿಸಿ ಪ್ರಕಟಿಸಿರುವ ಬರಹಗಳಲ್ಲಿ) ನುಡಿ ಮತ್ತು ಸಮುದಾಯಗಳ ಚಿಂತನಾ ಕ್ರಮಗಳ ನಡುವೆ ಇರುವ ನಂಟಿನ

ಸ್ವರೂಪದ ಬಗೆಗೆ ಅವನಿಗೆ ಹಲವು ಸಂಶಯಗಳಿದ್ದವು ಎಂಬುದನ್ನು ಗುರುತಿಸಲಾಗಿದೆ. ಈ ಸಂಬಂಧವು ಏಕಮುಖೀ ಎಂದು ತಿಳಿಯಬೇಕೆಂದು ಆತ ಎಲ್ಲಿಯೂ ಪ್ರತಿಪಾದಿಸಿದಂತೆ ತೋರುವುದಿಲ್ಲ. ಒಂದುವೇಳೆ ಅಂತಹ ಸಂಬಂಧವಿದ್ದರೂ ಅದು ಹೊರನೋಟಕ್ಕೆ ಕಾಣುವ ತಾತ್ಪೂರ್ವಿಕ ನೆಲೆಯದ್ದಾಗಿರುತ್ತದೆಯೇ ಹೊರತು ಅದನ್ನು ಇಡಿಯಾಗಿ ಎಲ್ಲ ಕಡೆಯೂ ಅನ್ವಯಿಸಲು ಬರುವುದಿಲ್ಲ ಎನ್ನುವುದೇ ವೂರ್ಫ್‌ನ 'ಅನಿಸಿಕೆ' ಆಗಿದ್ದಿತೆಂದು ತಿಳಿಯಲು ಕಾರಣಗಳಿವೆ. ಇದು ಸರಿ ಸುಮಾರಾಗಿ (ಮೇಲೆ ನಿರೂಪಿಸಿದ) ಹಂಬೋಲ್ಟ್‌ನ ವಿಚಾರಗಳಿಗೆ ಹೊಂದಿಕೆಯಾಗುವಂತಿದೆ.

ವೂರ್ಫ್‌ನ 'ಅನಿಸಿಕೆ'ಗಳು ಹೆಚ್ಚಾಗಿ ರೂಢಿಯ ಜಾಡಿಗೆ ಬಿದ್ದ ವರ್ತನೆಗಳನ್ನು ಗಮನಿಸಿದ್ದಂತೆ ತೋರುತ್ತದೆ. ಈಚಿನ ದಿನಗಳಲ್ಲಿ ಅವನ ಬರಹಗಳನ್ನು ವಿಶ್ಲೇಷಿಸಿರುವ ವಿದ್ವಾಂಸರು ನುಡಿ ಸಾಪೇಕ್ಷವಾದವನ್ನು ಆತ ಪ್ರತಿಪಾದಿಸುವಾಗ ತನ್ನ ಅನಿಸಿಕೆಗಳಿಗೆ ಅತಿವ್ಯಾಪ್ತಿ ಬಾರದಂತೆ ನೋಡಿಕೊಂಡಿದ್ದನು ಎಂಬ ನಿಲುವನ್ನು ತಾಳುತ್ತಾರೆ. ಕೆಲವೊಮ್ಮೆ ನಮ್ಮ ರೂಢಿಗತ ವರ್ತನೆಗಳನ್ನು ನಮ್ಮ ನುಡಿ ರಚನೆಗಳು ಪ್ರಭಾವಿಸುತ್ತಿರುತ್ತವೆ. ಉದಾಹರಣೆಗೆ 'ಡಾಕ್ಟರು ಬಂದರು' ಎಂದ ಕೂಡಲೇ ನಾವು ಒಬ್ಬ ಗಂಡಸನ್ನು ಕಲ್ಪಿಸಿಕೊಳ್ಳುತ್ತೇವೆ. ಹಾಗೆಯೇ 'ನರ್ಸ್ ಅನ್ನು ಕರೆ' ಎಂದ ಕೂಡಲೆ ಯಾರೋ ಹೆಂಗಸು ಇರಬೇಕೆಂದು ಹುಡುಕುತ್ತಿರುತ್ತೇವೆ. ವೂರ್ಫ್ ನುಡಿಯ ಅಧ್ಯಯನದಲ್ಲಿ ಆಸಕ್ತನಾಗುವ ಮೊದಲು ಕೆಲವು ಕಾಲ, ಅಗ್ನಿಶಾಮಕದಳದ ಅಧಿಕಾರಿಯಾಗಿ ಕೆಲಸ ಮಾಡುತ್ತಿದ್ದನು. ಆಗ ಬೆಂಕಿಯನ್ನು ಕುರಿತು ಜನರ ವರ್ತನೆಗಳನ್ನು ಗಮನಿಸುತ್ತಿದ್ದನು. ಆಗ ಕೂಡ ಅವನು ನುಡಿಗೂ ಜನರ ರೂಢಿಗತ ವರ್ತನೆಗಳಿಗೂ ಇರುವ ನಂಟನ್ನು ಗಮನಿಸುತ್ತಿದ್ದಂತಿದೆ. ಅವನ ದಿನಚರ್ಯೆಯ ಭಾಗವಾಗಿದ್ದ ಅಂತಹ ಒಂದು ಉದಾಹರಣೆಯನ್ನು ನೋಡೋಣ. ಒಂದು ಜಾಗದಲ್ಲಿ ಬೆಂಕಿಯಿಂದ ಸುಲಭವಾಗಿ ಹೊತ್ತಿಕೊಂಡು ಉರಿಯುವ ದ್ರವವಿರುವ ಪೀಪಾಯಿಗಳಿವೆ ಎಂದುಕೊಳ್ಳಿ. ಅಲ್ಲಿಯೇ ಕೆಲವು ಸ್ಫೋಟಕದ್ರವ ಖಾಲಿಯಾದ ಪೀಪಾಯಿಗಳೂ ಇವೆ ಎಂದುಕೊಳ್ಳಿ. 'ಸ್ಫೋಟಕ ದ್ರವದಿಂದ ತುಂಬಿರುವ ಪೀಪಾಯಿಗಳಿವೆ' ಎಂಬ ಎಚ್ಚರಿಕೆ ನೀಡುವ ಸೂಚನೆಯ ಫಲಕಗಳನ್ನು ಅಂತಹ ಪೀಪಾಯಿಗಳಿರುವ ಪ್ರದೇಶದಲ್ಲಿ ಪ್ರದರ್ಶಿಸಲಾಗಿರುತ್ತಿತ್ತು. ಹಾಗೆಯೇ 'ಸ್ಫೋಟಕ ದ್ರವ ಖಾಲಿಯಾಗಿರುವ ಪೀಪಾಯಿಗಳು' ಎಂಬ ಫಲಕವೂ ಅಂತಹ ಖಾಲಿ ಪೀಪಾಯಿಗಳಿರುವ ಇನ್ನೊಂದೆಡೆ ಇದೆ ಎಂದುಕೊಳ್ಳಿ. ಮೊದಲ ಫಲಕ ಆ ಪೀಪಾಯಿಗಳಿರುವ ಜಾಗದಲ್ಲಿ ಬೆಂಕಿ ಹತ್ತಿಕೊಳ್ಳುವ ಸಾಧ್ಯತೆ ಹೆಚ್ಚು ಎನ್ನುವುದನ್ನು ಸೂಚಿಸುತ್ತದೆ. ಎರಡನೆಯ ಫಲಕ ಆ ಜಾಗದಲ್ಲಿ ಬೆಂಕಿ ಹತ್ತಿಕೊಳ್ಳುವ ಸಾಧ್ಯತೆ ಕಡಿಮೆ ಎನ್ನುವ ಸೂಚನೆಯನ್ನು ನೀಡುತ್ತದೆ. ಇದು ರೂಢಿಗತ ಅನಿಸಿಕೆ. ಆದರೆ ನಡೆಯುತ್ತಿದ್ದುದೇನು? ವಾಸ್ತವದಲ್ಲಿ ಎರಡನೆಯ ಫಲಕ ಇರುವ ಕಡೆಗಳಲ್ಲೇ ಹೆಚ್ಚು ಬೆಂಕಿ ಅಪಘಾತಗಳು ನಡೆಯುವುದನ್ನು ವೂರ್ಫ್ ಗಮನಿಸಿದ್ದನು. ಎರಡನೆಯ ಫಲಕ ಇರುವ ಕಡೆ ಬೆಂಕಿ ಹೊತ್ತಿಕೊಳ್ಳಲಾರದು ಎಂಬ 'ನಂಬಿಕೆ'ಯ ಮೇಲೆ ಜನರು ಸಿಗರೇಟು ತುಂಡುಗಳನ್ನು ಎಸೆಯುತ್ತಿದ್ದರು. ಅಂದರೆ ನುಡಿಯಲ್ಲಿರುವ ಸೂಚನೆಗಳು

ಜನರು ಹೇಗೆ ವರ್ತಿಸುತ್ತಾರೆ, ಯೋಚಿಸುತ್ತಾರೆ ಎಂಬುದನ್ನು ಪ್ರಭಾವಿಸುತ್ತದೆ ಎಂದು ವೂರ್ಫ್ ಇಂತಹ ಸಂದರ್ಭಗಳಿಂದ ಗ್ರಹಿಸಿದನೆಂದು ಅವನ ಬರಹಗಳನ್ನು ಅಧ್ಯಯನ ಮಾಡಿದವರು ಹೇಳುತ್ತಾರೆ.

ಹಾಗೆ ನೋಡಿದರೆ ಸಪೀರ್ ಮತ್ತು ವೂರ್ಫ್ ಬೇರೆ ಬೇರೆಯಾಗಿಯೇ ಈ ಸಿದ್ಧಾಂತವನ್ನು 'ಕಂಡುಕೊಂಡಂತೆ' ತೋರುತ್ತದೆ. ಇವರಿಬ್ಬರೂ ಎಂದೂ ಒಟ್ಟಾಗಿ ತಮ್ಮ ಹೆಸರಿನಲ್ಲಿ ಈ ಪ್ರಮೇಯವನ್ನು ಪ್ರತಿಪಾದಿಸಲೇ ಇಲ್ಲ. ಇವರಿಬ್ಬರ ನಡುವೆ ಇದ್ದ ಗುರು–ಶಿಷ್ಯ ಸಂಬಂಧವನ್ನು ಆಧಾರವಾಗಿ ಇರಿಸಿಕೊಂಡು ಬೇರೆಯವರು ಸಪೀರ್–ವೂರ್ಫ್ ಪ್ರಮೇಯ ಎಂಬುದನ್ನು ಹೆಸರಿಸಿ ಚಾಲ್ತಿಗೆ ತಂದರು. ವೂರ್ಫ್‌ನ ಬರಹಗಳನ್ನು ಅವನ ಮರಣಾನಂತರ ಸಂಕಲಿಸಿ 1956 ರಲ್ಲಿ ಪ್ರಕಟಿಸಿದ ಜಾನ್.ಬಿ. ಕ್ಯಾರೊಲ್ ಈ ಪ್ರಮೇಯವನ್ನು ಇವರಿಬ್ಬರ ಹೆಸರಿನಲ್ಲಿ ಸೂಚಿಸಿದಂತಿದೆ. ಇದಕ್ಕೂ ಮೊದಲು ನುಡಿ ಮತ್ತು ಲೋಕ ದೃಷ್ಟಿಗಳ ನಂಟನ್ನು ಈ ಇಬ್ಬರೂ ಗ್ರಹಿಸುತ್ತಿದ್ದ ರೀತಿಯನ್ನು ಚರ್ಚಿಸಲಾಗುತ್ತಿತ್ತು. ಆದರೆ ಇದನ್ನೊಂದು ಪ್ರಮೇಯವೆಂದು ಮತ್ತು ಈ ಇಬ್ಬರೂ ಇದರ ಪ್ರತಿಪಾದಕರೆಂದು ಯಾರೂ ಹೇಳಿರಲಿಲ್ಲ. ಯಾವುದೇ ಅಧ್ಯಯನದಲ್ಲಿ ಪ್ರತಿಪಾದಿತವಾಗುವ ಪ್ರಮೇಯಕ್ಕೆ ಇರುವ ಶರತ್ತೆಂದರೆ ಆ ಪ್ರಮೇಯವನ್ನು ಪರೀಕ್ಷಿಸಿ ನೋಡಲು ಬೇಕಾದ ಪ್ರಾಯೋಗಿಕ ಚೌಕಟ್ಟನ್ನು ಪ್ರಮೇಯದ ಪ್ರತಿಪಾದಕರು ಒದಗಿಸಬೇಕು ಎಂಬುದು. ಆದರೆ ಇವರಿಬ್ಬರೂ ಒಟ್ಟಾಗಿ ಈ ಪ್ರಮೇಯವನ್ನು ಪ್ರತಿಪಾದಿಸಲೂ ಇಲ್ಲ; ಇದನ್ನು ಪರೀಕ್ಷಿಸಿಲು ಬೇಕಾದ ಪ್ರಾಯೋಗಿಕ ಚೌಕಟ್ಟನ್ನು ರೂಪಿಸಲೂ ಇಲ್ಲ. ಹಾಗೆ ರೂಪಿಸಲಿಲ್ಲ ಎಂಬ ಆರೋಪವನ್ನು ಅವರಿಬ್ಬರ ಮೇಲೆ ಹೊರಿಸುವಂತೆಯೂ ಇಲ್ಲ.

ಮೇಲಿನ ವಿವರಣೆ ಏನೇ ಇರಲಿ. ಕಳೆದ ಶತಮಾನದಲ್ಲಿ ಚಲಾವಣೆ ಪಡೆದುಕೊಂಡ ಈ ಸಪೀರ್–ವೂರ್ಫ್ ಪ್ರಮೇಯ ಆ ಬಳಿಕ ಹಲವು ಬಾರಿ, ಹಲವು ನೆಲೆಗಳಲ್ಲಿ ನಿರಾಕರಣೆಗೊಂಡಿದ್ದರೂ ಜನಪ್ರಿಯ ಚಿಂತನೆಯ ಭಾಗವಾಗಿ ಇಂದಿಗೂ ಜೀವಂತವಾಗಿದೆ.ಅಷ್ಟೇ ಅಲ್ಲ ನುಡಿಯರಿಮೆಯನ್ನು ವಿಶೇಷ ವಿಷಯವನ್ನಾಗಿ ಕಲಿಯುವವರ ಪಠ್ಯಪುಸ್ತಕಗಳು ಇಂದಿಗೂ ಈ 'ಪ್ರಮೇಯ'ವನ್ನು ದಿಟ ಎಂದೇ ನಿರೂಪಿಸುತ್ತವೆ. ಒಂದು ಅಂತಹ ಉದಾಹರಣೆಯನ್ನು ಇಲ್ಲಿ ಗಮನಿಸೋಣ.

ನುಡಿಗಳಿಗೂ ನುಡಿಗಳನ್ನಾಡುವವರ ಲೋಕ ಗ್ರಹಿಕೆಗೂ ಬಿಡಿಸಲಾಗದ ನಂಟು ಇದೆಯೆಂದು ವಾದಿಸುವವರಿಗೆ ಆಪ್ಯಾಯಮಾನವಾದ ಉದಾಹರಣೆಯೊಂದಿದೆ. ಪ್ರಚಲಿತವಿರುವ ನಂಬಿಕೆಯಂತೆ ಆರ್ಕ್ಟಿಕ್ ಪ್ರದೇಶದಲ್ಲಿ ವಾಸಿಸುವ ಎಸ್ಕಿಮೋ ಜನರ ನುಡಿಯಲ್ಲಿ ಮಂಜು ಎಂಬುದನ್ನು ಹೇಳಲು ಪದವೇ ಇಲ್ಲ. ಬದಲಿಗೆ ಮಂಜಿನ ಹಲವು ಅವಸ್ಥೆಗಳನ್ನು ಹೇಳುವ 'ಹಲವಾರು' ಪದಗಳಿವೆ. ನೆಲದ ಮೇಲಿನ ಮಂಜು, ಬಿದ್ದು ಗಟ್ಟಿಯಾದ ಮಂಜು, ಕೊಳೆಕೊಳೆಯಾದ ಮಂಜು, ಗಾಳಿಯಲ್ಲಿ ಬೀಳುತ್ತಿರುವ ಮಂಜು ಹೀಗೆ ಮಂಜಿನ ಬೇರೆ ಬೇರೆ ಸ್ಥಿತಿಗಳಿಗೆ ಬೇರೆ ಬೇರೆ ಪದಗಳೇ ಇವೆಯೇ ಹೊರತು ಮಂಜು ಎಂಬುದನ್ನು ಒಂದು ಪರಿಕಲ್ಪನೆಯನ್ನಾಗಿ ಸೂಚಿಸುವ

ಪದ ಅವರಲ್ಲಿ ಇಲ್ಲ. ನುಡಿಯರಿಮೆಯನ್ನು ಕುರಿತ ಯಾವುದೇ ಹೊತ್ತಗೆಯಲ್ಲಾದರೂ ಇಂದಿಗೂ ಈ ಸೋಜಿಗದ ಮಾಹಿತಿ ಕಾಣಸಿಗುತ್ತದೆ. ಈ ವಿವರಗಳನ್ನು ನೀಡುವ ಮೂಲಕ ನುಡಿಗೂ ಎಸ್ಕಿಮೋ ಜನರ ಲೋಕ ಗ್ರಹಿಕೆಗೂ ನಿಕಟವಾದ ನಂಟಿದೆ ಎಂಬುದನ್ನು ಸಮರ್ಥಿಸಲಾಗುತ್ತದೆ. ಎಸ್ಕಿಮೋ ಜನರು ಮಂಜಿನ ವಿವಿಧ ಅವಸ್ಥೆಗಳನ್ನು ಬೇರೆ ಬೇರೆ ಲೋಕ ಸಂಭವಗಳನ್ನಾಗಿ ಗ್ರಹಿಸುತ್ತಾರೆಯೇ ಹೊರತು ಆ ಅವಸ್ಥೆಗಳಿಗೆ ಸಾಮಾನ್ಯವಾದ 'ಮಂಜು' ಎಂಬ ಸ್ಥಿತಿಯನ್ನು ಗ್ರಹಿಸಲಾರರು; ಮತ್ತು ಅವರಿಗೆ ಅದು ಉಪಯುಕ್ತವೂ ಅಲ್ಲ ಎನ್ನುವುದು ನುಡಿ ಸಾಪೇಕ್ಷವಾದಿಗಳ ನಿಲುವು.

1911ರಲ್ಲಿ ಫ್ರಾಂಜ್ ಬೋಆಸ್, 'ದ ಹ್ಯಾಂಡ್ ಬುಕ್ ಆಫ್ ನಾರ್ತ್ ಅಮೆರಿಕನ್ ಇಂಡಿಯನ್ಸ್' ಎಂಬ ತನ್ನ ಹೊತ್ತಗೆಯಲ್ಲಿ ಪ್ರಾಸಂಗಿಕವಾಗಿ ಈ ಸಂಗತಿಯನ್ನು ಸೂಚಿಸಿದ್ದನು. ಎಸ್ಕಿಮೋ ಜನರಲ್ಲಿ ಮಂಜಿನ ಬೇರೆ ಅವಸ್ಥೆಗಳಿಗೆ ಬೇರೆ ಬೇರೆ ಪದಗಳಿರುವುದನ್ನು ಗುರುತಿಸುತ್ತಾ ಅಂತಹ ನಾಲ್ಕು ಪದಗಳನ್ನು ಪಟ್ಟಿ ಮಾಡಿದ್ದನು. ಬಳಿಕ 1940 ರಲ್ಲಿ ಬೆಂಜಮಿನ್ ವೂರ್ಫ್ 'ಸೈನ್ಸ್ ಅಂಡ್ ಲಿಂಗ್ವಿಸ್ಟಿಕ್ಸ್ 'ಎಂಬ ಲೇಖನದಲ್ಲಿ ಬೋಆಸ್‌ನನ್ನು ಉಲ್ಲೇಖಿಸಿ ಈ ಸಂಗತಿಯನ್ನು ತಾನು ಪರೋಕ್ಷವಾಗಿ ಪ್ರತಿಪಾದಿಸುತ್ತಿದ್ದ ನುಡಿ ಸಾಪೇಕ್ಷವಾದಕ್ಕೆ ನಿದರ್ಶನವಾಗಿ ಬಳಸಿಕೊಂಡನು. ಆದರೆ ವೂರ್ಫ್ ತನ್ನ ಆ ಲೇಖನದಲ್ಲಿ ಎಸ್ಕಿಮೋ ಜನರಲ್ಲಿ ಇರುವ ಇಂತಹ ಪದಗಳ ಪಟ್ಟಿಯಲ್ಲಿ ಅವುಗಳ ಸಂಖ್ಯೆಯನ್ನು ಏಳಕ್ಕೆ ಏರಿಸಿದನು. ಅದಕ್ಕೆ ಯಾವ ಆಧಾರವನ್ನೂ ಆತ ನೀಡಿರಲಿಲ್ಲ. ಅನಂತರ ಸುಮಾರು ಮೂರೂವರೆ ದಶಕಗಳ ಕಾಲ ಇದೇ ಅಭಿಪ್ರಾಯ ಮತ್ತೆ ಮತ್ತೆ ಮಂಡಿತವಾಗುತ್ತಾ ಬಂದಿತು. 1982 ರಲ್ಲಿ ಮಾನವ ಶಾಸ್ತ್ರಜ್ಞೆ ಲಾರಾ ಮಾರ್ಟಿನ್ (ಅಮೆರಿಕಾದ ಕ್ಲಿವ್‌ಲ್ಯಾಂಡ್ ಸ್ಟೇಟ್ ಯೂನಿವರ್ಸಿಟಿಯ ಪ್ರಾಧ್ಯಾಪಕಿ) ತನ್ನ ಶೋಧಗಳನ್ನು ಆಧರಿಸಿ ಪ್ರಚಲಿತವಾಗಿದ್ದ ಈ ಮಾಹಿತಿಗಳಿಗೆ ಆಧಾರಗಳಿಲ್ಲ ಎಂಬುದನ್ನು ಮಂಡಿಸಿದರು. ಅವರು ಹಲವು ಅಧ್ಯಯನಗಳ ಫಲಿತವಾಗಿ ತನ್ನ ಸಂಶೋಧನ ಪ್ರಬಂಧವನ್ನು ರಚಿಸಿದ್ದರೂ, ಅವರೆಗೆ ಪ್ರಚಲಿತವಾಗಿದ್ದ ಆದರೂ ಜನಪ್ರಿಯವಾಗಿದ್ದ ಗ್ರಹಿಕೆ ಎಷ್ಟು ಬಲವಾಗಿತ್ತೆಂದರೆ ಅವರ ಈ ಪ್ರಬಂಧ ಪ್ರಕಟಗೊಳ್ಳಲು ನಾಲ್ಕು ವರುಶಗಳು ಬೇಕಾದವು. ಮುಂದೆಯೂ ಹಿಂದಿನಿಂದ ಪ್ರಚಾರದಲ್ಲಿದ್ದ ಮಾಹಿತಿಗೆ ರೆಕ್ಕೆ ಪುಕ್ಕಗಳೆಲ್ಲ ಮೂಡಿ ಎಸ್ಕಿಮೋ ಜನರಲ್ಲಿ ಮಂಜಿನ ವಿವಿಧ ಅವಸ್ಥೆಗಳಿಗೆ ಇರುವ ಪದಗಳ ಸಂಖ್ಯೆ ಹೆಚ್ಚುತ್ತಲೇ ಹೋಯಿತು. ಅದರಲ್ಲೂ ಪತ್ರಿಕೆಗಳಲ್ಲಿ ಬರುವ ಜನಪ್ರಿಯ ವಿಜ್ಞಾನದ ಬರಹಗಳಲ್ಲಿ ಇದು ಗಾಢವಾಗಿ ಬೇರು ಬಿಟ್ಟಿತ್ತು. ಲಭ್ಯವಿರುವ ಯಾವುದೇ ಪರ್ಯಾಯ ಮಾಹಿತಿಯನ್ನು ಒಪ್ಪಿಕೊಳ್ಳಲು ಯಾರೂ ಸಿದ್ಧರಿರಲಿಲ್ಲ. ವಾಸ್ತವವಾಗಿ 1927 ರಲ್ಲೇ ಪ್ರಕಟವಾಗಿದ್ದ 'ಡಿಕ್ಷನರಿ ಆಫ್ ವೆಸ್ಟ್ ಗ್ರೀನ್‌ಲ್ಯಾಂಡಿಕ್ ಎಸ್ಕಿಮೋ ಲಾಂಗ್ವೆಜ್' (ಸಂ: ಸಿ. ಡಬ್ಲ್ಯೂ. ಶುಲ್ಜ್ ಲೊರೆನ್ಜ್‌ಜೆನ್) ನಲ್ಲಿ ಎಸ್ಕಿಮೋ ಜನರಲ್ಲಿ ಮಂಜಿನ ಎರಡು ಅವಸ್ಥೆ (ನೆಲದ ಮೇಲಿರುವುದು ಮತ್ತು ಗಾಳಿಯಲ್ಲಿರುವುದು)ಗಳನ್ನು ಸೂಚಿಸುವ ಎರಡು ಪದಗಳು ಮಾತ್ರ ಇವೆ ಎಂದು ದಾಖಲಿಸಲಾಗಿದೆ. ಇಷ್ಟಾದರೂ ಎಸ್ಕಿಮೋಗಳ ಮಂಜಿನ ಕತೆಗೆ ಇನ್ನೂ ಜೀವವಿದೆ; ಜನಪ್ರಿಯತೆ ಇದೆ. ಬೇರೆ ಬೇರೆ ಜ್ಞಾನ ಶಿಸ್ತುಗಳಲ್ಲಿ

ಇದನ್ನು ಒಪ್ಪಿಕೊಂಡು ಬರಲಾಗಿದೆ. ಅಮೆರಿಕಾದ ಹೆಸರಾಂತ ದಿನಪತ್ರಿಕೆ ದ ನ್ಯೂಯಾರ್ಕ್ ಟೈಮ್ಸ್, 1984 ರಲ್ಲಿ ಒಮ್ಮೆ ಮತ್ತು 1988 ರಲ್ಲಿ ಮತ್ತೊಮ್ಮೆ ತಾನು ಪ್ರಕಟಿಸಿದ ವಿಜ್ಞಾನಕ್ಕೆ ಸಂಬಂಧಿಸಿದ ಬರಹಗಳಲ್ಲಿ ಎಸ್ಕಿಮೋಗಳ ನುಡಿಯಲ್ಲಿ ಮಂಜಿನ ಬೇರೆ ಬೇರೆ ಅವಸ್ಥೆಗಳಿಗೆ ಇರುವ ಪದಗಳ ಸಂಖ್ಯೆಯನ್ನು ನೀಡಿದೆ. ಮೊದಲ ಉಲ್ಲೇಖದಲ್ಲಿ ಆ ಸಂಖ್ಯೆ ನೂರು ಎಂದು ಇದ್ದುದು ಎರಡನೆಯ ಉಲ್ಲೇಖದ ಹೊತ್ತಿಗೆ ನಾಲ್ಕು ಡಜನ್ ಪದಗಳು ಎಂದಾಗುತ್ತದೆ. ಈ ಬದಲಾವಣೆಗೆ ಯಾವ ಆಧಾರಗಳೂ ಇರಲಿಲ್ಲ. ಜನಪ್ರಿಯ ಮಾಧ್ಯಮಗಳು ಸಟೆಯನ್ನೇ ಹೇಗೆ ದಿಟವೆಂದು ಪ್ರಚುರಪಡಿಸುತ್ತವೆ ಎಂಬುದಕ್ಕೆ ಇಲ್ಲಿ ಈ ಸಂಗತಿಯನ್ನು ನಿದರ್ಶನವನ್ನಾಗಿ ನೀಡಲಾಗಿದೆ.

ಎರಡು ಸಂಗತಿಗಳು ಮೇಲಿನ ವಿವರಣೆಯಿಂದ ಸ್ಪಷ್ಟವಾಗುತ್ತವೆ. 1. ನುಡಿಗೂ ಆ ನುಡಿಯನ್ನಾಡುವ ಜನರ ಲೋಕ ಗ್ರಹಿಕೆಗೂ ಬಿಡಿಸಲಾಗದ ನಂಟು ಇದೆ ಎಂಬ ವಾದ ಆಕರ್ಷಕವಾಗಿದೆ.ಅಲ್ಲದೆ ಅದು ಸುಲಭವಾಗಿ ನಂಬಬಹುದಾದದ್ದು; ಹಾಗಾಗಿ ಅದನ್ನು ಸುಲಭವಾಗಿ ಬಿಟ್ಟುಕೊಡಲು ಜನರು ಸಿದ್ಧರಿಲ್ಲ. 2. ಮಾಹಿತಿಯ ಕೊರತೆ ಇಲ್ಲವೇ ತಪ್ಪು ಮಾಹಿತಿ ಇದ್ದರೂ ಅದೇ ಹಳೆಯ ಮಾಹಿತಿಯನ್ನೇ ಮತ್ತೆ ಮತ್ತೆ ಪ್ರಚುರಪಡಿಸುವ, ನಂಬಿಸುವ ಹುನ್ನಾರ ಎಲ್ಲ ಕಾಲದಲ್ಲೂ ಇದ್ದಂತೆ ಈ ಕಾಲದಲ್ಲೂ ಇದೆ.

ಇನ್ನೂ ಒಂದು ಸಂಗತಿಯನ್ನು ಇಲ್ಲೇ ಗಮನಿಸಬಹುದು. ಪ್ರಕೃತಿ ವಿಜ್ಞಾನ ಶಾಖೆಗಳು ತಾವು ಅಧ್ಯಯನ ಮಾಡುತ್ತಿರುವ ಲೋಕದ ವಿವರಗಳಲ್ಲಿರುವ ಸೂಕ್ಷ್ಮಸ್ತರದ ವ್ಯತ್ಯಾಸಗಳ ಕಡೆಗೆ ಗಮನಹರಿಸುತ್ತವೆ. ವರ್ಗೀಕರಣದಲ್ಲಿ ಈ ಅಧ್ಯಯನಗಳಿಗೆ ಆಸಕ್ತಿ ಇದೆ. ಆದರೆ ಸಮಾನ ಅಂಶಗಳಿಗಿಂತ ಹೆಚ್ಚಾಗಿ ವ್ಯತ್ಯಾಸಗಳ ಕಡೆಗೆ, ವಿಶಿಷ್ಟ ಚಹರೆಗಳ ಕಡೆಗೆ ಗಮನ ಹೆಚ್ಚು. ಇದು ಆ ಜ್ಞಾನ ಶಾಖೆಗಳ ಅಧ್ಯಯನ ವಿಧಾನ; ಇದೇನೂ ದೋಷಪೂರಿತವಾದುದಲ್ಲ. ನುಡಿಯರಿಗರೂ ಕೂಡ ನುಡಿಗಳ ವಿಶಿಷ್ಟ ಚಹರೆಗಳ ಕಡೆಗೆ ಗಮನ ಹರಿಸುವ ಮೂಲಕ ಪ್ರಕೃತಿ ವಿಜ್ಞಾನಗಳ ವಿಧಾನದ ಕಡೆಗೆ ಓಲುವೆ ತೋರಿಸುತ್ತಾರೆ. ಆದರೆ ಇದಕ್ಕೆ ಪ್ರತಿಯಾದ ಅಧ್ಯಯನ ವಿಧಾನಗಳು ಸಮಾಜ ವಿಜ್ಞಾನಗಳಲ್ಲಿವೆ. ಈ ವಿಧಾನಗಳು ವಿಶಿಷ್ಟವಾಗಿರುವ ಎಲ್ಲದರ ಹಿಂದಿನ ಸಮಾನತೆ, ಸಮಾನ ನೆಲೆಯನ್ನು ಹುಡುಕುತ್ತಿರುತ್ತವೆ. ಈ ಎರಡನೆಯ ವಿಧಾನವನ್ನು ಅವಲಂಬಿಸಿದರೆ ನುಡಿ ವಿಧಿ ವಾದದ ಮೂಲಕ ಹುಟ್ಟುವ ನಿಲುವುಗಳು ಅಷ್ಟು ಮುಂಚೂಣಿಗೆ ಬರುವುದಿಲ್ಲ.

ಸಪೀರ್-ವೂರ್ಫ್ ಪ್ರಮೇಯದ ಎರಡು ಮಾದರಿಗಳು:

ಈ ಪ್ರಮೇಯದ ಎರಡು ಮಾದರಿಗಳನ್ನು ಚರ್ಚೆಗಳಲ್ಲಿ ಮಂಡಿಸಲಾಗಿದೆ. ಇವುಗಳಲ್ಲಿ ಒಂದು ಮಾದರಿಯನ್ನು **ನುಡಿ ಸಾಪೇಕ್ಷವಾದ** ಎನ್ನಲಾಗಿದೆ. ಈ ವಾದವು ನುಡಿ ಮತ್ತು ಸಮುದಾಯದ ಚಿಂತನಾಕ್ರಮ/ಲೋಕ ದೃಷ್ಟಿಗಳ ನಂಟನ್ನು ಸೀಮಿತ ನೆಲೆಯಲ್ಲಿ

ಒಪ್ಪುತ್ತದೆ. ಅಂದರೆ ಲೋಕ ದೃಷ್ಟಿಯು 'ಮಂಡಿತವಾಗುವ', 'ಬಳಕೆಯಾಗುವ' ನೆಲೆಯಲ್ಲಿ ಆ ಸಮುದಾಯದ ನುಡಿಯು ಪ್ರಭಾವ ಬೀರುತ್ತದೆ ಎಂದು ವಿವರಿಸುತ್ತದೆ. ಎರಡನೆಯ ಮಾದರಿಯನ್ನು **ನುಡಿ ವಿಧಿವಾದ** ಎಂದು ಕರೆಯಲಾಗಿದೆ. ಈ ವಾದವು ತೀವ್ರವಾದುದು. ಅದರಂತೆ ನುಡಿಯು ಸಮುದಾಯದ ಚಿಂತನಾ ಕ್ರಮ/ಲೋಕ ದೃಷ್ಟಿಗಳು 'ರೂಪು ತಳೆಯುವ' ನೆಲೆಯನ್ನೇ ನಿಯಂತ್ರಿಸುತ್ತದೆ.

ಈ ಪ್ರಮೇಯವನ್ನು ಒಪ್ಪದ ನುಡಿಯರಿಗರು ಕಳೆದ ಶತಮಾನದ ನಡುಭಾಗದಿಂದ ತಮ್ಮ ಚಿಂತನೆಗಳನ್ನು ಮಂಡಿಸುತ್ತಾ ಬಂದಿದ್ದಾರೆ. ಈ ಪ್ರಮೇಯದ ಎರಡು ಮಾದರಿಗಳನ್ನೂ ನಿರಾಕರಿಸುವವರು ಕೆಲವರು. ನುಡಿ ಸಾಪೇಕ್ಷವಾದವನ್ನು ಒಪ್ಪಿ ನುಡಿ ವಿಧಿವಾದವನ್ನು ನಿರಾಕರಿಸುವವರು ಮತ್ತೆ ಕೆಲವರು. (ಆದರೆ ನುಡಿ ವಿಧಿವಾದವನ್ನು ಒಪ್ಪಿ ನುಡಿ ಸಾಪೇಕ್ಷವಾದವನ್ನು ನಿರಾಕರಿಸುವ ಸಾಧ್ಯತೆ ಇರುವುದಿಲ್ಲ. ಏಕೆಂದರೆ ನುಡಿ ವಿಧಿವಾದವು ತನ್ನೊಳಗೇ ನುಡಿ ಸಾಪೇಕ್ಷವಾದವನ್ನು ಅಂತರ್ಗತ ಮಾಡಿಕೊಂಡಿರುತ್ತದೆ. ಆದ್ದರಿಂದ ನುಡಿ ವಿಧಿವಾದವನ್ನು ಒಪ್ಪುವುದಿಲ್ಲ ಎಂದಮೇಲೆ ನುಡಿ ಸಾಪೇಕ್ಷವಾದವನ್ನೂ ನಿರಾಕರಿಸಿದಂತೆಯೇ ಸರಿ.) ಈ ಸಂಬಂಧದಲ್ಲಿ ನಡೆದಿರುವ ಚರ್ಚೆಗಳು ನುಡಿ ಮತ್ತು ಚಿಂತನೆಗಳ ನಂಟನ್ನು ಮೇಲಿಂದ ಮೇಲೆ ಉಲ್ಲೇಖಿಸುತ್ತವೆ. ಹಾಗಾಗಿ ಈ ಎರಡರ ನಡುವೆ ಇರುವ ನಂಟಿನ ಸ್ವರೂಪವನ್ನು, ಅದರ ವಿವಿಧ ನೆಲೆಗಳನ್ನು ಮೊದಲು ತಿಳಿದುಕೊಳ್ಳುವ ಅಗತ್ಯವಿದೆ.

ಚಿಂತನೆ, ಆಲೋಚನೆ, ಯೋಚನೆ ಮುಂತಾದ ಪದಗಳನ್ನು ಸದ್ಯ ಒಂದೇ ತಿರುಳಿನಲ್ಲಿ ಬಳಸಲಾಗುತ್ತಿದೆ ಎಂದುಕೊಳ್ಳಿ. ಒಂದು ತುದಿಯಲ್ಲಿ ನುಡಿ ಇನ್ನೊಂದು ತುದಿಯಲ್ಲಿ ಚಿಂತನೆ ಇದ್ದರೆ ಇವೆರಡರ ನಡುವೆ ಒಂದು ಗೆರೆಯನ್ನು ಎಳೆಯೋಣ.

ನುಡಿ<------------------->ಚಿಂತನೆ

1-------2--------3-------4

ವಿಶ್ವಾತ್ಮಕವಾದ/ಸಾರ್ವತ್ರಿಕವಾದ ನುಡಿ ವಿಧಿವಾದ

ಈ ಗೆರೆಯಲ್ಲಿ ನಾಲ್ಕು ಬೇರೆ ಬೇರೆ ಹಂತಗಳನ್ನು ನುಡಿಯರಿಗರು ಪ್ರತಿಪಾದಿಸುತ್ತಾರೆ.

1. ಈ ಹಂತವನ್ನು ಒಪ್ಪುವವರು **ಚಿಂತನೆ ಎಂಬುದು ತನಗೆ ತಾನೇ ಸ್ವತಂತ್ರವಾದ ಸ್ಥಿತಿ** ಎನ್ನುತ್ತಾರೆ. ನಾವು ತಿಳಿದಿರುವ ಇಲ್ಲವೇ ಬಳಸುತ್ತಿರುವ ನುಡಿಯ ರಚನೆಗೂ ಚಿಂತನೆಗೂ ಯಾವ ನಂಟೂ ಇಲ್ಲವೆನ್ನುತ್ತಾರೆ. ಹೀಗೆ ತಾನೇ ಪರಿಪೂರ್ಣವಾದ ಚಿಂತನೆಯನ್ನು ಇನ್ನೊಬ್ಬರಿಗೆ ತಿಳಿಸುವ ಅಗತ್ಯವಿದ್ದಾಗ ನುಡಿಯ ನೆರವನ್ನು ಪಡೆಯಲಾಗುವುದು ಎನ್ನುತ್ತಾರೆ.ಅಂದರೆ ಸ್ವತಂತ್ರವಾಗಿ ಮೈದಳೆದ ಚಿಂತನೆಯನ್ನು ಬೇರೆಯವರಿಗೆ ತಿಳಿಸಬೇಕಾಗಿ ಬಂದಾಗ ಮಾತ್ರ ಆ ಚಿಂತನೆಗೆ ನುಡಿಯ ರೂಪವನ್ನು ನೀಡಲಾಗುತ್ತದೆ.ಇನ್ನೊಬ್ಬರಿಗೆ ತಿಳಿಸದೇ ಇದ್ದಲ್ಲಿ ಆ ಚಿಂತನೆಯು ತನಗೆ ತಾನೇ ಸ್ವತಂತ್ರವಾಗಿ ಇರುವುದಕ್ಕೆ ಪುರಾವೆಗಳೇನು ಎಂಬ ಪ್ರಶ್ನೆಯನ್ನು ಈ ನಿಲುವನ್ನು ಪ್ರತಿಪಾದಿಸುವವರಿಗೆ

ಕೇಳಲಾಗುತ್ತದೆ. ಚಿಂತನೆಯು ತನ್ನಿಂದ ತಾನೇ ರೂಪುಗೊಳ್ಳುವುದು ಮತ್ತು ಅದು ಇನ್ನೊಬ್ಬರಿಗೆ ತಿಳಿಯುವುದು ಇವೆರಡೂ ಬೇರೆ ಬೇರೆ ಘಟನೆಗಳು; ಇವುಗಳಲ್ಲಿ ಅನುಕ್ರಮದ ನಂಟು ಇದೆ. ಅಂದರೆ ಮೊದಲು ಚಿಂತನೆ ನಡೆದ ಬಳಿಕ ಅಭಿವ್ಯಕ್ತಿ. ಆದರೆ ಇದರಿಂದ ಅಭಿವ್ಯಕ್ತಿಯನ್ನು ಹೊರತು ಮಾಡಿದ ಚಿಂತನೆ ಇರುವುದಿಲ್ಲ ಎನ್ನಲಾಗದು. ಚಿಂತನೆಯು ನುಡಿಯ ರೂಪದಲ್ಲೇ ಇರುತ್ತದೆ ಮತ್ತು ಅವೆರಡೂ ಬೇರೆ ಬೇರೆ ಅಲ್ಲ ಎನ್ನುವವರು ಇವೆರಡೂ ಮೈತಳೆಯುವುದರ ನಡುವೆ ಕಾಲದ ಅಂತರವಿಲ್ಲ ಎನ್ನುತ್ತಾರೆ. ಕಾಲದ ಅಂತರವಿಲ್ಲ ಮತ್ತು ಕಾಲದ ಅಂತರ ಗಮನಕ್ಕೆ ಬರುವುದಿಲ್ಲ ಎನ್ನುವುದು ಒಂದೇ ಅಲ್ಲ. ನ್ಯಾಯ ಶಾಸ್ತ್ರದಲ್ಲಿ ಸೂಚೀಪತ್ರ ನ್ಯಾಯವೆಂಬುದೊಂದಿದೆ. ನೂರು ತಾವರೆ ಎಲೆಗಳನ್ನು ಒಂದರ ಮೇಲೊಂದು ಜೋಡಿಸಿ ಮೇಲಿರುವ ಎಲೆಗೆ ಸೂಜಿಯೊಂದನ್ನು ಚುಚ್ಚಿದರೆ ಅದು 'ಕೂಡಲೇ' ನೂರನೆಯ ಎಲೆಯನ್ನು ಭೇದಿಸಿ ಹೊರಬರುತ್ತದೆ. ಹಾಗೆಂದ ಮಾತ್ರಕ್ಕೆ ಮೊದಲ ಎಲೆಯಲ್ಲಿ ರಂಧ್ರ ಮೂಡಿದ ಸಮಯ ಮತ್ತು ನೂರನೆಯ ಎಲೆಯಲ್ಲಿ ರಂಧ್ರ ಮೂಡಿದ ಸಮಯ ಇವುಗಳ ನಡುವೆ ಅಂತರವಿಲ್ಲ ಎನ್ನಲಾಗದು. ಕಾಲದ ಅಂತರ ನಮಗೆ ಗೋಚರವಾಗುವುದಿಲ್ಲ ಎಂದಷ್ಟೇ ಹೇಳಬಹುದು. ಅಂದರೆ ಚಿಂತನೆ ಮತ್ತು ಅದರ ನುಡಿ ಶರೀರ ಏಕಕಾಲಕ್ಕೆ ಸಂಭವಿಸುತ್ತವೆ ಎನ್ನುವುದನ್ನು ಒಪ್ಪುವುದಕ್ಕೆ ಆಗುವುದಿಲ್ಲ. ಇದು ತರ್ಕವನ್ನು ಬಳಸಿ ವಾದವನ್ನು ಮಂಡಿಸುವ ಮತ್ತು ಸಮರ್ಥಿಸುವ ಬಗೆಯಾಯಿತು. ಹಾಗಲ್ಲದೆಯೂ ಚಿಂತನೆ ಮತ್ತು ನುಡಿಗಳು ಬೇರೆ ಬೇರೆ ಎನ್ನುವುದನ್ನು ಅರಿಯಲು ಬೇರೆ ದಾರಿಗಳೂ ಇವೆ. ನುಡಿಯನ್ನು ಹೊರತುಪಡಿಸಿಯೂ ನಮ್ಮ ಮೆದುಳಿನಲ್ಲಿ ಮೈದಳೆದ ಚಿಂತನೆಗಳು ಬೇರೆ ರೂಪಗಳಲ್ಲಿ ಅಭಿವ್ಯಕ್ತವಾಗುವುದನ್ನು ಕಂಡಿದ್ದೇವೆ. ಉದಾಹರಣೆಗೆ, ಅಶಾಬ್ದಿಕ ಕಲೆಗಳು. ಇವುಗಳ ಹಿಂದೆ ಚಿಂತನೆ ಇರುತ್ತದೆ. ಆದರೆ ಅವು ನುಡಿಯ ರೂಪವನ್ನು ಪಡೆಯಲೇಬೇಕೆಂಬ ಶರತ್ತಿಲ್ಲ. ಇದೂ ಅಲ್ಲದೆ ಯಾರೊಡನೆಯೂ ಮಾತನಾಡದೆ ಮೌನವನ್ನು ಆಚರಿಸುವ ವ್ಯಕ್ತಿಯಲ್ಲಿ ಚಿಂತನೆಗಳು ಮೂಡುವುದನ್ನು ನಿರಾಕರಿಸಲು ಆಗುವುದಿಲ್ಲವಷ್ಟೆ. ಈ ವಾದವನ್ನು ನೋಮ್ ಚಾಮ್‌ಸ್ಕಿ ಮತ್ತು ಅವರ ಅನುಯಾಯಿಗಳು ಮಂಡಿಸುತ್ತಾರೆ. ಇದನ್ನು ವಿಶ್ವಾತ್ಮಕವಾದ ಇಲ್ಲವೇ ಸಾರ್ವತ್ರಿಕವಾದ (ಯೂನಿವರ್ಸಲಿಸಂ) ಎಂದೂ ಹೆಸರಿಸಲಾಗಿದೆ.

ವಿಶ್ವಾತ್ಮಕವಾದದ ಪ್ರತಿಪಾದಕರಲ್ಲಿ ಒಬ್ಬರಾದ ಸ್ಟೀವನ್ ಪಿಂಕರ್ ಅವರ ವಾದದ ತಿರುಳು ಹೀಗಿದೆ: ಮಾನವರು ಲೋಕವನ್ನು ಗ್ರಹಿಸಿ ತಮ್ಮ ಅನುಭವಗಳನ್ನು ಜೋಡಿಸಿಕೊಳ್ಳಲು ಬಳಸುವ ಬೇರೊಂದು ಅಮೂರ್ತ ವ್ಯವಸ್ಥೆ ಮೆದುಳಿನಲ್ಲಿದೆ. ಇದು ಅವರು ಆಡುವ ನುಡಿಗಿಂತ ಬೇರೆಯಾದುದು. (ವಿವರಗಳು ಮುಂದೆ ಇವೆ) ಈ ವ್ಯವಸ್ಥೆಯ ಮೂಲಕ ಜೋಡಣೆಗೊಂಡ ಅನುಭವವನ್ನು,ಚಿಂತನೆಯನ್ನು ಆ ಬಳಿಕ ನುಡಿಯ ಸ್ತರಕ್ಕೆ ಒಯ್ಯಲಾಗುತ್ತದೆ. ಹಾಗಾಗಿ ಅವರು ಆಡುವ ನುಡಿ ಇಲ್ಲದೇ ಇದ್ದರೂ ಅವರ ಲೋಕ ಗ್ರಹಿಕೆ ಮಾತ್ರ ಮೆದುಳಿನಲ್ಲಿ, ಅದರದೇ ಆದ ಸಾಂಕೇತಿಕ ನೆಲೆಯಲ್ಲಿ ಉಳಿದೇ ಇರುತ್ತದೆ.

ನೋಮ್ ಚಾಮ್‌ಸ್ಕಿಯವರು ವಿಶ್ವಾತ್ಮಕವಾದದ ತಿರುಳನ್ನು ಹೀಗೆ ವಿವರಿಸುತ್ತಾರೆ: ಅರಿವು (ಕಾಗ್ನಿಶನ್ ಎಂಬುದಕ್ಕೆ ಸಂವಾದಿಯಾಗಿ ಈ ಪದವನ್ನು ಬಳಸಿದ್ದೇನೆ. ಇದು ತಿಳಿವಿಗಿಂತ ಬೇರೆಯಾದುದು. ಅರಿವು ಎಂಬುದು ಲೋಕವನ್ನು ಗ್ರಹಿಸಲು, ಗ್ರಹಿಸಿದ್ದನ್ನು ಒಂದು ಆಕಾರಕ್ಕೆ ತಂದುಕೊಳ್ಳಲು ಮೆದುಳಿನಲ್ಲಿ ಇರುವ ವಿಶಿಷ್ಟವಾದ ಕಸುವು) ಎಂಬುದು ಲೋಕವನ್ನು ಗ್ರಹಿಸಲು ತನ್ನದೇ ಆದ ವಿಧಾನಗಳನ್ನು ಹೊಂದಿರುತ್ತದೆ. ಅದಕ್ಕೆ ಹಲವು ದಾರಿಗಳಿರುತ್ತದೆ. ಅರಿವಿನ ದಾರಿಗಳಲ್ಲಿ ನುಡಿಯೂ ಒಂದು ಮಾತ್ರ. ಹಾಗಲ್ಲದೆ ಕಣ್ಣು, ಕಿವಿ, ಸ್ಪರ್ಶ, ರುಚಿ ಮುಂತಾದ ದಾರಿಗಳ ಮೂಲಕವೂ ಅರಿವು ಗ್ರಹಿಕೆಗಳನ್ನು ರೂಪಿಸಿಕೊಳ್ಳಬಲ್ಲುದು; ಹೀಗೆ ರೂಪುಗೊಂಡದ್ದು ಅಭಿವ್ಯಕ್ತಿ ಪಡೆಯಲು ನುಡಿಯೊಂದೇ ಹೊರದಾರಿಯಲ್ಲ. ಅದಕ್ಕೂ ಹಲವಾರು ಹೊರದಾರಿಗಳಿರುತ್ತವೆ. ಅಂದರೆ ಅರಿವಿನ ಹರವಿನಲ್ಲಿ ನುಡಿಗೆ ಇರುವ ಪಾತ್ರ ಸೀಮಿತವಾದುದು.

2. ಚಿಂತನೆ ಮತ್ತು ನುಡಿಗಳು ಸಂಪೂರ್ಣವಾಗಿ ಸ್ವತಂತ್ರವಾಗಿರುತ್ತವೆ ಎನ್ನುವುದನ್ನು ಒಪ್ಪದಿರುವ ಕೆಲವರು ಇನ್ನೊಂದು ವಾದವನ್ನು ಪ್ರತಿಪಾದಿಸುತ್ತಾರೆ. ಮಗು ಬೆಳೆಯುತ್ತಿರುವಾಗ ಅದರ ಮನೋದೈಹಿಕ ಬೆಳವಣಿಗೆಗಳು ಯಾವ ಯಾವ ಬಗೆಯಲ್ಲಿ ಮುಂದುವರೆಯುತ್ತವೆ ಎನ್ನುವುದನ್ನು ಗಮನಿಸಿ ತಮ್ಮ ವಾದವನ್ನು ರೂಪಿಸಿದ್ದಾರೆ. ಈ ವಾದದ ಮುಖ್ಯ ಪ್ರತಿಪಾದಕ ಜೀನ್ ಪಿಯಾಜೆ ಎಂಬ ಸ್ವೀಡನ್ ದೇಶದ ಮನೋವಿಜ್ಞಾನಿ. ಮಗುವಿನಲ್ಲಿ ಚಿಂತನೆ ಮತ್ತು ನುಡಿಗಳ ಬೆಳವಣಿಗೆಯು ಜತೆ ಜತೆಯಲ್ಲಿ ಸಾಗುವುದೆಂಬುದು ಈ ವಾದದ ತಿರುಳು. ವಯಸ್ಕರಿಗಿಂತ ಬೇರೆಯದೇ ಆಗ ಚಿಂತನಾ ಕ್ರಮವನ್ನು ಮಗು ಹೊಂದಿರುತ್ತದೆ. ಆದರೆ ಮಗು ಬೆಳೆಯುತ್ತಾ ಹೋದಂತೆ ಅದರ ಚಿಂತನೆಗಳನ್ನು ರೂಪಿಸಲು ನುಡಿಯ ಪರಿಕರಗಳನ್ನು ಬಳಸುತ್ತದೆ. ಮತ್ತು ಆ ನುಡಿಯ ಪರಿಕರಗಳನ್ನೇ ಬಳಸಿಕೊಂಡು ತನ್ನ ಚಿಂತನೆಯನ್ನು ವಯಸ್ಕ ಲೋಕಕ್ಕೆ ತಕ್ಕಂತೆ ಬದಲಿಸಿ ಬೆಳೆಸಿಕೊಳ್ಳುತ್ತಾ ಹೋಗುತ್ತದೆ. ಈ ವಾದವು ನಾವು ಮೇಲೆ ಸೂಚಿಸಿದ ಗೆರೆಯಲ್ಲಿ ಎಡ ತುದಿಯಿಂದ ಕೊಂಚ ಮುಂದೆ ಸರಿದಂತಿದೆ.

3. ಸೋವಿಯತ್ ರಶಿಯಾದಲ್ಲಿದ್ದ ಲೆವ್ ವ್ಯಗೊತ್ಸ್‌ಕಿ ಎಂಬ ಮನೋವಿಜ್ಞಾನಿ ಇನ್ನೊಂದು ನೆಲೆಯ ವಾದವನ್ನು ಪ್ರತಿಪಾದಿಸಿದ್ದಾನೆ. ನುಡಿ ಕಲಿಕೆಯ ವಿವಿಧ ಹಂತಗಳು ಮತ್ತು ಕಲಿಸುವ ಬಗೆಗಳು ಈತನ ಆಸಕ್ತಿಯ ವಿಷಯಗಳಾಗಿದ್ದವು. ಅವನ ಪ್ರಕಾರ ಚಿಂತನೆ ಮತ್ತು ನುಡಿ ಎರಡೂ ಬೇರೆ ಬೇರೆ ಅಸ್ತಿತ್ವವನ್ನು ಹೊಂದಿರುವ ಸಂಗತಿಗಳು. ಆದರೆ ಇವುಗಳಲ್ಲಿ ನುಡಿ ರಚನೆಯು, ಚಿಂತನೆಯು ಹೊರ ಹೊಮ್ಮುವ ಬಗೆಯನ್ನು ಪ್ರಭಾವಿಸುತ್ತದೆ ಎಂಬುದು ಒಟ್ಟಾರೆ ಅವನ ವಾದದ ತಿರುಳು. ಸಾಮಾಜಿಕವಾದ ಹಲವಾರು ಸಂಗತಿಗಳು ಈ ಪ್ರಭಾವದ ಸ್ವರೂಪವನ್ನು ನಿರ್ಧರಿಸುತ್ತವೆ. ನುಡಿಯು ಚಿಂತನೆಯ ಮತ್ತು ಗ್ರಹಿಕೆಯ ಸ್ವರೂಪವನ್ನು ಪ್ರಭಾವಿಸುತ್ತದೆ ಎಂದರೇನು? ಒಂದು ಉದಾಹರಣೆಯನ್ನು ನೋಡೋಣ.

ಒಂದು ನುಡಿಯಲ್ಲಿ 'ಚಂದ್ರ' ಹೆಣ್ಣು ಎಂದು (ಸ್ತ್ರೀಲಿಂಗ) ಗುರುತಾಗಿದ್ದರೆ ಇನ್ನೊಂದು ನುಡಿಯಲ್ಲಿ ಅದೇ ಚಂದ್ರ 'ಗಂಡು' ಎಂದು (ಪುಲ್ಲಿಂಗ) ಗುರುತಾಗಿರುತ್ತದೆ

ಎಂದುಕೊಳ್ಳೋಣ. ಆಗ ಚಂದ್ರನನ್ನು ಹೆಣ್ಣು ಎಂದು ಗ್ರಹಿಸಿರುವ ನುಡಿಯನ್ನಾಡುವ ಜನರು ತಮ್ಮ ವ್ಯವಹಾರದಲ್ಲಿ, ಅಂದರೆ ಚಂದ್ರನನ್ನು ವರ್ಣಿಸುವಾಗ ಹೆಣ್ಣು ಚಹರೆಗಳನ್ನೇ ಬಳಸಿ ಬಣ್ಣಿಸುತ್ತಾರೆ. ಅದೇ ಇನ್ನೊಂದು ನುಡಿಯನ್ನಾಡುವ ಜನರು ಚಂದ್ರನನ್ನು ತಮ್ಮ ನುಡಿ ಗಂಡು ಎಂದು ಪರಿಗಣಿಸಿರುವುದರಿಂದ ತಮ್ಮ ವ್ಯವಹಾರದಲ್ಲಿ ಚಂದ್ರನಿಗೆ ಗಂಡು ಚಹರೆಗಳನ್ನೇ ನೀಡುತ್ತಾರೆ. ಇದೊಂದು ಸರಳ ಉದಾಹರಣೆ. ಇಂತಹುದೇ ಇನ್ನೊಂದು ಉದಾಹರಣೆಯನ್ನು ನೋಡೋಣ. ಜರ್ಮನ್ ನುಡಿಯಲ್ಲಿ ಸಾವು ಎಂಬುದನ್ನು ಸೂಚಿಸುವ ಪದ ಗಂಡಸನ್ನು ಸೂಚಿಸುವ ಚಹರೆಯನ್ನು (ಪುಲ್ಲಿಂಗ) ಹೊಂದಿದೆ. ರಶಿಯನ್ ನುಡಿಯಲ್ಲಿ ಅದಕ್ಕೆ ಹೆಣ್ಣನ್ನು ಸೂಚಿಸುವ (ಸ್ತ್ರೀಲಿಂಗ) ಚಹರೆ ಇದೆ. ಈ ಎರಡೂ ನುಡಿಗಳ ಕಲಾವಿದರು ತಮ್ಮ ಚಿತ್ರಗಳನ್ನು ರಚಿಸುವ ಸಂದರ್ಭವನ್ನು ಗಮನಿಸಿ. ಜರ್ಮನ್ ಕಲಾವಿದರು ಸಾವನ್ನು ಗಂಡು ಎಂದು ಚಿತ್ರಿಸಿದರೆ ರಶಿಯನ್ ಕಲಾವಿದರು ಅದನ್ನು ಹೆಣ್ಣು ಎಂಬಂತೆ ಚಿತ್ರಿಸುತ್ತಾರೆ.

ವ್ಯಗೊತ್ಸ್ಕಿ ತನ್ನ ನಿಲುವನ್ನು ಹೇಳುವಾಗ ಒಂದು ಸಂಗತಿಯನ್ನು ಸ್ಪಷ್ಟಪಡಿಸುತ್ತಾನೆ. ಅದೆಂದರೆ ನುಡಿಯ ಚೌಕಟ್ಟು, ಆ ನುಡಿಯನ್ನಾಡುವ ಜನರಿಗೆ ಯಾವುದೇ ನಿರ್ಬಂಧವನ್ನು ವಿಧಿಸುವುದಿಲ್ಲ; ಆದರೆ ಅವರಿಗೆ ಆಯ್ಕೆಗಳಿದ್ದರೂ ನುಡಿಯ ಚೌಕಟ್ಟು ಸೂಚಿಸುವ ಮಾದರಿಯನ್ನೇ ಅವರು ಆಯ್ದುಕೊಳ್ಳುತ್ತಾರೆ. ವ್ಯಗೊತ್ಸ್ಕಿಯ ನಿಲುವು ನುಡಿ-ಚಿಂತನೆಗಳ ನಂಟಿನ ಗೆರೆಯಲ್ಲಿ ಪಿಯಾಜೆಯು ಪ್ರತಿಪಾದಿಸಿದ ನೆಲೆಗಿಂತ ಮತ್ತಷ್ಟು ಬಲಬದಿಗೆ ಸರಿದಿರುವುದು ಈ ಮೇಲಿನ ವಿವರಗಳಿಂದ ಸ್ಪಷ್ಟವಾಗುತ್ತದೆ

4. ಸಪೀರ್-ವೂರ್ಫ್ 'ಪ್ರಮೇಯ'ವು ಇನ್ನೂ ಬಲಬದಿಗೆ ಸರಿದು ಭಾಷಾ ಸಾಪೇಕ್ಷವಾದ ಮತ್ತು ಭಾಷಾ ವಿಧಿವಾದಗಳನ್ನು ಪ್ರತಿಪಾದಿಸುತ್ತದೆ. ಈ ವಿದ್ವಾಂಸರ (ಸಪೀರ್-ವೂರ್ಫ್) ವಾದದ ವಿವರಗಳನ್ನು ಈಗಾಗಲೇ ನಾವು ಗಮನಿಸಿದ್ದೇವೆ.

ವಿಶ್ವಾತ್ಮಕವಾದವು, ಚಿಂತನೆಯು ರೂಪು ತಳೆಯುವಾಗ ಅದಕ್ಕೂ ನುಡಿಗೂ ಯಾವ ನಂಟೂ ಇರುವುದಿಲ್ಲವೆನ್ನುವ ಒಂದು ತುದಿಯ ನಿಲುವನ್ನು ತಳೆಯುತ್ತದೆ. ಇನ್ನೊಂದು ತುದಿಯಲ್ಲಿರುವ ಭಾಷಾ ವಿಧಿವಾದವು ಚಿಂತನೆಯು ರೂಪುಗೊಳ್ಳುವ ಹಂತದಲ್ಲೇ ನುಡಿಯು ವಿಧಿಸುವ ನಿರ್ಬಂಧಗಳಿಗೆ ಒಳಗಾಗಿರುತ್ತದೆ ಎಂದು ವಾದಿಸುತ್ತದೆ.

ನುಡಿ ಸಾಪೇಕ್ಷವಾದವನ್ನು ನಿರಾಕರಿಸಿದವರ ವಿಚಾರವನ್ನು ವಿಶ್ವಾತ್ಮಕವಾದ (ಯೂನಿವರ್ಸಲಿಸಂ) ಎಂದು ಗುರುತಿಸಲಾಗಿದೆಯಷ್ಟೆ ಈ ವಾದವನ್ನು ಪ್ರತಿಪಾದಿಸಿದವರಲ್ಲಿ ಒಬ್ಬರಾದ ಸ್ಟೀವನ್ ಪಿಂಕರ್ ಅವರ ವಿಚಾರಗಳನ್ನು ಈಗ ಗಮನಿಸೋಣ. ಮೆದುಳಿನಲ್ಲಿ ಆಲೋಚನೆಗಳು ರೂಪುಗೊಳ್ಳುವಾಗ ನಾವು ಆಡುವ ನುಡಿಯು ಯಾವ ಪಾತ್ರವನ್ನೂ ವಹಿಸುವುದಿಲ್ಲ. ಆಲೋಚನೆಗಳು ಆಕಾರ ಪಡೆಯಲು ಮೆದುಳಿನಲ್ಲೇ ಒಂದು 'ನುಡಿ' ಇರುತ್ತದೆ. ಈ ನುಡಿಯನ್ನು ಪಿಂಕರ್ ಅವರು **ಮನೋನುಡಿ** (ಮೆಂಟಲೀಸ್) ಎಂದು ಕರೆದಿದ್ದಾರೆ. ಮೆಂಟಲೀಸ್ ಎನ್ನುವುದು ಮಾನವ ಸಹಜ ನುಡಿಗಳಂತೆ ಅಲ್ಲ. ಮೆದುಳಿನಲ್ಲಿ ಗ್ರಹಿಕೆಯ ಕೆಲಸವನ್ನು ಸುರಳೀತಗೊಳಿಸಲು ಇರುವ ವ್ಯವಸ್ಥೆಯೇ ಮನೋನುಡಿ.

ಇದನ್ನೂ ನುಡಿ ಎಂದು ಕರೆಯಲು ಕಾರಣಗಳಿವೆ. ಮಾನವ ಸಹಜ ನುಡಿಗಳಿಗೆ ಇರುವ ಕೆಲವು ಚಹರೆಗಳು ಈ ವ್ಯವಸ್ಥೆಯಲ್ಲೂ ಇರುತ್ತವೆ. ಬಿಡಿ ಬಿಡಿ ಆಗಿರುವ ಬಿಂಬಗಳನ್ನು ಜೋಡಿಸಿ ದೊಡ್ಡ ಬಿಂಬವನ್ನು ರಚಿಸುವುದು ಅಂತಹ ಚಹರೆಗಳಲ್ಲಿ ಒಂದಾಗಿದೆ. ಸಹಜ ನುಡಿಗಳಲ್ಲಿ ಹೇಗೆ ಸೀಮಿತ ಸಂಖ್ಯೆಯ ಉಲಿಗಳಿಂದ ಅನಂತ ಪದರೂಪಗಳನ್ನು ಕಟ್ಟಬಹುದೋ ಹಾಗೆ ಮನೋನುಡಿಯೂ ಕೂಡ ಕೆಲವೇ ಬಿಂಬಗಳಿಂದ ಅನಂತ ಸಂಖ್ಯೆಯ ರಚನೆಗಳನ್ನು ಕಟ್ಟಬಲ್ಲುದು. ವಿಶ್ವಾತ್ಮಕವಾದದ ಪ್ರತಿಪಾದಕರು, ಆಲೋಚನೆ ಎಂಬುದು ಮೆದುಳಿನಲ್ಲಿ ಸ್ವತಂತ್ರವಾಗಿ ನಡೆದು ಬಳಿಕ ಅದನ್ನು ಆಡುವ ನುಡಿಗೆ ರವಾನಿಸಲಾಗುತ್ತದೆ ಎಂಬ ಮಾದರಿಯನ್ನು ಮುಂದಿಡುತ್ತಾರೆ. ಈ ಮಾದರಿಯನ್ನು ತಿಳಿದುಕೊಳ್ಳಲು ಇನ್ನೊಂದು ಉದಾಹರಣೆಯನ್ನು ಗಮನಿಸಬಹುದು.

ಕಂಪ್ಯೂಟರ್‌ಗಳಲ್ಲಿ ಕಾರ್ಯವಾಹಿಯನ್ನು ರೂಪಿಸಲು ಬೇರೆಬೇರೆ 'ಕಂಪ್ಯೂಟರ್ ನುಡಿ'ಗಳನ್ನು ರೂಪಿಸಲಾಗಿದೆ. ಜಾವಾ, ಸಿ,ಸಿ+,ಪಾಸ್ಕಲ್ ಹೀಗೆ ಹಲವು ಬಗೆಯ 'ನುಡಿ'ಗಳನ್ನು ಬಳಸಿ ಈ ಕಾರ್ಯವಾಹಿಗಳನ್ನು 'ಬರೆಯ'ಲಾಗುತ್ತದೆ. ಆದರೆ ಈ ಕಾರ್ಯವಾಹಿಗಳ ಪರಿಣಾಮವಾಗಿ ನಮ್ಮ ಕಣ್ಣೆದುರು ಏನು ಕಾರ್ಯವನ್ನು ಕಂಪ್ಯೂಟರ್ ಮಾಡುವುದೋ ಅದನ್ನು ಮಾತ್ರವೇ ನಾವು ನೋಡುತ್ತೇವೆ. ನಮಗೆ ಕೆಲಸಕ್ಕೆ, ಪರಿಣಾಮಕ್ಕೆ ಕಾರಣವಾದ ಕಾರ್ಯವಾಹಿಯಾಗಲೀ, ಆ ಕಾರ್ಯವಾಹಿಯನ್ನು ರೂಪಿಸಿದ 'ಕಂಪ್ಯೂಟರ್ ನುಡಿ'ಯಾಗಲೀ ಕಾಣುವುದಿಲ್ಲ. ಇಲ್ಲೊಂದು ವ್ಯತ್ಯಾಸವಿದೆ. ಕಂಪ್ಯೂಟರ್ ನುಡಿಯನ್ನು ಬಳಸಿ ಕಟ್ಟಿದ ಕಾರ್ಯವಾಹಿ ಮತ್ತು ಅದರ ಫಲಿತವಾಗಿ ಕಾಣುವ ಕಂಪ್ಯೂಟರ್ ಕೆಲಸಗಳ ನಡುವೆ ಕಾರಣ ಮತ್ತು ಕಾರ್ಯಗಳ ನಂಟು ಇರುತ್ತದೆ. ಆದರೆ ಮನೋನುಡಿಯಲ್ಲಿ ರೂಪುಗೊಂಡ ಚಿಂತನೆಗೂ ಆಡುವ ನುಡಿಯಲ್ಲಿ ಮೈದಳೆಯುವ ಬಿಂಬಕ್ಕೂ ಗಮಕ ಮತ್ತು ಗಮ್ಯಗಳ ನಂಟು ಇರುತ್ತದೆ. ಅಂದರೆ ನುಡಿಯಲ್ಲಿ ಮೈದಳೆಯುವ ಬಿಂಬ ಹಾದಿ ಇದ್ದಂತೆ. ಚಿಂತನೆಯು ಗುರಿ ಇದ್ದಂತೆ. ಹಾದಿಯು ಗುರಿಯನ್ನು ತಲುಪಲು ನೆರವಾಗುತ್ತದೆ. ಆದರೆ ಹಾದಿಗೂ ಗುರಿಗೂ ಕಾರ್ಯಕಾರಣ ಸಂಬಂಧ ಇರುವುದಿಲ್ಲ. ಹಾದಿ ಇಲ್ಲದಿದ್ದರೂ ಗುರಿ ತನ್ನ ಪಾಡಿಗೆ ತಾನು ಇರಬಲ್ಲುದಷ್ಟೆ. ಅಂದರೆ ಮನೋನುಡಿಯಲ್ಲಿ ಮೈತಳೆದದ್ದು ನಾವಾಡುವ ನುಡಿಯ ರೂಪವನ್ನು ತಾಳದೆಯೂ ತನ್ನ ಪಾಡಿಗೆ ತಾನು ಇರಬಲ್ಲುದು.

ಆದರೆ ಈಗಾಗಲೇ ಹೇಳಿದಂತೆ ಇವೆರಡರ ನಡುವೆ ರಾಚನಿಕವಾದ ಹೋಲಿಕೆಗಳು ಇರುತ್ತವೆ. ಮುಖ್ಯವಾಗಿ ಕಡಿಮೆ ಪರಿಕರಗಳಿಂದ ಅನಂತವಾದ ರಚನೆಗಳನ್ನು ಕಟ್ಟಬಲ್ಲ ಅವಕಾಶ ಈ ಎರಡೂ ನುಡಿಗಳಲ್ಲಿ ಇರುತ್ತದೆ. ಅದಕ್ಕಾಗಿ ಇವೆರಡೂ ಅನುಸರಿಸುವ ದಾರಿಗಳಲ್ಲೂ ಹೋಲಿಕೆಗಳಿವೆ. ಬಿಡಿ ಬಿಡಿಯಾದುದನ್ನು ಜೋಡಿಸಿ ದೊಡ್ಡ ರಚನೆಯನ್ನು ಕಟ್ಟುವುದು; ಹೀಗೆ ಕಟ್ಟಿದ ರಚನೆಗಳನ್ನು ಆವರ್ತಗೊಳಿಸುವ ಮೂಲಕ ಇನ್ನೂ ದೊಡ್ಡ ದೊಡ್ಡ ರಚನೆಗಳನ್ನು ಕಟ್ಟುವುದು ಮುಂತಾದ ಮಾದರಿಗಳನ್ನು ಈ ಎರಡೂ ನುಡಿಗಳಲ್ಲೂ ಕಾಣುತ್ತೇವೆ.

ಕಳೆದ ಶತಮಾನದ ನಡುಭಾಗದಲ್ಲಿ ಪ್ರಚಲಿತಗೊಂಡ ಮತ್ತು ಮಾನ್ಯತೆ ಪಡೆದ ಟ್ಯುರಿಂಗ್ ಯಂತ್ರದ ಹಿಂದಿನ ತರ್ಕವು ವಿಶ್ವಾತ್ಮಕವಾದದ ಬೆನ್ನೆಲುಬಾಗಿದೆ. ಅಲನ್ ಟ್ಯುರಿಂಗ್ ಎಂಬಾತನಿಂದ ರೂಪಿತವಾದ ಮಾದರಿ ಇದು. ಇಂದಿನ ಕಂಪ್ಯೂಟರ್-ಡಿಜಿಟಲ್- ಯುಗದ ಹಿಂದಿರುವುದು ಈ ಯಂತ್ರದ ಮಾದರಿಯೇ ಆಗಿದೆ. ಇದನ್ನು ಆಧರಿಸಿಯೇ ಇವೆಲ್ಲವೂ ಮೈದಳೆದಿವೆ. ನುಡಿಯನ್ನು ಕುರಿತ ಈಚಿನ ತಾತ್ವಿಕ ಚಿಂತನೆಗಳ (ಚಾಮ್‌ಸ್ಕಿಯ ಚಿಂತನೆಗಳೂ ಸೇರಿದಂತೆ) ಮೇಲೆ ಟ್ಯುರಿಂಗ್‌ನ ಮಾದರಿಯು ದಟ್ಟವಾದ ಪ್ರಭಾವವನ್ನು ಬೀರಿದೆ.

ನಮಗೆ ಇದರ ಎಲ್ಲ ವಿವರಗಳೂ ಅಗತ್ಯವಿಲ್ಲ. ಮುಖ್ಯವಾಗಿ ಚಿಂತನೆಯು ರೂಪುಗೊಳ್ಳುವುದು ಮೆದುಳಿನ ಕಸುವಾಗಿರುವ ಮನೋನುಡಿಯಲ್ಲಿ; ಬಳಿಕ ಅದು ನಾವು ಆಡುವ ನುಡಿಗೆ ಪರಿವರ್ತಿತವಾಗಿ ಅಭಿವ್ಯಕ್ತಿ ಪಡೆಯುತ್ತದೆ ಎನ್ನುವ ಸಂಗತಿಮಾತ್ರ ನಮಗೆ ಇಲ್ಲಿ ಮುಖ್ಯ. ಇದನ್ನು ಒಪ್ಪಿದರೆ ನಾವು ಆಡುವ ನುಡಿಗೂ ನಮ್ಮಲ್ಲಿ ರೂಪು ತಳೆಯುವ ಚಿಂತನೆಗಳಿಗೂ ನೇರವಾದ ನಂಟು ಇಲ್ಲ ಎನ್ನುವುದನ್ನು ಒಪ್ಪಬೇಕಾಗುತ್ತದೆ. ಆಗ ನುಡಿ ಸಾಪೇಕ್ಷವಾದವೂ ಬಿದ್ದು ಹೋಗುತ್ತದೆ. ಏಕೆಂದರೆ ನುಡಿ ಸಾಪೇಕ್ಷವಾದವು ಚಿಂತನೆ ಮತ್ತು ನುಡಿಗಳಿಗೆ ನೇರ ನಂಟನ್ನು ಒಪ್ಪುತ್ತದೆ. ಮತ್ತು ನುಡಿಯೇ ಚಿಂತನೆಯನ್ನು ಪ್ರಭಾವಿಸುತ್ತದೆ ಎಂದು ವಾದಿಸುತ್ತದೆ. ನುಡಿಗೂ ಚಿಂತನೆಗೂ ನೇರ ನಂಟು ಇಲ್ಲವೆಂದಾದ ಮೇಲೆ ನುಡಿ ಸಾಪೇಕ್ಷವಾದದ ಬುನಾದಿಯೂ ಸಡಿಲಗೊಳ್ಳುತ್ತದೆ

ರೊಮ್ಯಾಂಟಿಕ್ ಯುಗದ ಕವಿಗಳಲ್ಲಿ ಆಗಾಗ ಹೊರಹೊಮ್ಮುವ ಒಂದು ನಿಲುವನ್ನು ಈ ನಿಟ್ಟಿನಲ್ಲಿ ಗ್ರಹಿಸಲು ಸಾಧ್ಯ. ಭಾವಗಳು ಮೂಡುವಿಕೆ ಮತ್ತು ಆ ಭಾವಗಳಿಗೆ ನುಡಿಯ ಆಕಾರ ದೊರಕುವಿಕೆ ಇವೆರಡೂ ಬೇರೆ ಬೇರೆ ಎಂಬ ನಿಲುವು ಅವರಲ್ಲಿ ಗಾಢವಾಗಿ ನೆಲೆಯೂರಿತ್ತು. ಅಲ್ಲದೆ ಮೂಡಿದ ಭಾವಗಳೆಲ್ಲವನ್ನೂ ನುಡಿಯಲ್ಲಿ ಬಿಂಬಿಸಲು ಸಾಧ್ಯವಾಗುವುದಿಲ್ಲ ಎನ್ನುವ ಕೊರಗೂ ಅವರಲ್ಲಿ ಆಗಾಗ ಸುಳಿದು ಹೋಗುತ್ತದೆ. 'ಹೇಳಿದರೆ ಹಾಳಾಗುವುದು ಸವಿಯು, ಹೇಳದಿರೆ ತಾಳಲಾರನು ಕವಿಯು' ಎನ್ನುವ ಸಾಲುಗಳು ಈ ಮನೋಭಾವವನ್ನು ಬಿಂಬಿಸುತ್ತವೆ. ನಮಗಿಲ್ಲಿ ಮನಸ್ಸಿನಲ್ಲಿ ಮೂಡುವ ಹೊಳವುಗಳು ನುಡಿಯ ಮೈಯನ್ನು ಪಡೆದುಕೊಂಡೇ ಹುಟ್ಟಿರುವುದಿಲ್ಲ ಎನ್ನುವ ನಿಲುವು ಮಾತ್ರ ಮುಖ್ಯ.

ವಿಶ್ವಾತ್ಮಕವಾದದ ನೆಲೆಗಟ್ಟುಗಳಿಗೆ ಭದ್ರವಾದ ಬುನಾದಿ ಇದೆ. ಹಾಗೆ ನೋಡಿದರೆ ಪೋರ್ಟ್ ರಾಯಲ್ ಗ್ರಾಮರ್ ಪ್ರತಿಪಾದಿಸಿದ ಸಿದ್ಧಾಂತ ಇಪ್ಪತ್ತನೆಯ ಶತಮಾನದಲ್ಲಿ ಮರಳಿ ಪರಿಷ್ಕೃತ ರೂಪದಲ್ಲಿ ಮಂಡನೆಯಾಗುತ್ತಿದೆ. ನೋಮ್ ಚಾಮ್‌ಸ್ಕಿ ತನ್ನ **ಕಾರ್ಟೀಸಿಯನ್ ಲಿಂಗ್ವಿಸ್ಟಿಕ್ಸ್ : ಎ ಚಾಪ್ಟರ್ ಇನ್ ದ ಹಿಸ್ಟರಿ ಆಫ್ ರ್‍ಯಾಶನಲಿಸ್ಟ್ ಥಾಟ್**(1966) ಎಂಬ ಪುಸ್ತಕದಲ್ಲಿ ಈ ವೈಚಾರಿಕ ಮರುಮಂಡನೆಗೆ ಅನುವು ಮಾಡಿಕೊಟ್ಟಿದ್ದಾರೆ. ಕಾರ್ಟೀಸಿಯನ್ ಎಂಬ ಪದ ಹದಿನೇಳನೆಯ ಶತಮಾನದ ಫ್ರಾನ್ಸ್‌ನ ಚಿಂತಕ ರೆನೆ ಡೆಕಾರ್ಟೆಯ ಹೆಸರಿನಿಂದ ರೂಪುಗೊಂಡಿದ್ದು. ಈ ಕೃತಿಯಲ್ಲಿ ಚಾಮ್‌ಸ್ಕಿ ಪೋರ್ಟ್ ರಾಯಲ್ ಗ್ರಾಮರ್‌ನಿಂದ ಮೊದಲು ಮಾಡಿ ಹರ್ಡರ್, ಹಂಬೋಲ್ಟ್ ಮತ್ತು ರೆನೆ

ಡೆಕಾರ್ಟೆಯವರವರೆಗೆ ಮಂಡಿತವಾದ ಚಿಂತನೆಗಳನ್ನು ಪರಿಶೀಲಿಸಿದ್ದಾರೆ. ಮುಖ್ಯವಾಗಿ ಎಲ್ಲ ನುಡಿಗಳ ರಚನೆಗಳೂ ಸಮಾನವಾದ ತಳಹದಿಯನ್ನು ಹೊಂದಿರುತ್ತವೆ ಎಂಬ ನಿಲುವಿನ ಬೆಳವಣಿಗೆಯನ್ನು ವಿಶ್ಲೇಷಿಸಿದ್ದಾರೆ. ಎಲ್ಲಕ್ಕಿಂತ ಮುಖ್ಯವಾಗಿ ರೆನೆ ಡೆಕಾರ್ಟೆಯು ಮಾನವರರಲ್ಲಿ ತಿಳಿವು ಅಂತಸ್ಥವಾದುದು ಎಂದು ಪ್ರತಿಪಾದಿಸಿದ್ದನ್ನು ಗಮನಿಸಬೇಕು. ಗ್ರೀಕ್ ತತ್ವಶಾಸ್ತ್ರಜ್ಞ ಪ್ಲೇಟೋ ಕೂಡ ಇಂಥದೇ ನಿಲುವನ್ನು ಬೇರೊಂದು ನೆಲೆಯಲ್ಲಿ ಪ್ರತಿಪಾದಿಸಿದ್ದನು. ಮಾನವರಲ್ಲಿ ಹುಟ್ಟಿನಿಂದಲೇ ಅಪಾರವಾದ ತಿಳಿವು ಅಂತಸ್ಥವಾಗಿರುತ್ತದೆ ಎಂಬುದು ಅವನ ನಿಲುವು. ಇದನ್ನು ಅವನ್ನು ದೈವಿಕ ನೆಲೆಯಲ್ಲಿ ಸಮರ್ಥಿಸಿದ್ದನು. ಇಂತಹ ತಿಳಿವು ಇರುವುದರಿಂದಲೇ ಮಾನವರು ಹೊರ ಜಗತ್ತಿನಿಂದ ದೊರೆಯುವ ಅತ್ಯಲ್ಪ ಪ್ರಮಾಣದ ಮಾಹಿತಿಯನ್ನಷ್ಟೇ ಬಳಸಿ ಅಗಾಧವಾದ ಸಾಧನೆಗಳನ್ನು ಮಾಡಬಲ್ಲರು ಎಂದು ಪ್ಲೇಟೋ ನಂಬಿದ್ದನು. ಡೆಕಾರ್ಟೆಯು ಕೂಡ ಇದನ್ನು ಒಪ್ಪುವಂತಿದೆ. ಆದರೆ ಪ್ಲೇಟೋ ನಂಬಿದ್ದ ಪೂರ್ವ ಜನ್ಮದ ನಂಟಿನ ಕಲ್ಪನೆ ಡೆಕಾರ್ಟೆಗೆ ಸಮ್ಮತವಾಗಿರಲಿಲ್ಲ.

ಯುರೋಪಿನ ಜ್ಞಾನೋದಯ ಯುಗದಲ್ಲಿ ತತ್ವಶಾಸ್ತ್ರಜ್ಞರು, ವಿಜ್ಞಾನಿಗಳು ಈ ಲೋಕದ ರಚನೆ ಒಂದು ಯಂತ್ರವನ್ನು ಹೋಲುತ್ತದೆ ಎಂದು ತಿಳಿದಿದ್ದರು. ಅಂದರೆ ಗೊತ್ತು ಮಾಡಬಹುದಾದ ನಿಯಮಗಳಿಗೆ ಅನುಗುಣವಾಗಿ ಈ ಲೋಕದ ವ್ಯಾಪಾರಗಳು ನಡೆಯುತ್ತವೆ ಎಂದು ಗ್ರಹಿಸಿದ್ದರು. ಅಲ್ಲದೆ ಹೀಗೆ ಲೋಕ ವ್ಯಾಪಾರವನ್ನು ನಡೆಸುವ ನಿಯಮಗಳನ್ನು ತಿಳಿದು ಅದಕ್ಕೆ ತಕ್ಕ ಯಂತ್ರ ಮಾದರಿಗಳನ್ನು ರೂಪಿಸುವುದೂ ಸಾಧ್ಯ ಎಂದು ತಿಳಿದಿದ್ದರು. ಗೆಲಿಲಿಯೋ ಮುಂತಾದ ವಿಜ್ಞಾನಿಗಳು ಈ ನಿಲುವನ್ನು ಹೊಂದಿದ್ದವರು. ಆದರೆ ಅವರನ್ನು ಒಂದು ಸಮಸ್ಯೆ ಬೆಂಬಿಡದೆ ಕಾಡುತ್ತಿತ್ತು. ತಮ್ಮ ಈ ನಿಲುವನ್ನು ಮಾನವರ ನುಡಿಗೆ ಅನ್ವಯಿಸುವುದು ಸಾಧ್ಯವಿಲ್ಲವೆನ್ನುವುದು ಅವರಿಗೆ ತಿಳಿದಿತ್ತು. ನುಡಿಯ ಬಳಕೆಯನ್ನು ವಿವರಿಸುವ ಒಂದು ವ್ಯಾಕರಣವನ್ನು ರಚಿಸಬಹುದು. ಆದರೆ ವ್ಯಾಕರಣವು ನುಡಿಯ ಅನಂತ ಸಾಧ್ಯತೆಗಳನ್ನು ವಿವರಿಸಲಾರದು. ಉದಾಹರಣೆಗೆ ಒಂದು ವಾಕ್ಯ ನಿಯಮಗಳನ್ನು ಪಾಲಿಸುತ್ತಿದೆಯೋ ಇಲ್ಲವೋ ಎಂಬುದನ್ನು ವ್ಯಾಕರಣ ತಿಳಿಸಬಲ್ಲುದು. ಸಾವಿರ ವಾಕ್ಯಗಳನ್ನು ನೀಡಿದರೂ ಆ ವಾಕ್ಯಗಳನ್ನು ಪರೀಕ್ಷಿಸಿ ಅವು ನಿಯಮಬದ್ಧವೋ ಅಲ್ಲವೋ ಎಂಬುದನ್ನು ಹೇಳಬಲ್ಲುದು. ಆದರೆ ವಾಕ್ಯಗಳನ್ನು ಕಟ್ಟಲು ವ್ಯಾಕರಣ ನೆರವಾಗಲಾರದು. ಇರುವ ಉಲಿಗಳ ಸಂಖ್ಯೆ ಸೀಮಿತ; ಇರುವ ಪದಗಳ ಸಂಖ್ಯೆ ಸೀಮಿತ. ಆದರೆ ಇವುಗಳ ನೆರವಿನಿಂದ ರೂಪುಗೊಳ್ಳಬಹುದಾದ ವಾಕ್ಯಗಳಿಗೆ ಮಿತಿಯೇ ಇಲ್ಲ. ಅಲ್ಲದೆ ಈ ವಾಕ್ಯಗಳು ಎಂದೋ ಯಾರೋ ಕಟ್ಟಿದ ವಾಕ್ಯಗಳ ನಕಲುಗಳಾಗಿರಬೇಕಿಲ್ಲ. ಯಾರೂ ಕೂಡ ಎಂದೂ ಆ ನುಡಿಯಲ್ಲಿ ಕಟ್ಟದಿರುವ ವಾಕ್ಯಗಳು ಆಗಬಹುದು. ಇದು ಹೇಗೆ ಸಾಧ್ಯವಾಗುತ್ತದೆ ಎನ್ನುವುದು ಆ ಕಾಲದ ಚಿಂತಕರ ಎದುರಿಗಿದ್ದ ಪ್ರಶ್ನೆ. ವಿವರಣೆ ದೊರೆಯದಿದ್ದಾಗ, ಅದನ್ನು ಕಂಡುಕೊಳ್ಳಲು ದಾರಿಗಳು ಕಾಣದಿದ್ದಾಗ ಅದನ್ನು ದೈವಕೃಪೆ ಎನ್ನುವುದಕ್ಕೂ ಅವರು ಸಿದ್ಧರಿರಲಿಲ್ಲ. ಇದು ಅವರಿಗೆ ಬಿಡಿಸಲಾರದ ಕಗ್ಗಂಟಾಗಿಯೇ ಕಂಡಿತ್ತು.

ಚಾಮ್‌ಸ್ಕಿ ಅವರು ಈ ಪ್ರಶ್ನೆಯನ್ನು ಎದುರಿಸುತ್ತಲೇ ತಮ್ಮ ತಾತ್ವಿಕ ನೆಲೆಯನ್ನು ಕಟ್ಟ ತೊಡಗಿದವರು. ನುಡಿಗೆ ಇರುವ ಅಪಾರವಾದ ಸೃಜನಶೀಲತೆಯ ಮೂಲಗಳು ಯಾವುವು ಎಂಬುದನ್ನು ವಿವರಿಸಲು ತಕ್ಕ ವೈಚಾರಿಕ ನಿಲುವೊಂದನ್ನು ಪ್ರತಿಪಾದಿಸಿದರು. ಅವರು ಮಂಡಿಸುತ್ತಿರುವ ಯೂನಿವರ್ಸಲ್ ಗ್ರಾಮರ್‌ನ ಸ್ವರೂಪ ಜ್ಞಾನೋದಯ ಯುಗದ ಚಿಂತಕರನ್ನು ಕಾಡಿಸುತ್ತಿದ್ದ ಪ್ರಶ್ನೆಯನ್ನು ಬಿಡಿಸುವ ಯತ್ನದ ಮುಂದುವರಿಕೆ ಎನಿಸಿದರೂ ಹಲವಾರು ಗುಣಾತ್ಮಕ ಬದಲಾವಣೆಗಳನ್ನು ಚಾಮ್‌ಸ್ಕಿ ಅವರ ಪ್ರತಿಪಾದನೆಯಲ್ಲಿ ಗುರುತಿಸಬಹುದಾಗಿದೆ. ಆದರೂ ಚಾಮ್‌ಸ್ಕಿ ಚಿಂತನೆಗಳು ನಿರ್ವಾತದಿಂದ ಹುಟ್ಟಿದ್ದಲ್ಲ. ಅದಕ್ಕೊಂದು ವೈಚಾರಿಕ ಬುನಾದಿ ಇತ್ತು ಎಂಬುದನ್ನು ಗಮನಿಸುವುದು ಅಗತ್ಯ.

ಸಪೀರ್-ವೂರ್ಫ್ ಪ್ರಮೇಯ ಮತ್ತು ಅದನ್ನು ನಿರಾಕರಿಸುವ ವಾದಗಳ ನಡುವೆ ಯಾವುದು ಸರಿ ಎಂಬ ಚರ್ಚೆ ಆಸಕ್ತಿದಾಯಕವಾದರೂ ನಮ್ಮ ಸದ್ಯದ ಅಗತ್ಯದ ವ್ಯಾಪ್ತಿಗೆ ಹೊರತಾದುದು. ಹಾಗಾಗಿ ಆ ಚರ್ಚೆಯನ್ನು ಬದಿಗಿರಿಸೋಣ. ಸಪೀರ್-ವೂರ್ಫ್ ಪ್ರಮೇಯವನ್ನು ಸಮರ್ಥಿಸಲು ನೀಡುವ ಉದಾಹರಣೆಗಳು ನುಡಿಯ ಪದಕೋಶದ ಸೀಮಿತ ವಲಯಕ್ಕೆ ಮಾತ್ರ ಸೇರಿವೆ. ಉದಾಹರಣೆಗೆ ಬಣ್ಣಗಳು, ಎಣಿಕೆಯ ಪದಗಳು ಮುಂತಾದವು. ಇನ್ನೂ ಮುಂದುವರೆದು ಸಂಬಂಧ ಸೂಚಕ ಪದಗಳನ್ನೂ ಈ ಪ್ರಮೇಯದ ಸಮರ್ಥನೆಗಾಗಿ ಉಲ್ಲೇಖಿಸುವುದುಂಟು. ಕೆಲವು ನುಡಿಗಳಲ್ಲಿ ವ್ಯಕ್ತಿಯು ರಕ್ತ ಸಂಬಂಧದಲ್ಲಿ ಹೊಂದಬಹುದಾದ ಪ್ರತಿಯೊಂದು ಸಂಬಂಧಕ್ಕೂ ಬೇರೆ ಬೇರೆ ಪದಗಳಿರುತ್ತವೆ. ಆದರೆ ಈ ಸಂಬಂಧ ಸೂಚಕಗಳ ಜಾಲದ ಪದಗಳು ಮತ್ತೊಂದು ನುಡಿಯಲ್ಲಿ ಇರುವುದಿಲ್ಲ ಎಂದುಕೊಳ್ಳೋಣ. ಇದರಿಂದ ಅಂತಹ ಸಂಕೀರ್ಣ ಪದಜಾಲ ಇಲ್ಲದಿರುವ ನುಡಿಗಳನ್ನು ಆಡುವ ಸಮುದಾಯಗಳಲ್ಲಿ ಅಂತಹ ಸಂಬಂಧಗಳೇ ಇರುವುದಿಲ್ಲವೆಂದು ವಾದಿಸಲು ಬರುವುದಿಲ್ಲ. ಇಲ್ಲವೇ ಆ ಸಮುದಾಯದ ಜನರು ತಮ್ಮ ನುಡಿಯಲ್ಲಿ ಇರದ ಸಂಬಂಧ ಸೂಚಕ ಪದಗಳಿಗೆ ತಕ್ಕ ಸಂಬಂಧಗಳನ್ನು ಗುರುತಿಸಲಾರರು ಎಂದು ಹೇಳಲಾಗುವುದಿಲ್ಲ. ಕನ್ನಡದಲ್ಲಿ **ಅಕ್ಕ** ಮತ್ತು **ತಂಗಿ** ಎಂಬ ಎರಡು ಪದಗಳಿವೆ. ಇವೆರಡೂ ಬೇರೆಬೇರೆ ಬಗೆಯ ಸಂಬಂಧಗಳನ್ನು ಸೂಚಿಸುವ ಪದಗಳು. ನನ್ನ ತಂದೆತಾಯಿಯ ಮಗಳು ನನಗಿಂತ ವಯಸ್ಸಿನಲ್ಲಿ ಚಿಕ್ಕವಳಾಗಿದ್ದರೆ **ತಂಗಿ**ಯಾಗುತ್ತಾಳೆ; ನನಗಿಂತ ದೊಡ್ಡವಳಾಗಿದ್ದರೆ **ಅಕ್ಕ** ಎನಿಸಿಕೊಳ್ಳುತ್ತಾಳೆ. ಇಂಗ್ಲಿಶಿನಲ್ಲಿ ಇವೆರಡೂ ಸಂಬಂಧಗಳನ್ನು ಸೂಚಿಸಲು **ಸಿಸ್ಟರ್** ಎಂಬ ಒಂದೇ ಪದವಿದೆ. ಇದರ ಅರ್ಥ ಇಂಗ್ಲಿಶ್ ಮಾತನಾಡುವವರು ಸೋದರಿಯಲ್ಲಿ ದೊಡ್ಡವರ ಮತ್ತು ಚಿಕ್ಕವರ ನಡುವೆ ವ್ಯತ್ಯಾಸವನ್ನೇ ಗುರುತಿಸಲಾರರು ಎಂದು ವಾದಿಸಲು ಬರುವುದಿಲ್ಲ. ಇನ್ನೊಂದು ಉದಾಹರಣೆ: ನಿನ್ನೆ ಮತ್ತು ನಾಳೆ ಎಂಬ ಪದಗಳು ಕನ್ನಡದಲ್ಲಿ ಸಮಯದ ಬೇರೆ ಬೇರೆ ಅವಸ್ಥೆಗಳನ್ನು ಸೂಚಿಸುತ್ತವೆ. ಹಿಂದಿ ಮಾತನಾಡುವವರಲ್ಲಿ **ಕಲ್** ಎಂಬ ಒಂದೇ ಪದ ಕಾಲದ ಈ ಎರಡೂ ಅವಸ್ಥೆಗಳನ್ನು ಸೂಚಿಸುತ್ತದೆ. ಅಂದರೆ ಹಿಂದಿ ಮಾತನಾಡುವವರು ನಿನ್ನೆ ಮತ್ತು ನಾಳೆಗಳ ನಡುವೆ

ಇರುವ ವ್ಯತ್ಯಾಸವನ್ನೇ ಗುರುತಿಸಲಾರರು ಎಂದಾಗಲೀ, ಈ ವ್ಯತ್ಯಾಸ ಆ ನುಡಿಯನ್ನು ಆಡುವವರಿಗೆ ಅನಗತ್ಯ ಎಂದಾಗಲೀ ಹೇಳಲಾಗುವುದಿಲ್ಲ.

ಇನ್ನೂ ಒಂದು ಸಂಗತಿಯನ್ನು ಗಮನಿಸೋಣ. ಒಂದು ನುಡಿಯಲ್ಲಿ ಸ್ತ್ರೀವಾಚಿ ವರ್ಗ ಮತ್ತು ಅಮಹತ್ (ಪ್ರಾಣಿ ಪಕ್ಷಿ, ಸಸ್ಯ ಮತ್ತು ವಸ್ತು ಜಗತ್ತು) ವರ್ಗದ ಪದಗಳಿಗೆ ಒಂದೇ ಬಗೆಯ ಲಿಂಗಸೂಚಕ ಪದಗಳಿರುತ್ತವೆ ಎಂದುಕೊಳ್ಳೋಣ. **'ಅದು ಬಂತು'** ಎಂಬ ವಾಕ್ಯದಲ್ಲಿ **ಅದು** ಎಂಬುದು ಹೆಂಗಸನ್ನಾದರೂ ಸೂಚಿಸಬಹುದು ಇಲ್ಲವೇ ಕುದುರೆ, ಆನೆ ಹೀಗೆ ಯಾವುದೇ ಪ್ರಾಣಿಯನ್ನಾದರೂ ಸೂಚಿಸಬಹುದು. (ವಿವರಣೆಗೆಂದು ಕನ್ನಡದಲ್ಲಿ ಕಟ್ಟಿದ ವಾಕ್ಯವನ್ನು ಉದಾಹರಣೆಯಾಗಿ ಕೊಟ್ಟಿದೆ. ಕನ್ನಡ ಈ ಬಗೆಯ ನುಡಿ ಎಂದು ತಿಳಿಯಬಾರದು) ಹೀಗಿರುವಾಗ ಸ್ತ್ರೀವಾಚಿ ವರ್ಗ ಮತ್ತು ಅಮಹತ್ ವರ್ಗದ ನಡುವೆ ವ್ಯತ್ಯಾಸವಿಲ್ಲದಿರುವುದು ಆ ನುಡಿಯನ್ನಾಡುವ ಜನರ ಲೋಕಗ್ರಹಿಕೆಯಲ್ಲಿಯೇ ಹೊರತು ಅವರಾಡುವ ನುಡಿಯಲ್ಲಲ್ಲವಷ್ಟೆ. ಅಂದರೆ ನುಡಿಯೇ ಅದನ್ನಾಡುವ ಲೋಕ ಗ್ರಹಿಕೆಯನ್ನು ನಿಯಂತ್ರಿಸುತ್ತದೆ ಎಂದು ತಿಳಿಯುವುದು ಸಫೀರ್-ವೂರ್ಫ್ ಪ್ರಮೇಯದ ಒಂದು ಅತಿರೇಕದ ಸ್ಥಿತಿ. ಇದನ್ನು ಒಪ್ಪುವುದು ಕಷ್ಟ.

1950 ರ ಬಳಿಕ ಹಲವು ವಿದ್ವಾಂಸರು ನುಡಿಯು ಲೋಕ ಗ್ರಹಿಕೆಯನ್ನು ಪ್ರಭಾವಿಸುತ್ತದೋ ಇಲ್ಲವೋ ಎಂಬುದನ್ನು ಅರಿಯಲು ಪ್ರಯೋಗಗಳನ್ನು ಕೈಗೊಂಡಿದ್ದಾರೆ. ಈ ಮೊದಲೇ ಹೇಳಿದಂತೆ ಬಣ್ಣಗಳನ್ನು ಗುರುತಿಸುವ ನೆಲೆಯಲ್ಲಿ ಕೆಲವು ಪ್ರಯೋಗಗಳು ನಡೆದಿವೆ. ವರ್ಣಛಾಯೆಗಳಲ್ಲಿ ಇರುವ ವ್ಯತ್ಯಾಸಗಳನ್ನು ಬೇರೆ ಬೇರೆ ನುಡಿಯನ್ನು ಆಡುವವರು ಬೇರೆ ಬೇರೆಯಾಗಿ ಗುರುತಿಸುತ್ತಾರೆ ಎನ್ನುವುದು ದಿಟವೇ ಇಲ್ಲವೇ ಎಂಬುದನ್ನು ತಿಳಿಯುವುದು ಈ ಪ್ರಯೋಗಗಳ ಗುರಿಯಾಗಿತ್ತು. ಹಾಗೆಯೇ ಕಾಲ ಮತ್ತು ದೇಶಗಳ ನಿರಂತರತೆಯನ್ನು ಬೇರೆ ಬೇರೆ ನುಡಿಗಳನ್ನು ಆಡುವವರು ಹೇಗೆ ಗ್ರಹಿಸುತ್ತಾರೆ ಎಂಬುದನ್ನು ಅರಿಯುವ ಪ್ರಯೋಗಗಳೂ ನಡೆದಿವೆ. ಕಾಲವನ್ನು ಭೂಸಮಾನಾಂತರ ರೇಖೆಯ ಗತಿಯಲ್ಲಿ ಗ್ರಹಿಸುವ ಮತ್ತು ಮಂಡಿಸುವ ನುಡಿ ಇಂಗ್ಲಿಶ್. ಅಂದರೆ ನಿನ್ನೆ, ಇಂದು ಮತ್ತು ನಾಳೆಗಳನ್ನು ಅಡ್ಡಗೆರೆಯ ಬೇರೆ ಬೇರೆ ಬಿಂದುಗಳಲ್ಲಿ ಇರುವಂತೆ ಗ್ರಹಿಸುವುದು ಈ ನುಡಿಯ ಒಂದು ನೆಲೆ. ಆದರೆ ಮಂಡಾರಿಯನ್ (ಚೀನಾದ ಬಹು ಜನರು ಆಡುವ ನುಡಿ) ಕಾಲದ ಗತಿಯನ್ನು ಲಂಬಗೆರೆಯ ಮೇಲಿನ ಬಿಂದುಗಳಲ್ಲಿ ಗ್ರಹಿಸುತ್ತದೆ. ಅಂದರೆ ಈ ಎರಡೂ ನುಡಿಗಳನ್ನಾಡುವ ಜನರು ಕಾಲದ ಗತಿಯನ್ನು ಗುರುತಿಸುವ ಬಗೆಯನ್ನು ಅವರವರು ಆಡುವ ನುಡಿಗಳು ಪ್ರಭಾವಿಸುತ್ತವೆಯೋ ಎಂಬುದನ್ನು ಗುರುತಿಸಬೇಕಾಗುತ್ತದೆ. ಕಾಲದ ಗತಿಯೊಡನೆ ದೇಶದ ಬೇರೆ ಬೇರೆ ಸ್ಥಿತಿಗಳನ್ನು ಬೆರೆಸಿದಾಗ ಈ ಗ್ರಹಿಕೆಯ ಕ್ರಮದಲ್ಲಿ ಬದಲಾವಣೆ ಆಗುವುದೋ ಇಲ್ಲವೋ ಎಂಬುದನ್ನು ಕೂಡ ತಿಳಿಯಬೇಕಾಗುತ್ತದೆ. (ಕಾಲ ದೇಶಗಳನ್ನು ಗ್ರಹಿಸುವ ಬಗೆಯನ್ನು ಕನ್ನಡದ ಉದಾಹರಣೆಯ ಮೂಲಕ ತಿಳಿಯುವುದರಿಂದ ಈ ಪ್ರಯೋಗದ ಸ್ವರೂಪ ಗೊತ್ತಾಗುತ್ತದೆ. 'ವರೆಗೆ' ಎನ್ನುವ ಪದಭಾಗವನ್ನು ಕನ್ನಡದಲ್ಲಿ ಹೇಗೆ ಬಳಸುತ್ತೇವೆ ಎನ್ನುವುದನ್ನು ನೋಡೋಣ. 'ಬಸ್ಸು ಬರುವವರೆಗೆ ಕಾಯ್ದು

ಕುಳಿತಿರಬೇಕಾಯಿತು.' ಮತ್ತು 'ಬೀದಿಯ ಕೊನೆವರೆಗೆ ನಾನೂ ನಿನ್ನ ಜೊತೆಗೆ ಬರುತ್ತೇನೆ.' ಎಂಬ ಎರಡು ವಾಕ್ಯಗಳಲ್ಲಿ 'ವರೆಗೆ' ಎಂಬುದನ್ನು ಬೇರೆ ಬೇರೆ ಗುರಿಯಲ್ಲಿ ಬಳಸಲಾಗಿದೆ. ಮೊದಲ ವಾಕ್ಯದಲ್ಲಿ ಅದು ಕಾಲವನ್ನು ಸೂಚಿಸಿದರೆ ಎರಡನೆಯ ವಾಕ್ಯದಲ್ಲಿ ಅದು ದೇಶವನ್ನು ಸೂಚಿಸುತ್ತದೆ. **ತನಕ, ಗಂಟ** ಎಂಬ **ವರೆಗೆ** ಪದಕ್ಕೆ ಬದಲಿಯಾಗಿ ಬಳಸುಬಹುದಾದ ಪದಗಳೂ ಕೂಡ ಹೀಗೇ ಕಾಲ ಮತ್ತು ದೇಶಗಳೆರಡನ್ನೂ ಸೂಚಿಸಬಲ್ಲವು. ಅಂದರೆ ಕನ್ನಡವು ಕಾಲ ದೇಶಗಳನ್ನು ಸೂಚಿಸುವ ನೆಲೆಯಲ್ಲಿ ಆ ನುಡಿಯನ್ನು ಆಡುವವರಿಗೆ ಬೇರೆ ಬೇರೆ ನಿರ್ದೇಶನಗಳನ್ನು ನೀಡುವುದಿಲ್ಲ. ಆದರೆ ಎಲ್ಲ ನುಡಿಗಳಿಗೂ ಇದು ದಿಟವಾಗಿರಬೇಕಿಲ್ಲ) ಈ ಎಲ್ಲ ಪ್ರಯೋಗಗಳು ನುಡಿಯ ರಚನೆಯ ಚೌಕಟ್ಟುಗಳನ್ನು ಪಾಲಿಸುತ್ತಿದ್ದರೂ ಲೋಕಾನುಭವವನ್ನು ಬಿಂಬಿಸಲು ಆ ಚೌಕಟ್ಟುಗಳನ್ನು ದಾಟಿದ ವಿಧಾನಗಳನ್ನು ಜನರು ರೂಪಿಸಿಕೊಂಡಿರುತ್ತಾರೆ ಎನ್ನುವುದನ್ನು ತೋರಿಸಿಕೊಟ್ಟಿವೆ.

ನುಡಿಗಳ ಅಳಿವಿನಿಂದ ಆಗುವುದೇನು?

ನಮ್ಮ ಮೊದಲಿನ ಪ್ರಶ್ನೆಗೆ ಬರೋಣ. ನುಡಿಯ ಅಳಿವಿನೊಡನೆ ಆ ನುಡಿಯಲ್ಲಿ ಅಡಕವಾಗಿರುವ ತಿಳಿವಳಿಕೆ, ಸಾಂಸ್ಕೃತಿಕ ನೆನಪು, ಲೋಕ ಗ್ರಹಿಕೆಗಳೂ ಅಳಿಯುತ್ತವೆ ಎಂಬ ನಿಲುವೂ ಕೂಡ ಇಡಿಯಾಗಿ ದಿಟವಲ್ಲ. ಇನ್ನೊಂದು ಉದಾಹರಣೆ ಮೂಲಕ ಇದನ್ನು ಅರಿಯಬಹುದು. ಒಂದು ದೇಶಕ್ಕೊಂದು ನಾಣ್ಯ ವ್ಯವಸ್ಥೆ ಇರುತ್ತದೆ. ಆದರೆ ಇದು 'ಕಟ್ಟಿಕೊಂಡದ್ದು' ತಾನೆ?. ಯುರೋಪಿನ ನಾಡುಗಳು 1993ರಲ್ಲಿ ಯುರೋಪಿಯನ್ ಒಕ್ಕೂಟವನ್ನು ರಚಿಸಿಕೊಂಡವು. 1999ರಲ್ಲಿ ಈ ಒಕ್ಕೂಟದ ದೇಶಗಳು ತಮ್ಮ ನಾಣ್ಯ ವ್ಯವಸ್ಥೆಯ ಬದಲು ಯುರೋ ಎಂಬ ಸಮಾನ ನಾಣ್ಯ ವ್ಯವಸ್ಥೆಗೆ ಬದಲಿಸಿಕೊಂಡವು (ಒಂದು ದೇಶವನ್ನು ಬಿಟ್ಟು, ಅದೂ ಕೂಡ 2001ರಲ್ಲಿ ಇದೇ ವ್ಯವಸ್ಥೆಗೆ ಸೇರಿತು) ಆದರೆ ಇದರಿಂದ ಆಯಾ ದೇಶಗಳ ನಾಣ್ಯ ವ್ಯವಸ್ಥೆ ಬಿಂಬಿಸುವ ಸಂಪತ್ತು ಮಾಯವಾಗಲಿಲ್ಲ. ಈಗ ಅದೇ ಸಂಪತ್ತು ಯುರೋಗಳ ಮೂಲಕ ಬಿಂಬಿತವಾಗತೊಡಗಿತು. ಸಮುದಾಯಗಳು ನುಡಿಗಳನ್ನು ಕಳೆದುಕೊಂಡು ಇನ್ನೊಂದು ನುಡಿಗೆ ಬದಲಾದಾಗ ಕೂಡ ಹೀಗೆಯೇ ಆಗುವುದಷ್ಟೆ. ಈ ಹೋಲಿಕೆ ಸರಳಗೊಳಿಸಿದ ವಿವರಣೆಯಂತೆ ತೋರಬಹುದು. ಆದರೂ ಇವೆರಡರ ನಡುವೆ ಇರುವ ಹೋಲಿಕೆಯನ್ನು ಅಲ್ಲಗಳೆಯಲಾಗದು.

ಇದೂ ಅಲ್ಲದೆ ಒಂದು ಸಮುದಾಯ ತನ್ನ ತಿಳಿವನ್ನು, ನೆನಪನ್ನು ಶಾಬ್ದಿಕವಾಗಿ ಮಾತ್ರವೇ ರೂಪಿಸಿಕೊಳ್ಳುತ್ತದೆ ಎಂದು ವಾದಿಸುವುದು ಸರಿಯಲ್ಲ. ಅಶಾಬ್ದಿಕವಾಗಿಯೂ ತನ್ನ ತಿಳಿವನ್ನು ಕಟ್ಟಿಕೊಂಡಿರುತ್ತದೆ. ಅದರ ನೆನಪುಗಳು ಹಲವು ಅಶಾಬ್ದಿಕ ನೆಲೆಗಳಲ್ಲಿಯೂ (ಉದಾಹರಣೆಗೆ ಆಚರಣೆಗಳು, ಅಶಾಬ್ದಿಕ ಕಲೆಗಳು) ನೆಲೆಗೊಂಡಿರುತ್ತವೆ. ಬರಹ ವ್ಯವಸ್ಥೆಗೆ ತೆರೆದುಕೊಳ್ಳದ ನುಡಿಗಳನ್ನಾಡುವ ಸಮುದಾಯಗಳನ್ನು ಗಮನಿಸಿದರೆ ಈ

ಸಂಗತಿ ಸ್ಪಷ್ಟವಾಗುತ್ತದೆ. ಇಂತಹ ಸಮುದಾಯಗಳು ಅಪಾರವಾದ ಮೌಖಿಕ ರಚನೆಗಳನ್ನು ನೆನಪಿನಲ್ಲಿ ಇರಿಸಿಕೊಂಡಿರುತ್ತವೆ ಎನ್ನುವುದೇನೋ ದಿಟ. ಆದರೆ ಅಷ್ಟೇ ಪ್ರಮಾಣದಲ್ಲಿ, ಅಷ್ಟೇಕೆ ಕೆಲವೊಮ್ಮೆ ಅದಕ್ಕೂ ಹೆಚ್ಚಿನ ಪ್ರಮಾಣದಲ್ಲಿ ಅಶಾಬ್ದಿಕ ರೂಪದಲ್ಲೂ ತಮ್ಮ ನೆನಪುಗಳನ್ನು, ತಿಳಿವನ್ನು, ಲೋಕ ದೃಷ್ಟಿಯನ್ನು ಹಿಡಿದಿರಿಸಿಕೊಂಡಿರುತ್ತವೆ. ಮೌಖಿಕ ರಚನೆಗಳು ಮತ್ತು ಈ ಅಶಾಬ್ದಿಕ ನೆಲೆಗಳು ಯಾವಾಗಲೂ ಪೂರಕವಾಗಿರುತ್ತವೆ ಎಂದೇನಲ್ಲ. ಅವೆರಡರ ನಡುವೆ ಪರಸ್ಪರ ವಿರುದ್ಧವಾದ ವಲಯಗಳೂ ಇರಬಹುದು. ಈ ವಿರೋಧ ಉಂಟಾಗುವುದಕ್ಕೆ ಸಾಂಸ್ಕೃತಿಕವಾದ ಕಾರಣಗಳಿರುತ್ತವೆ.

ಕರ್ನಾಟಕದ ಕೆಲವು ಸಮುದಾಯಗಳಲ್ಲಿ ಚಂದ್ರನನ್ನು ಪೂಜಿಸುವ ಆಚರಣೆ ಇದೆ. ಈ ತಿಂಗಳ ಮಾವನ (ಕೆಲವರು ಹೇಳುವಂತೆ ಬೆಳ್ದಿಂಗಳಪ್ಪನ) ಪೂಜೆಯನ್ನು ಮಾಡುವ ಸಮುದಾಯಗಳ ಆ ಪೂಜೆಯಲ್ಲಿ ಹಾಡುಗಳಿರುತ್ತವೆ; ಕೆಲವೊಮ್ಮೆ ಕತೆಗಳೂ ಇರುತ್ತವೆ. ಜೊತೆಗೆ ಪೂಜೆಯ ಆಚರಣೆಗಳು ಮತ್ತು ಹಲವು ಚಿತ್ತಾರಗಳಿರುತ್ತವೆ. ಈ ಹಾಡುಗಳು ಮತ್ತು ಆಚರಣೆ, ಚಿತ್ರಗಳು ಒಂದಕ್ಕೊಂದು ಪೂರಕವೇ ಆಗಿರಬೇಕಿಲ್ಲ. ಹೊರಗಿನಿಂದ ಅಧ್ಯಯನ ಮಾಡುವವರು ಎರಡರ ನಡುವೆ ನೇರ ನಂಟು ಇದೆಯೆಂಬ ನೆಲೆಯಿಂದ ತಮ್ಮ ವ್ಯಾಖ್ಯಾನಗಳನ್ನು ಮಾಡುತ್ತಿರಬಹುದು. ಆದರೆ ಈ ಎರಡೂ ನೆಲೆಗಳಲ್ಲಿ ಯಾವುದು ಅಚಲ (ಬದಲಿಸಲು ಸಾಧ್ಯವಿಲ್ಲದುದು) ಯಾವುದು ಪರಿವರ್ತನೆಗೆ ಒಗ್ಗುವುದು, ಯಾವುದು ಪವಿತ್ರ, ಯಾವುದು ಅಲ್ಲ ಎಂಬ ನಂಬಿಕೆಗಳನ್ನು ಆ ಸಮುದಾಯವೇ ಹೊಂದಿರುತ್ತದೆ. ಹಾಗಾಗಿ ಆ ಸಮುದಾಯದ ನೆನಪು, ತಿಳಿವು, ಲೋಕ ದೃಷ್ಟಿಗಳನ್ನು ಅದರ ನುಡಿಯ ಮೂಲಕವೇ ತಿಳಿಯಲು ಹೊರಡುವುದು ಮತ್ತು ಇವೆಲ್ಲವೂ ಆ ಸಮುದಾಯದ ನುಡಿಯಲ್ಲೇ ಅಡಕವಾಗಿರುತ್ತದೆ ಎಂದು ತಿಳಿಯುವುದು ಸರಿಯಾದ ಹಾದಿಯಾಗಲಾರದು. ನುಡಿ ಪಠ್ಯದ ಜೊತೆಗೆ ನುಡಿಯದಲ್ಲದ **ಸಹಪಠ್ಯ** ಮತ್ತು ಇವುಗಳಿಗಿರುವ **ಸಂದರ್ಭ**ವನ್ನು ಒಟ್ಟಾಗಿ ಗಮನಿಸಿದಾಗ ಮಾತ್ರ ವಸ್ತುಸ್ಥಿತಿಯ ಬಗೆಗೆ ನಮ್ಮ ತಿಳಿವಳಿಕೆ ಮೂಡಬಲ್ಲುದು. ಅಂದರೆ ಆಗ ನುಡಿಯ ಅಳಿವು ಆ ಸಮುದಾಯದ ಎಲ್ಲ ತಿಳಿವನ್ನೂ ಅಳಿಸಿ ಹಾಕುವುದೆಂದು ವಾದಿಸುವುದು ಸರಿಯಾಗದು.

ನುಡಿಗಳು ಏಕೆ ಅಳಿಯುತ್ತವೆ?

ನುಡಿಗಳ ಅಳಿವು ನಡೆಯುವ ಮುಖ್ಯವಾದ ಎರಡು ಸ್ಥಿತಿಗಳನ್ನು ನೋಡೋಣ.

1. ನೈಸರ್ಗಿಕ ವಿಕೋಪಗಳಿಂದಾಗಿ ಒಂದು ಸಮುದಾಯ ಇಡಿಯಾಗಿ ನಾಶವಾಗುತ್ತದೆ ಎಂದುಕೊಳ್ಳೋಣ. ಮತ್ತು ಆ ನುಡಿಯನ್ನು ಆ ಸಮುದಾಯದ ಹೊರಗೆ ಬೇರೆ ಯಾರೂ ಬಳಸುತ್ತಿಲ್ಲವಾದರೆ ಆಗ ಆ ಸಮುದಾಯದೊಡನೆ ಆ ನುಡಿಯೂ ಇಲ್ಲವಾಗುತ್ತದೆ. ಜಾಗತಿಕವಾಗಿ ಹೀಗೆ ನೂರಾರು ಸಮುದಾಯಗಳು ಅಳಿದುಹೋಗಿ ಅವುಗಳು ಆಡುತ್ತಿದ್ದ ನುಡಿಗಳೂ ಕಳೆದು ಹೋಗಿವೆ. ತೀರಾ ಈಚೆಗೆ ಅಂದರೆ 2010

ರಲ್ಲಿ ಅಂಡಮಾನ್ ದ್ವೀಪ ಸಮೂಹದಲ್ಲಿ ಬೋ (ಕೆಲವರು ಬೋಅ ಎಂದೂ ಕರೆಯುತ್ತಾರೆ) ಬುಡಕಟ್ಟಿಗೆ ಸೇರಿದ್ದ 'ಕೊನೆಯ' ಮಹಿಳೆಯೊಬ್ಬರು ತೀರಿಕೊಂಡರು. ಅದಕ್ಕೂ ಹಿಂದೆ ಸುಮಾರು ಮೂವತ್ತು ವರುಶಗಳ ಕಾಲ ಆ ಬುಡಕಟ್ಟಿನ ಏಕೈಕ ವ್ಯಕ್ತಿಯಾಗಿ ಆಕೆ ಬದುಕಿದ್ದರೆಂದು ಆ ಬುಡಕಟ್ಟಿನ ನುಡಿಯ ಬಗೆಗೆ ಅಧ್ಯಯನ ನಡೆಸಿರುವ ದೆಹಲಿಯ ವಿಶ್ವವಿದ್ಯಾಲಯದ ಪ್ರಾಧ್ಯಾಪಕಿ ಡಾ.ಅನ್ವಿತಾ ಅಬ್ಬಿ ಅವರು ತಿಳಿಸುತ್ತಾರೆ. ಆ ನುಡಿಯ ಮಾಹಿತಿಯನ್ನು ಈ ಅಧ್ಯಯನಕಾರರು ಸಂಗ್ರಹಿಸಿದ್ದಾರೆ. ಅಂತರ್ಜಾಲದಲ್ಲಿ ಈ ಮಹಿಳೆಯ ಮಾತುಗಳಿರುವ ದೃಶ್ಯ ತುಣುಕನ್ನು ನೋಡಬಹುದು. ಈಗ ಆ ಬುಡಕಟ್ಟೂ ಇಲ್ಲ; ಆ ಬುಡಕಟ್ಟಿನ ನುಡಿಯೂ ಇಲ್ಲ. (ಆದರೂ ಮೂವತ್ತು ವರುಶಗಳ ಕಾಲ ಆ ಮಹಿಳೆ ತನ್ನ ನುಡಿಯನ್ನು ಆಡಲು ಬೇಕಾದ ಪರಿಸರ ಇಲ್ಲದಿದ್ದರೂ ಇನ್ನೊಬ್ಬರೊಡನೆ ವ್ಯವಹರಿಸಲು ಸಾಧ್ಯವಾದುದು ಇನ್ನೊಂದು ನುಡಿಯನ್ನು ಕಲಿಯುವ ಮೂಲಕ ಎಂಬುದನ್ನು ಮರೆಯಬಾರದು)

2. ರಾಜಕೀಯ, ಆರ್ಥಿಕ ಕಾರಣಗಳಿಂದಾಗಿ ಸಮುದಾಯವೊಂದು ಮತ್ತೊಂದು ಸಮುದಾಯಕ್ಕೆ ಅಧೀನವಾಗಿ ಜೀವಿಸುವ ಸಂದರ್ಭ ಒದಗಬಹುದು. ಇಲ್ಲವೇ ಸಮುದಾಯಗಳು ತಮ್ಮ ಮೂಲ ನೆಲೆಯಿಂದ ಬೇರು ಕಿತ್ತುಕೊಂಡು ಬೇರೆಲ್ಲಿಗೋ ವಲಸೆ ಹೋಗಬೇಕಾಗಿ ಬರಬಹುದು. ಇಂತಹ ಸಂದರ್ಭಗಳಲ್ಲಿ, ಎಲ್ಲ ಕಡೆಯೂ ಅಲ್ಲದಿದ್ದರೂ ಕೆಲವು ಸಂದರ್ಭದಲ್ಲಿ ಆ ಸಮುದಾಯ ತನ್ನ ನುಡಿಯನ್ನು ಬಿಟ್ಟುಕೊಟ್ಟು ಇನ್ನೊಂದು ನುಡಿಯನ್ನು ಬಳಸಲು ತೊಡಗಬೇಕಾಗುವುದುಂಟು. ಇದಕ್ಕೆ ಹಲವಾರು ದಶಕಗಳು ಹಿಡಿಯಬಹುದು. ಒಂದೆರಡು ತಲೆಮಾರುಗಳು ದಾಟಿಹೋಗಲೂಬಹುದು. ಇಂತಹ ಕಡೆಗಳಲ್ಲಿ ನುಡಿಗಳು ಅಳಿದರೂ ಆ ನುಡಿಗಳನ್ನಾಡುತ್ತಿದ್ದ ಜನ ಸಮುದಾಯ ಅಳಿದಿರುವುದಿಲ್ಲ; ಬೇರೊಂದು ನುಡಿಯನ್ನು ಬಳಸುತ್ತಾ ಮುಂದುವರೆಯುತ್ತಿರುತ್ತದೆ. ನಾಗರಿಕತೆಯ ಚರಿತ್ರೆಯಲ್ಲಿ ಇಂತಹ ನೂರಾರು ಸಂದರ್ಭಗಳು ಆಗಿಹೋಗಿವೆ.

ನಮ್ಮ ಸದ್ಯದ ಚರ್ಚೆಗೆ ಎರಡನೆಯ ಸಂದರ್ಭ ಮುಖ್ಯವಾಗುತ್ತದೆ. ಒಂದು ಸಮುದಾಯ ತನ್ನ ನುಡಿಯನ್ನು ಕಳೆದುಕೊಂಡು ಇನ್ನೊಂದು ನುಡಿಯನ್ನು ಬಳಸಲು ತೊಡಗಿದಾಗ, ಅದು ಹಿಂದೆ ಬಳಸುತ್ತಿದ್ದ ನುಡಿಯಲ್ಲಿ ಅಡಕವಾಗಿದೆ ಎನ್ನಲಾದ ಆ ಸಮುದಾಯದ ಸಾಂಸ್ಕೃತಿಕ ನೆನಪುಗಳು, ತಿಳಿವಳಿಕೆ, ಲೋಕ ಗ್ರಹಿಕೆಯ ನೆಲೆಗಳು ಈಗ ಏನಾಗುತ್ತವೆ? ಅವೂ ಕಳೆದು ಹೋಗುತ್ತವೆಯೋ? ಆ ಸಮುದಾಯವೀಗ ತನ್ನ ಹೊಸ ನುಡಿಯು ನೀಡುವ ಹತ್ಯಾರುಗಳಿಂದ ತನ್ನ ತಿಳಿವನ್ನು, ಲೋಕ ಗ್ರಹಿಕೆಯನ್ನು ಕಟ್ಟಿಕೊಳ್ಳಬೇಕಾಗುತ್ತದೋ? ಇಲ್ಲವೇ ನಾವು ಈಗಾಗಲೇ ಗುರುತಿಸಿರುವಂತೆ ಆ ಸಮುದಾಯವು ತಾನು ಕಳೆದುಕೊಂಡ ನುಡಿಯನ್ನು ಬಳಸುತ್ತಿದ್ದ ಹೊತ್ತಿನಲ್ಲೇ ಕಟ್ಟಿಕೊಂಡಿದ್ದ ಅಶಾಬ್ದಿಕ ನೆಲೆಯ ತಿಳಿವಳಿಕೆ ಈಗ ನಿಷ್ಕ್ರಿಯವಾಗುತ್ತದೋ? ಲೋಕದಲ್ಲಿ ಸಮುದಾಯಗಳೇ ಅಳಿದುಹೋಗಿ ನುಡಿಗಳು ಇಲ್ಲವಾಗುತ್ತಿರುವ ಸಂದರ್ಭಗಳಷ್ಟೇ ಸಂಖ್ಯೆಯಲ್ಲಿ, ಅಷ್ಟೇಕೆ ಅದಕ್ಕೂ ಹೆಚ್ಚಿನ ಸಂಖ್ಯೆಯಲ್ಲಿ ಸಮುದಾಯಗಳು ತಮ್ಮ ನುಡಿಯನ್ನು ಕಳೆದುಕೊಂಡು ಇನ್ನೊಂದು ನುಡಿಗೆ ದಾಟುವ ಇಲ್ಲವೇ ತಮ್ಮ ನುಡಿಯ

ದನಿಯನ್ನು ಅಡಗಿಸಿಕೊಂಡು ಮತ್ತೊಂದು ಯಾಜಮಾನ್ಯದ ನುಡಿಯ ಜೊತೆಗೆ ಬದುಕುತ್ತಿರುವ ಸಂದರ್ಭಗಳೂ ಇವೆ. ಹಾಗೆ ನೋಡಿದರೆ ಎರಡನೆಯ ಬಗೆಯ ಸಂದರ್ಭಗಳು ಹೆಚ್ಚು ಸಂಕೀರ್ಣವಾಗಿವೆ. ಆದ್ದರಿಂದ ನುಡಿಯ ಅಳಿವಿನ ಪ್ರಶ್ನೆಯನ್ನು ಕೇವಲ ಸಮುದಾಯಗಳ ಅಳಿವಿನ ಚೌಕಟ್ಟಿನಲ್ಲಿ ಮಾತ್ರ ಚರ್ಚಿಸಿದರೆ ಸಾಲದೆಂದು ತೋರುತ್ತದೆ. ನುಡಿ ಪಲ್ಲಟದ ವಿವರಣೆಯ ಭಾಗದಲ್ಲಿ ಇನ್ನಷ್ಟು ವಿವರಗಳನ್ನು ನೋಡೋಣ.

ಸಪೀರ್-ವೂರ್ಫ್ ಪ್ರಮೇಯದ ಸರಳ ನೆಲೆಯನ್ನು ಒಂದು ವೇಳೆ ದಿಟವೆಂದು ಒಪ್ಪಿದೆವೆಂದುಕೊಳ್ಳಿ. ಆಗ ನುಡಿಗೂ ಆ ನುಡಿಯನ್ನಾಡುವ ಸಮುದಾಯದ ತಿಳಿವು, ನೆನಪು,ಲೋಕ ಗ್ರಹಿಕೆಯ ನೆಲೆಗಳಿಗೂ ನಂಟು ಇರುವುದನ್ನು ಸೀಮಿತ ವ್ಯಾಪ್ತಿಯಲ್ಲಾದರೂ ಒಪ್ಪಬೇಕಾಗುತ್ತದೆ. ಹೀಗೆ ಒಪ್ಪಿಕೊಂಡಾಗ ಎದುರಾಗುವ ಸನ್ನಿವೇಶವೊಂದನ್ನು ಈಗ ಚರ್ಚಿಸೋಣ. ಕನ್ನಡದ ಉದಾಹರಣೆಯನ್ನೇ ತೆಗೆದುಕೊಳ್ಳಿ. ಈ ನುಡಿಯಲ್ಲಿ ಇದನ್ನು ಬಳಸುತ್ತಿರುವ ಜನ ಸಮುದಾಯದ ಸಾಂಸ್ಕೃತಿಕ ನೆನಪುಗಳು, ಅವರ ಸ್ಥಳೀಯ ತಿಳಿವಳಿಕೆ, ಅವರ ಲೋಕ ಗ್ರಹಿಕೆಯ ನೆಲೆಗಳು ಅಡಕವಾಗಿವೆ ಎಂದು ಒಪ್ಪಬೇಕಾಗುತ್ತದೆ. ಲೋಕದಲ್ಲಿ ಅಳಿಯುತ್ತಿರುವ, ಅಳಿವಿನ ಅಂಚಿನಲ್ಲಿರುವ, ಅಳಿವಿನತ್ತ ದಾಪುಗಾಲಿಡುತ್ತಿರುವ ನುಡಿಗಳ ಬಗೆಗೆ ಚಿಂತಿಸುವ ನಾವು ಈ ಯಾವ ಅವಸ್ಥೆಯಲ್ಲೂ ಇಲ್ಲದಿರುವ ಕನ್ನಡದಂತಹ ನುಡಿಗಳಲ್ಲಿ ಅಡಕಗೊಂಡಿರುವ ಈ ನೆನಪು, ತಿಳಿವು, ಲೋಕ ದೃಷ್ಟಿಗಳ ಸ್ವರೂಪವನ್ನು ಅರಿಯಲು ಯತ್ನಿಸಬೇಕಲ್ಲವೆ? ಅಂತಹ ಯತ್ನಗಳು ನಡೆದಂತೆ ತೋರುತ್ತಿಲ್ಲ.

ಹಾಗೆ ನೋಡಿದರೆ ಕನ್ನಡ ನುಡಿಯನ್ನಾಡುವವರಿಗೆ ಅವರ ಸಾಂಸ್ಕೃತಿಕ ನೆನಪುಗಳನ್ನು, ಅವರ ತಿಳಿವಳಿಕೆಯನ್ನು, ಅವರ ಲೋಕ ದೃಷ್ಟಿಯನ್ನು ಪರಿಚಯಿಸುವ ಹೊಣೆಯನ್ನು ಹೊತ್ತಿರುವ ಸಾಮಾಜಿಕ ಸಂಸ್ಥೆಗಳಿವೆ. ಶಿಕ್ಷಣ ವ್ಯವಸ್ಥೆ ಮತ್ತು ಸಾಮೂಹಿಕ ಮಾಧ್ಯಮಗಳು ಈ ಹೊಣೆಯನ್ನು ನಿರ್ವಹಿಸುತ್ತಿವೆ. ವಿಪರ್ಯಾಸವೆಂದರೆ ಈ ಸಂಸ್ಥೆಗಳು ಕನ್ನಡ ನುಡಿಯನ್ನಾಡುವವರಿಗೆ ಇವೆಲ್ಲವನ್ನೂ 'ಕಟ್ಟಿ' ಕೊಡುತ್ತಿವೆ. ಅಂದರೆ ಅವರದಲ್ಲದ ನೆನಪುಗಳನ್ನು, ಅವರದಲ್ಲದ ತಿಳಿವನ್ನು, ಅವರದಲ್ಲದ ಲೋಕ ದೃಷ್ಟಿಯನ್ನು ಅವರದ್ದೆಂದು ನಂಬಿಸುವ ಕೆಲಸದಲ್ಲಿ ತೊಡಗಿವೆ. ಆ ಲೋಕ ದೃಷ್ಟಿಗೆ ಎಲ್ಲ ಕನ್ನಡಿಗರೂ ಹಕ್ಕುದಾರರು ಎಂದು ತಿಳಿಯಲು ಒತ್ತಾಯಿಸುತ್ತವೆ. ಕನ್ನಡಿಗರ ನುಡಿಯ ಮೂಲಕವೇ ಅರಿಯಬಹುದಾಗಿದ್ದ (ಶಾಬ್ದಿಕ ನೆಲೆಯಲ್ಲಿ)ಮತ್ತು ಅವರ ಬದುಕಿನ ವಿವಿಧ ನೆಲೆಗಳಿಂದ ಅರಿಯಬಹುದಾಗಿದ್ದ (ಅಶಾಬ್ದಿಕ) ಮತ್ತು ಅರಿಯಬೇಕಿದ್ದ ಸಂಗತಿಗಳತ್ತ ಈ ಸಂಸ್ಥೆಗಳು ಗಮನ ಹರಿಸಿದಂತೆ ತೋರುತ್ತಿಲ್ಲ.

ಇದಕ್ಕೆ ಕಾರಣಗಳಿವೆ. ಹಲವು ಸ್ತರಗಳ ರಚನೆಯುಳ್ಳ ಸಮಾಜವೊಂದು ಈಗ ಕನ್ನಡವನ್ನು ಬಳಸುತ್ತಿದೆ.ಈ ಸ್ತರಗಳು ಆರ್ಥಿಕ ಕಾರಣಗಳಿಂದ ಉಂಟಾಗಿವೆ; ರಾಜಕೀಯ ಒತ್ತಡಗಳಿಂದ ರೂಪುಗೊಂಡಿವೆ; ಸಾಮಾಜಿಕವಾದ ಹಲವು ಕಾರಣಗಳು ಚಾರಿತ್ರಿಕವಾಗಿಯೂ ಹಲವು ಸ್ತರಗಳನ್ನು ನಿರ್ಮಿಸಿಬಿಟ್ಟಿವೆ. ಉದಾಹರಣೆಗೆ ಜಾತಿಗಳ

ಜಾಲ. ಹೀಗಿರುವಾಗ ಈ ನುಡಿಯಲ್ಲಿರುವ ತಿಳಿವು, ಲೋಕ ದೃಷ್ಟಿ, ನೆನಪುಗಳು ಈ ಸಮಾಜದ ಯಾವ ಸ್ತರಕ್ಕೆ ಸೇರಿದ್ದೆಂದು ನಿಗದಿಯಾಗಿ ಹೇಳಲಾಗುವುದಿಲ್ಲ. ಪ್ರತಿಯೊಂದು ಸ್ತರವೂ ತನ್ನದೇ ಆದ ವಲಯವೊಂದನ್ನು ಕಟ್ಟಿಕೊಂಡಿರುವ ಸಾಧ್ಯತೆ ಇರುವಾಗ ಎಲ್ಲರಿಗೂ ಸಮಾನವೆನಿಸುವ, ಸಪಾಟಾದ ತಿಳಿವನ್ನು, ನೆನಪನ್ನು ಹೊರಗಿನಿಂದ 'ಕಟ್ಟಿ' ಕೊಟ್ಟು ಅದೇ ಎಲ್ಲರ ತಿಳಿವು ಎಂದು ನಂಬಿಸುವುದು ಸುಲಭವಾದ ದಾರಿಯೂ ಆಗಿದ್ದೀತು.ಇದನ್ನೇ ನಮ್ಮ ಈ ಸಾಮಾಜಿಕ ಸಂಸ್ಥೆಗಳೂ ಅನುಸರಿಸುತ್ತಿರುವಂತೆ ತೋರುತ್ತದೆ.

ನುಡಿಗಳ ಅಳಿವನ್ನು ಕುರಿತು ಚಿಂತಿತರಾಗುವಷ್ಟೇ, ಅಳಿಯದಿರುವ ನುಡಿಗಳಲ್ಲಿರುವ ತಿಳಿವನ್ನು ಅರಿಯದೇ ಕಣ್ಣು ಮುಚ್ಚಿಕೊಂಡಿರುವ ಬಗೆಗೂ ಚಿಂತಿತರಾಗಬೇಕಷ್ಟೇ. ಈ ನೆಲೆಯ ವಾದವನ್ನು ಒಪ್ಪದವರು ಕನ್ನಡದಂತಹ ಬಹು ಸಂಖ್ಯೆಯ ಜನರಾಡುವ ನುಡಿಗಳು ತಮ್ಮ 'ಸಂಪತ್ತ'ನ್ನು ಕಾಯ್ದುಕೊಳ್ಳುವ ದಾರಿಗಳನ್ನು ಹುಡುಕಿಕೊಳ್ಳಬಲ್ಲವು; ಆದರೆ ಲೋಕದ ನೂರಾರು ನುಡಿಗಳಿಗೆ ಈ ಅವಕಾಶಗಳಿಲ್ಲ. ಹಾಗಾಗಿ ಅಂತಹ 'ದುರ್ಬಲ' ನುಡಿಗಳ ಬಗೆಗೆ ಚಿಂತಿಸುವ ಅಗತ್ಯ ಹೆಚ್ಚಾಗಿದೆ ಎಂದು ಹೇಳುತ್ತಾರೆ. ಸರಿಯೇ ಸರಿ. ಇದನ್ನು ಒಪ್ಪಲಡ್ಡಿಯಿಲ್ಲ. ಇದರಿಂದ ಸ್ತರೀಕರಣಗೊಂಡ ಸಮುದಾಯಗಳೂ ಸ್ತರೀಕರಣಗೊಳ್ಳದ ಸ್ಥಿತಿಯಲ್ಲಿರುವ ಸಮುದಾಯಗಳೂ ಒಂದೇ ಅವಸ್ಥೆಯಲ್ಲಿ ಇಲ್ಲವೆಂದು ತಿಳಿದಂತೆ ಆಯಿತು. ಆದರೆ ಈ ಎರಡೂ ಸಂದರ್ಭಗಳಲ್ಲಿ ನಾವು ಎತ್ತಿಕೊಂಡಿರುವ ನುಡಿ ಮತ್ತು ತಿಳಿವಿನ ಸಂಬಂಧದ ಸ್ವರೂಪದ ಪ್ರಶ್ನೆ ಮಾತ್ರ ಬಗೆಹರಿಯದಂತೆ ಉಳಿಯಿತು. ಸ್ತರೀಕರಣಗೊಳ್ಳದ ಬುಡಕಟ್ಟುಗಳ ನುಡಿಗಳಲ್ಲಿರುವ ತಿಳಿವಳಿಕೆಯನ್ನು ಕಾಯ್ದುಕೊಳ್ಳುವ ಅಗತ್ಯ ಹೆಚ್ಚೆಂದೂ ಸ್ತರೀಕರಣಗೊಂಡ ಸಮಾಜಗಳು ಆಡುವ ನುಡಿಗಳಲ್ಲಿರುವ ತಿಳಿವಳಿಕೆಯ ಬಗೆಗೆ ಹೆಚ್ಚು ತಲೆಕೆಡಿಸಿಕೊಳ್ಳುವ ಅಗತ್ಯವಿಲ್ಲವೆಂದು ವಾದಿಸಲು ಬರುವುದಿಲ್ಲ. ಅಥವಾ ಅಳಿವಿನ ಅಂಚಿನಲ್ಲಿರುವ ನುಡಿಗಳನ್ನಾಡುವ ಸಮುದಾಯದ ತಿಳಿವಳಿಕೆ, ಲೋಕ ದೃಷ್ಟಿ ಮತ್ತು ಸಾಂಸ್ಕೃತಿಕ ನೆನಪುಗಳು ಮಹತ್ವದ್ದೆಂದೂ, ಹೆಚ್ಚು 'ಮುಂದುವರೆದ' ಸಮಾಜಗಳಲ್ಲಿರುವುದು ಅಷ್ಟು ಮಹತ್ವದ್ದಲ್ಲವೆಂದೂ ತಿಳಿಯವುದು ಇನ್ನೂ ಅಪಾಯಕಾರಿ.

ಸಮುದಾಯಗಳ ಚಲನಶೀಲತೆ

ಮತ್ತೆ ಮೊದಲಿಗೆ ಬರೋಣ. ನುಡಿಗಳ ಅಳಿವನ್ನು ಜೀವ ವೈವಿಧ್ಯದ ಅಳಿವಿನ ಜೊತೆಗೆ ಹೋಲಿಸುವುದುಂಟು. ಇದಕ್ಕೆ ಕಾರಣಗಳಿವೆ. ಅಧಿಕ ಜೀವ ವೈವಿಧ್ಯಗಳಿರುವ ಪ್ರದೇಶಗಳಲ್ಲಿ ನುಡಿಗಳ ಸಂಖ್ಯೆಯೂ ಹೆಚ್ಚು, ಇವುಗಳಲ್ಲಿ ಯಾವುದು ಯಾವುದಕ್ಕೆ ಕಾರಣ ಎಂದು ಹೇಳಲು ಆಗುವುದಿಲ್ಲ. ಜೀವ ವೈವಿಧ್ಯವನ್ನು ಕಾಯ್ದುಕೊಳ್ಳಬೇಕೆಂಬ ಚಿಂತನೆಯೊಡನೆ ನುಡಿಗಳ ವೈವಿಧ್ಯವನ್ನೂ ಕಾಯ್ದುಕೊಳ್ಳಬೇಕೆಂಬ ವಾದವನ್ನು ಜೋಡಿಸುವುದು ಅಷ್ಟು ಸರಿಯಾಗದೆಂದು ಈಗಾಗಲೇ ನೋಡಿದ್ದೇವೆ. ಜೀವ ವೈವಿಧ್ಯ ಒಂದೆಡೆ ನೆಲೆಗೊಂಡದ್ದಾಗಿದೆ. ಅದಕ್ಕೆ ಚಲನೆ ಇಲ್ಲ. ಆದರೆ ನುಡಿಗಳ ಮಟ್ಟಿಗೆ ಈ

ಮಾತನ್ನು ಹೇಳಲಾಗುವುದಿಲ್ಲ. ಜನ ಸಮುದಾಯಗಳು ನಿರಂತರವಾಗಿ ಚಲಿಸುತ್ತಲೇ ಇರುತ್ತವೆ. ಹಾಗಾಗಿ ಬಹುಪಾಲು ನುಡಿಗಳಿಗೆ ಕಾಲ ದೇಶಗಳಲ್ಲಿ ಚಲನೆಯಿದೆ. ಚಲನೆಯಿಲ್ಲದೆ ಬುಡಕಟ್ಟುಗಳ ಬದುಕಿನ ನೆಲೆಯಲ್ಲೇ ಉಳಿದಿರುವ ಸಮುದಾಯಗಳನ್ನು ಕಡೆಗಣಿಸಿ ಈ ಮಾತು ಹೇಳುತ್ತಿಲ್ಲ. ಆದರೆ ಕಾಲ ಉರುಳಿದಂತೆ ಇಂತಹ ಸಮುದಾಯಗಳು ಕೂಡ 'ಹೊರಗಿನ' ಜಗತ್ತಿಗೆ ತೆರೆದುಕೊಳ್ಳುತ್ತಿವೆ.

ನುಡಿಯಲ್ಲಿ ಇರುವ ತಿಳಿವಳಿಕೆಯು ನುಡಿಯ ಅಳಿವಿನೊಡನೆ ನಾಶವಾಗುವುದೆಂಬ ಕಾಳಜಿಯನ್ನು ಒಪ್ಪೋಣ. ಆದರೆ ನುಡಿಯು ಇನ್ನೂ ಬಳಕೆಯಲ್ಲಿರುವಂತೆಯೇ, ಅಂದರೆ ಸಮುದಾಯವು ಆ ನುಡಿಯನ್ನು ಇನ್ನೂ ಬಳಸುತ್ತಿರುವಾಗಲೇ ಆ ಸಮುದಾಯವು ಹೊಂದಿರುವ ತಿಳಿವಳಿಕೆಯು ಕೆಲಸಕ್ಕೆ ಬಾರದಂತೆ ಆಗುವುದನ್ನು ಮರೆಯಬಾರದು. ಒಂದೆರಡು ನಿದರ್ಶನಗಳನ್ನು ನೋಡೋಣ. ರಾಜಗೊಂಡ ಸಮುದಾಯವು ಇಂಡಿಯಾದ ಹಲವು ರಾಜ್ಯಗಳಲ್ಲಿ ಅದರಲ್ಲೂ ಮಧ್ಯ ಇಂಡಿಯಾದಲ್ಲಿ ಹರಡಿಕೊಂಡಿದೆ. ಈ ಸಮುದಾಯಕ್ಕೆ ಪರಿಸರದ ಸಸ್ಯಗಳಿಗೆ, ಗಿಡಮೂಲಿಕೆಗಳಿಗೆ ಇರುವ ಔಷಧೀಯ ಗುಣಗಳ ಬಗೆಗೆ ಅಪಾರವಾದ ಮಾಹಿತಿ ಇದೆ. ಈಗ ಅವರು ಅಲೆಮಾರಿಗಳಾಗಿ ಊರೂರಿನ ಜನರಿಗೆ ಗಿಡಮೂಲಿಕೆಗಳನ್ನು ನೀಡಿ ಚಿಕಿತ್ಸೆ ನೀಡುವುದಾಗಿ ಹೇಳಿ ಜೀವನ ಹೊರೆಯುತ್ತಿದ್ದಾರೆ. ಆದರೆ ಹೊಸ ಬದುಕಿನ ರೀತಿನೀತಿಗಳಲ್ಲಿ ಅವರ ತಿಳಿವಳಿಕೆಗಳು ಸಂದೇಹಗಳಿಗೆ ಎಡೆ ಮಾಡಿಕೊಟ್ಟಿದೆ. ಕಲಿತವರು ಅವರನ್ನು ನಂಬುವುದಿಲ್ಲ. ಕಾನೂನು ಅವರ ತಿಳಿವಳಿಕೆಯನ್ನು ಮಾನ್ಯ ಮಾಡುವುದಿಲ್ಲ. ಅವರು ಖೊಟ್ಟಿ ಎಂದು ತಿಳಿಯುತ್ತಾರೆ. ಅಂದರೆ ಆ ಸಮುದಾಯದ ತಿಳಿವಳಿಕೆಗೆ ಈಗ ಚಲಾವಣೆ ಇಲ್ಲ. ಇಂತಹ ಪರಿಸ್ಥಿತಿ ಸಮುದಾಯಗಳಲ್ಲಿರುವ ಕುಶಲ ಕಲೆಗಳಿಗೆ ಸಂಬಂಧಿಸಿದ ತಿಳಿವಳಿಕೆಗೂ ಬಂದೊದಗಿದೆ. ಹೊಸ ಆವಿಷ್ಕಾರಗಳು, ಯಂತ್ರಗಳು ಅವರ ಕೌಶಲಗಳನ್ನು ನಿರುಪಯುಕ್ತಗೊಳಿಸಿವೆ. ಅಂದರೆ ಸಮುದಾಯದ ತಿಳಿವಳಿಕೆ ಎನ್ನುವುದು ಆ ಸಮುದಾಯದ ಜನರಿಗೇ ನಿರುಪಯುಕ್ತವಾಗುತ್ತಿದೆ. ನುಡಿಯ ಅಳಿವಿನೊಡನೆ ತಿಳಿವಳಿಕೆಯೂ ನಾಶವಾಗುತ್ತದೆ ಎನ್ನುವಾಗ ಇಂತಹ ಪ್ರಸಂಗಗಳನ್ನೂ ಗಮನದಲ್ಲಿ ಇರಿಸಿಕೊಳ್ಳಬೇಕಾಗುತ್ತದೆ.

ಇದು ಮುಖ್ಯಧಾರೆಗೆ ಸೇರದೆ 'ಹೊರಗೇ' ಉಳಿದ ಸಮುದಾಯಗಳ ಬಗೆಗೆ ಮಾತ್ರ ಸೀಮಿತವಾದ ಸಂಗತಿಯಲ್ಲ. 'ಪ್ರಗತಿಯ ಹಾದಿ'ಯಲ್ಲಿರುವ ಸಮಾಜಗಳಲ್ಲೂ ಹೀಗೆ ತಿಳಿವಳಿಕೆಗಳನ್ನು ಸ್ಥಗಿತಗೊಳಿಸುವ ಕೆಲಸ ನಡೆದೇ ಇದೆ. ಕೃಷಿಗೆ ಸಂಬಂಧಿಸಿದಂತೆ ಇರುವ ಪಾರಂಪರಿಕ ತಿಳಿವಳಿಕೆ ನಿರಂತರವಾಗಿ ಕೃಷಿ ಮಾಡುತ್ತ ಬಂದವರಲ್ಲಿ ತಲೆಮಾರಿನಿಂದ ತಲೆಮಾರಿಗೆ ದಾಟುತ್ತ ಬರುತ್ತದೆ. ಮಳೆಗಳು, ಕಳೆಗಳು, ಕೀಟಗಳು, ಕೃಷಿ ಸಂಬಂಧಿಸಿದ ನಂಬಿಕೆ ಆಚರಣೆಗಳು ಇವೆಲ್ಲವೂ ಈ ತಿಳಿವಳಿಕೆಯ ಭಾಗವಾಗಿರುತ್ತವೆ. ಕೃಷಿಯಲ್ಲಿ 'ಹೊಸ ಪದ್ಧತಿ'ಗಳು ತಲೆಹಾಕಿ ನೆಲೆ ನಿಂತಿರುವಾಗ ಈ ಪಾರಂಪರಿಕ ತಿಳಿವಳಿಕೆಗಳು ಸ್ಥಗಿತಗೊಳ್ಳುತ್ತವೆ; ಅಧ್ಯಯನಕಾರರಲ್ಲಿ ಮಾಹಿತಿಗಳಾಗಿ ಸಂಗ್ರಹಾಲಯಗಳಲ್ಲಿ ಸೇರ್ಪಡೆಯಾಗುತ್ತಿರುತ್ತವೆ.

ಈ ಎಲ್ಲ ವಿವರಣೆಗಳನ್ನು ನೀಡುವಾಗ ನುಡಿಗಳ ಅಳಿವನ್ನು ತಡೆಯುವ ಯೋಜನೆಗಳ ವಿರುದ್ಧ ದನಿ ಎತ್ತುವ ಅಗತ್ಯವಿಲ್ಲ ಎಂದು ವಾದಿಸುವ ಉದ್ದೇಶವಿಲ್ಲ. ಇಡೀ ಸಂದರ್ಭದ ಸಂಕೀರ್ಣತೆಯನ್ನು ಅರಿತುಕೊಳ್ಳಬೇಕಾಗಿದೆ ಎಂಬ ನೆಲೆಯಲ್ಲಿ ಈ ಚರ್ಚೆಯನ್ನು ಬೆಳೆಸಲಾಗಿದೆ. ಕೇವಲ ಭಾವುಕ ಇಲ್ಲವೇ ಸೀಮಿತ ನೆಲೆಯಲ್ಲಿ ಮಾತ್ರ ಚಿಂತನೆಗಳನ್ನು ನಡೆಸುವುದರಿಂದ ಇಡೀ ಸಮಸ್ಯೆಯ ಹಲವಾರು ಎಳೆಗಳು ಗಮನಕ್ಕೆ ಬಾರದೆಯೂ ಹೋಗುತ್ತವೆ.

ನುಡಿಗಳ ಅಳಿವು ಮತ್ತು ನುಡಿ ಪಲ್ಲಟ

ನುಡಿ ಸಮುದಾಯಗಳು ತಮ್ಮ ನುಡಿಯನ್ನು ಕಳೆದುಕೊಳ್ಳುವ ಬಗೆ ಮತ್ತು ಅದರ ಪರಿಣಾಮಗಳನ್ನು ಕುರಿತು ಯೋಚಿಸುವಾಗಲೇ ನುಡಿಗಳಿಗೆ ಸಂಬಂಧಿಸಿದ ಮತ್ತೊಂದು ಪ್ರಕ್ರಿಯೆಯನ್ನು ಕೂಡ ಗಮನಿಸುವುದು ಅಗತ್ಯ. ಮಾನವರ ಚರಿತ್ರೆಯಲ್ಲಿ ನುಡಿ ಸಮುದಾಯಗಳು ತಾವು ಬಳಸುತ್ತಿರುವ ನುಡಿಯನ್ನು ಬಿಟ್ಟುಕೊಟ್ಟು ಬೇರೊಂದು ನುಡಿಯನ್ನು ಬಳಸಲು ತೊಡಗಿದ ಉದಾಹರಣೆಗಳು ದೊರಕುತ್ತವೆ. ದಾಖಲಾಗಿರುವ ಚರಿತ್ರೆಯ ಅವಧಿಯಲ್ಲೇ ಇಂತಹ ನೂರಾರು ಪಲ್ಲಟಗಳು ನಡೆದುಹೋಗಿವೆ. ಒಂದು ಸಮುದಾಯ ತಾನು ಹಲವು ತಲೆಮಾರುಗಳಿಂದ ಬಳಸುತ್ತಿರುವ ನುಡಿಯನ್ನು ಬಿಟ್ಟುಕೊಟ್ಟು ಇನ್ನೊಂದು ನುಡಿಯನ್ನು ಬಳಸಲು ತೊಡಗುವುದನ್ನು ನುಡಿ ಪಲ್ಲಟ -ಲಾಂಗ್ವೆಜ್ ಶಿಫ್ಟ್- ಎನ್ನುತ್ತಾರೆ. ನುಡಿ ಪಲ್ಲಟ ನಡೆಯುವುದೇಕೆ ಮತ್ತು ಅದರ ಪರಿಣಾಮಗಳೇನು ಎಂಬುದನ್ನು ಅಧ್ಯಯನ ಮಾಡಲಾಗಿದೆ.

ರಾಜಕೀಯ ಕಾರಣಗಳಿಂದಾಗಿ ಒಂದು ನುಡಿ ಸಮುದಾಯ ಇನ್ನೊಂದು ನುಡಿ ಸಮುದಾಯಕ್ಕೆ ಅಧೀನವಾಗುವ ಪ್ರಸಂಗಗಳು ಒದಗುತ್ತವೆ. ಈ ಅಧೀನತೆಯ ನೆಲೆಗಳು ಬಗೆ ಬಗೆಯಾಗಿರುತ್ತವೆ. ಯಜಮಾನಿಕೆ ಹೊಂದಿರುವ ಸಮುದಾಯವು ಒತ್ತಾಯ ಪೂರ್ವಕವಾಗಿ ತನ್ನ ನುಡಿಯನ್ನು ಅಧೀನ ಸಮುದಾಯದ ಮೇಲೆ ಹೇರಬಹುದು. ಅಲ್ಲದೆ ಅಧೀನ ಸಮುದಾಯವು ತನ್ನ ಸ್ವಂತ ನುಡಿಯನ್ನು ಬಳಸುವುದಕ್ಕೆ ನಿರ್ಬಂಧಗಳನ್ನು ಹೇರಲೂ ಬಹುದು. ಅಧೀನ ಸಮುದಾಯವು ತನ್ನ ಅಧೀನತೆಯ ನೆಲೆಯಲ್ಲೇ ತಾನೇ ಆಳುವ ಸಮುದಾಯದ ನುಡಿಯ ಕಡೆಗೆ ಒಲುವೆಯನ್ನು ತೋರಿಸಿ ತನ್ನ ನುಡಿಯ ಬದಲಿಗೆ ಆಳುವವರ ನುಡಿಯನ್ನೂ ತನ್ನ ನುಡಿಯನ್ನಾಗಿ ಮಾಡಿಕೊಳ್ಳಬಹುದು. ಇನ್ನು ವಲಸೆ ಹೋಗುವ ಸಮುದಾಯಗಳಿಗೆ ಆಯ್ಕೆ ಕಡಿಮೆ. ಬದುಕುವ ದಾರಿಗಳನ್ನು ಹುಡುಕಿಕೊಂಡು ವಲಸೆ ಹೋಗುವ ಸಮುದಾಯಗಳು ತಮ್ಮ ನುಡಿಯನ್ನು ಕಾಯ್ದುಕೊಳ್ಳುವ ಹಠಕ್ಕೆ ಜೋತು ಬೀಳುವುದು ಕಷ್ಟ. ಆಗ ತಮ್ಮ ನುಡಿಯ ಬದಲಿಗೆ ತಾವು ವಲಸೆ ನಿಂತ ನಾಡಿನ ನುಡಿಯನ್ನು ತಮ್ಮ ನುಡಿಯನ್ನಾಗಿ ಬದಲಿಸಿಕೊಳ್ಳಬಹುದು. ಇಂತಹ ಹತ್ತಾರು ಬದಲಾವಣೆಗಳು ಕಳೆದ ಒಂದೆರಡು ಶತಮಾನಗಳಲ್ಲೇ ನಡೆದುಹೋಗಿವೆ.

ನಮಗೆ ಈ ನುಡಿ ಪಲ್ಲಟದ ಕಾರಣಗಳಿಗಿಂತ ಅದರ ಪರಿಣಾಮಗಳು ಮುಖ್ಯ. ನುಡಿಗೂ ಆ ನುಡಿಯನ್ನಾಡುವವರ ಲೋಕ ದೃಷ್ಟಿ, ಸಾಂಸ್ಕೃತಿಕ ನೆನಪು ಮತ್ತು ತಿಳಿವಳಿಕೆಗೂ ನೇರ ನಂಟು ಇರುವುದಾದರೆ ಆ ನುಡಿಯನ್ನಾಡುವ ಸಮುದಾಯವು ಇನ್ನೊಂದು ನುಡಿಯನ್ನು ತನ್ನದನ್ನಾಗಿ ಬಳಸಲು ತೊಡಗಿದಾಗ ಏನಾಗುತ್ತದೆ? ಆ ಸಮುದಾಯದ ಹಿಂದಿನ ನುಡಿಯ ಲೋಕ ದೃಷ್ಟಿ, ಸಾಂಸ್ಕೃತಿಕ ನೆನಪು, ತಿಳಿವುಗಳಿಗೆ ಏನಾಗುತ್ತದೆ? ಅವರು ಬಳಸಲು ತೊಡಗಿರುವ ನುಡಿಯ ಹಿಂದಿರುವ ಲೋಕ ದೃಷ್ಟಿ ಇತ್ಯಾದಿಗಳನ್ನು ತಮ್ಮದನ್ನಾಗಿ ಮಾಡಿಕೊಳ್ಳುವರೇನು? ಈಗ ನಮಗೆ ದೊರಕಿರುವ ನುಡಿ ಪಲ್ಲಟಗಳ ಪ್ರಸಂಗಗಳನ್ನು ಗಮನಿಸಿದರೆ ನುಡಿಯನ್ನು ಬದಲಿಸಿದ ಸಮುದಾಯಗಳು ತಮ್ಮ ಸಾಂಸ್ಕೃತಿಕ ನೆನಪುಗಳನ್ನು ಕಾಯ್ದುಕೊಳ್ಳುತ್ತವೆ. ಆದರೆ ಅದು ಅವರ ಅಶಾಬ್ದಿಕ ಆಚರಣೆಗಳಲ್ಲಿ ನೆಲೆಯೂರಿರುತ್ತದೆ. ನುಡಿಯನ್ನು ಬಿಟ್ಟು ಉಳಿದ ದಾರಿಗಳಲ್ಲಿ ಅವರು ತಮ್ಮ ಹಳೆಯ ಬದುಕಿನ ನಂಟನ್ನು ಉಳಿಸಿಕೊಳ್ಳಬಲ್ಲರು. ಅಂದರೆ ನುಡಿಯನ್ನು ಬದಲಿಸಿದ್ದರಿಂದ ಏನೂ ಬದಲಾಗಲಿಲ್ಲವೆಂದಲ್ಲ; ಆದರೆ ಅವರು ತಮ್ಮ ನುಡಿಯನ್ನು ಕಳೆದುಕೊಂಡದ್ದರಿಂದ ಇಡಿಯಾಗಿ ಊನಗೊಂಡಿಲ್ಲ ಎಂಬುದಷ್ಟೇ ನಮಗಿಲ್ಲಿ ಮುಖ್ಯ.

ಇಂತಹುದೇ ಒಂದು ಸಂದರ್ಭ ಎರಡು ನುಡಿಗಳನ್ನು ಒಟ್ಟಾಗಿ ಬಳಸುವ ಸಮುದಾಯಗಳಲ್ಲೂ ಕಾಣಸಿಗುತ್ತದೆ. ಹಲವಾರು ಕಾರಣಗಳಿಂದ ನೆರೆಹೊರೆಯ ಎರಡು ಸಮುದಾಯಗಳು ಎರಡು ನುಡಿಗಳನ್ನು ಒಟ್ಟಾಗಿ ಬಳಸುವುದನ್ನು ಕಾಣುತ್ತೇವೆ. ಕೆಲವು ವ್ಯಕ್ತಿಗಳು ಮಾತ್ರವಲ್ಲದೆ ಇಡೀ ಸಮುದಾಯಗಳೇ ಹೀಗೆ ಎರಡು ನುಡಿಗಳನ್ನು ಬಳಸುತ್ತಿರುತ್ತವೆ. (ನುಡಿ ಪಲ್ಲಟ ನಡೆದ ಸಂದರ್ಭಗಳಲ್ಲೂ ಕೆಲವೊಮ್ಮೆ ಸಮುದಾಯಗಳು ತಮ್ಮ ಮೂಲ ನುಡಿಯನ್ನು ಸೀಮಿತ ವಲಯಗಳಲ್ಲಿ ಬಳಸುತ್ತಿರುವುಂಟು. ಕರ್ನಾಟಕ, ಆಂಧ್ರ ಪ್ರದೇಶ ಮತ್ತು ತೆಲಂಗಾಣ ರಾಜ್ಯಗಳ ಗಡಿ ಪ್ರದೇಶದಲ್ಲಿ ಈಗ ಎಷ್ಟೋ ಸಮುದಾಯಗಳು ತಮ್ಮ ದಿನದ ನುಡಿಯನ್ನಾಗಿ ತೆಲುಗನ್ನು ಬಳಸುತ್ತಿದ್ದರೂ ಕೆಲವು ಆಚರಣೆಗಳ ಹೊತ್ತಿನಲ್ಲಿ ಹಾಡುವ ಹಾಡುಗಳು ಕನ್ನಡದಲ್ಲಿರುತ್ತವೆ ಎನ್ನುವುದನ್ನು ಅಧ್ಯಯನಕಾರರು ಗುರುತಿಸಿದ್ದಾರೆ. ಆ ಸಂದರ್ಭವನ್ನು ಹೊರತು ಮಾಡಿದರೆ ಆ ಸಮುದಾಯಕ್ಕೂ ಕನ್ನಡಕ್ಕೂ ಯಾವ ನಂಟೂ ಇರದು) ಇಂತಹ ಕಡೆಗಳಲ್ಲಿ ಆ ಸಮುದಾಯಗಳ ಲೋಕ ದೃಷ್ಟಿ, ತಿಳಿವು, ಸಾಂಸ್ಕೃತಿಕ ನೆನಪುಗಳನ್ನು ಯಾವ ನುಡಿಗೆ ಆರೋಪಿಸುವುದು ಎಂಬ ಪ್ರಶ್ನೆ ಎದುರಾಗುತ್ತದೆ. ಎರಡೂ ಸಮುದಾಯಗಳೂ ಈ ಎಲ್ಲವನ್ನೂ ಸಮಾನವಾಗಿ ಹಂಚಿಕೊಂಡಿವೆ ಎನ್ನುವುದಾದರೆ ನುಡಿಗೂ ಈ ಮೂರು ವಿಷಯಗಳಿಗೂ ಇರುತ್ತದೆ ಎನ್ನಲಾದ ನಂಟಿನ ಬಗೆಗೆ ನಂಬಿರುವ ಮಾತುಗಳು ಹುಸಿಯಾಗುತ್ತವೆ.

ನುಡಿ ಪಲ್ಲಟದ ಬಗೆಗೆ ಚರ್ಚಿಸುವಾಗ ಇನ್ನೊಂದು ಉದಾಹರಣೆಯನ್ನು ಗಮನಿಸುವ ಅಗತ್ಯವಿದೆ. ವಸಾಹತು ನಿರ್ಮಾಣಗಳು ನಡೆಯುತ್ತಿದ್ದ ಚಾರಿತ್ರಿಕ ಸಂದರ್ಭದಲ್ಲಿ ಈ ಘಟನೆಗಳು ಸಂಭವಿಸಿವೆ. ವ್ಯಾಪಾರದ ಉದ್ದೇಶದಿಂದ ವಸಾಹತುಗಾರರು ತಮಗೆ

ಅಪರಿಚಿತವಿದ್ದ ಪ್ರದೇಶಗಳಿಗೆ ಹೋದಾಗ ಅಲ್ಲಿನ ನಿವಾಸಿಗಳೊಡನೆ ವ್ಯವಹಾರಕ್ಕಾಗಿ 'ಮಾತುಕತೆ' ಆಡಬೇಕಾಗಿ ಬಂತು. ಅಲ್ಲಿನ ಮೂಲ ನಿವಾಸಿಗಳಿಗೂ ಇದು ಅಗತ್ಯವಾಗಿತ್ತು. ದಿಟವಾಗಿ ಇಂತಹ ಸಂದರ್ಭಗಳಲ್ಲಿ ತಮ್ಮ ನುಡಿಯ ವ್ಯಾಪಾರವನ್ನು ಬದಲಿಸಿಕೊಂಡವರು ಮೂಲ ನಿವಾಸಿಗಳು. ವ್ಯಾಪಾರಸ್ಥರ ನುಡಿಗಳನ್ನು ತಮ್ಮ ನುಡಿಗಳೊಡನೆ 'ಬೆರೆಸಿ' ಹೊಸದೊಂದು ನುಡಿಯನ್ನು ಆ ಮೂಲ ನಿವಾಸಿಗಳು ಕಟ್ಟಿಕೊಂಡರು. ಇಂತಹ ನುಡಿಗಳನ್ನು ಪಿಜಿನ್ ಗಳೆಂದು ಕರೆಯಲಾಗಿದೆ. ಪಿಜಿನ್‌ಗಳ ಚಹರೆಯನ್ನು ಸ್ಥೂಲವಾಗಿ ಹೀಗೆ ಹೇಳಬಹುದು. ಇವುಗಳ ವ್ಯಾಕರಣದ ಸ್ತರವು ಮೂಲ ನಿವಾಸಿಗಳ ನುಡಿಯ ವ್ಯಾಕರಣದ ಸರಳ ರೂಪ (ಬಹುಪಾಲು) ಆಗಿರುತ್ತದೆ. ಹೊಸ ನುಡಿಗೆ ಬೇಕಾದ ಪದಕೋಶವನ್ನು ವಲಸೆಗಾರರ, ವ್ಯಾಪಾರಸ್ಥರ ನುಡಿಯಿಂದ ಪಡೆದುಕೊಳ್ಳಲಾಗುತ್ತದೆ. ಹೀಗೆ ಪಡೆದುಕೊಂಡ ಪದಗಳ ಉಲಿರಚನೆಯಲ್ಲಿ ಮತ್ತು ತಿರುಳಿನಲ್ಲಿ ಅಗತ್ಯವೆನಿಸಿದ ಬದಲಾವಣೆಗಳು ನಡೆದಿರುತ್ತವೆ. ಈ ಪಿಜಿನ್‌ಗಳನ್ನು ಮೂಲ ನಿವಾಸಿಗಳು 'ಆಡು'ತ್ತಾರೆ. ವ್ಯಾಪಾರಸ್ಥರು ಕೇಳಿ ಅರಿತುಕೊಳ್ಳುತ್ತಾರೆ. ಆದರೆ ಈ ಹೊಸ ನುಡಿಯನ್ನು ವ್ಯಾಪಾರಸ್ಥರು 'ಆಡು'ವುದಿಲ್ಲ. ಮೂಲ ನಿವಾಸಿಗಳೊಡನೆ ಬೇರೆಯವರು ಈ ನುಡಿಯನ್ನು ಆಡುವ ಪ್ರಸಂಗವೇ ಒದಗುವುದಿಲ್ಲ.

ಇಂತಹುದೇ ಪ್ರಸಂಗ ಯಾವುದೋ ನಾಡಿನಲ್ಲಿದ್ದ ಜನ ಸಮುದಾಯವನ್ನು ದುಡಿಮೆಗಾಗಿ ಇನ್ನೊಂದು ನಾಡಿಗೆ ಕರೆದೊಯ್ದು ಅವರನ್ನು 'ಗುಲಾಮ'ರನ್ನಾಗಿಸಿ ಕೊಂಡಾಗಲೂ ಉಂಟಾಗುತ್ತದೆ. ಆಗಲೂ ದುಡಿಮೆಗಾರರು ತಮ್ಮ ನುಡಿ ಮತ್ತು ಯಜಮಾನರ ನುಡಿಯನ್ನು, ಮೇಲೆ ಹೇಳಿದಂತೆಯೇ, 'ಬೆರೆಸಿ' ಒಂದು ಪಿಜಿನ್ ಅನ್ನು ರೂಪಿಸಿಕೊಂಡು ವ್ಯವಹರಿಸುತ್ತಾರೆ. ಪ್ಲಾಂಟೇಶನ್‌ಗಳು ಇರುವೆಡೆಯಲ್ಲೆಲ್ಲಾ ಇಂತಹ ಪಿಜಿನ್‌ಗಳು ಹುಟ್ಟಿಕೊಂಡಿವೆ.

ಈ ಪಿಜಿನ್‌ಗಳನ್ನು ಕೇಳುತ್ತಾ ಬೆಳೆದ ಮಕ್ಕಳು ಇದನ್ನೇ ತಮ್ಮ 'ಮೊದಲ ನುಡಿ'ಯನ್ನಾಗಿ ಮಾಡಿಕೊಳ್ಳುತ್ತಾರೆ. ಆಗ ಅವುಗಳನ್ನು 'ಕ್ರಿಯೊಲ್' ಗಳೆಂದು ಕರೆಯಲಾಗುತ್ತದೆ. ಪಿಜಿನ್‌ಗಳನ್ನು ಮಾತಾಡುವ ಮೂಲ ನಿವಾಸಿಗಳು ತಮ್ಮ ಗುಂಪಿನಲ್ಲಿ ತಮ್ಮ ನುಡಿಯನ್ನೇ ಆಡುತ್ತಿದ್ದರೂ ವ್ಯಾಪಾರಸ್ಥರ ಜೊತೆಗೆ ಪಿಜಿನ್‌ಅನ್ನು ಬಳಸುತ್ತಾರೆ. ಅಂದರೆ ಅವರು ಎರಡು ಬೇರೆ ಬೇರೆ ನುಡಿಗಳಲ್ಲಿ ವ್ಯವಹರಿಸಬೇಕು. ಆದರೆ ಕ್ರಿಯೊಲ್ ಬಳಸುವ ತಲೆಮಾರಿಗೆ ತಮ್ಮ ಮೂಲ (ಅವರ ತಂದೆತಾಯಂದಿರು ಆಡುತ್ತಿದ್ದ) ನುಡಿ ಕಳೆದುಹೋಗಿರುತ್ತದೆ.ಅವರು ಹೆಚ್ಚೆಂದರೆ ಹಿರಿಯರು ಆ ನುಡಿಯನ್ನು ಬಳಸಿ ಮಾತಾಡಿದಾಗ ಅದನ್ನು ಕೇಳಿ ಅರ್ಥಮಾಡಿಕೊಳ್ಳಬಲ್ಲರು ಅಷ್ಟೆ ಅವರು ಆ ನುಡಿಯಲ್ಲಿ ಮಾತನಾಡಲಾರರು.

ಪಿಜಿನ್ ಮತ್ತು ಕ್ರಿಯೊಲ್‌ಗಳ ಹುಟ್ಟು ಮತ್ತು ಬಳಕೆ ಮಾನವ ನುಡಿಯರಿಮೆಯ ಸಂದರ್ಭದಲ್ಲಿ ಒಂದು ಸಂಕೀರ್ಣವಾದ ನೆಲೆಯನ್ನು ಸೂಚಿಸುತ್ತದೆ. ನಮ್ಮ ಪ್ರಶ್ನೆ ಇರುವುದು ಇಷ್ಟೆ: ನುಡಿ ಅಳಿವಿನ ಚೌಕಟ್ಟಿನಲ್ಲಿ ಈ ಸಂದರ್ಭವನ್ನು ಹೇಗೆ ಅರ್ಥಮಾಡಿಕೊಳ್ಳಬೇಕು? ತಮ್ಮ ಮೂಲ ನುಡಿಯನ್ನು ಇನ್ನೊಂದು ನುಡಿಯ

ಜೊತೆಗೆ ಹೊಂದಿಸಿಕೊಂಡು ಪಿಜಿನ್ ಅನ್ನು ರೂಪಿಸಿಕೊಂಡವರು ಮತ್ತು ಅದೇ ಪಿಜಿನ್ ಅನ್ನು ತಮ್ಮ ಮೊದಲ ನುಡಿಯನ್ನಾಗಿ (ಕ್ರಿಯೊಲ್) ಮಾಡಿಕೊಂಡವರು ಏನನ್ನು 'ಕಳೆದು' ಕೊಂಡಿದ್ದಾರೆ. ಇಲ್ಲಿ ನುಡಿ ಅಳಿವು ನಡೆದಿದೆಯೇ? ಇವರು ಯಾರೂ ತಮ್ಮಲ್ಲಿ ಅಂತಸ್ಥವಾಗಿರುವ ನುಡಿಯ ಕಸುವನ್ನು ಕಳೆದುಕೊಂಡಿಲ್ಲ. ಆದರೆ ಆ ಅಂತಸ್ಥ ಕಸುವಿನ ಹೊರ ರೂಪದಲ್ಲಿ ಬದಲಾವಣೆ ಮಾಡಿಕೊಂಡಿದ್ದಾರೆ. ಹೀಗಾಗಿ ಇದನ್ನು ನುಡಿಯ ಅಳಿವು ಎಂದು ಪರಿಗಣಿಸುವುದು ಸರಿಯಾಗಲಾರದು. ಈಗ ಗುಲಾಮರನ್ನಾಗಿ ಮಾಡಿಕೊಳ್ಳುವುದು, ವಸಾಹತುಗಳನ್ನು ಕಟ್ಟುವುದು ಮುಂತಾದ ಘಟನೆಗಳು ನಡೆಯುತ್ತಿಲ್ಲವೆಂದೂ ಹಾಗಾಗಿ ಪಿಜಿನ್ ಮತ್ತು ಕ್ರಿಯೊಲ್‌ಗಳ ನಿರ್ಮಾಣ ಮತ್ತು ಬಳಕೆಯ ಕಾಲ ಮುಗಿದು ಹೋಯಿತೆಂದು ಹೇಳಲಾಗದು. ಈಗಲೂ ಅದು ಬೇರೆ ಬೇರೆ ಬಗೆಯಲ್ಲಿ ನಡೆಯುತ್ತಲೇ ಇದೆ.

ವಸಾಹತುಗಳು ರೂಪುಗೊಂಡಾಗ ಆಗುವ ನುಡಿಯ ಅನುಸಂಧಾನದ ಒಂದು ಮಹಾನ್ ರೂಪಕ ನಮಗೆ ಶೇಕ್ಸ್‌ಪಿಯರ್ ಬರೆದ 'ದಿ ಟೆಂಪೆಸ್ಟ್' ನಾಟಕದಲ್ಲಿ ದೊರೆಯುತ್ತದೆ. (ಕನ್ನಡದಲ್ಲಿ ಈ ನಾಟಕ ಮಾಸ್ತಿಯವರಿಂದ, ಎ.ಎನ್.ಮೂರ್ತಿರಾವ್ ಅವರಿಂದ ಬೇರೆ ಬೇರೆಯಾಗಿ ಅನುವಾದ ಆಗಿದೆ. ಕುವೆಂಪು ಅವರು 'ಬಿರುಗಾಳಿ' ಎಂಬ ಹೆಸರಿನ ಕೃತಿಯಲ್ಲಿ ಕನ್ನಡಕ್ಕೆ ಅಳವಡಿಸಿದ್ದಾರೆ) ಈ ನಾಟಕದಲ್ಲಿ ಅಧಿಕಾರ ಕಳೆದುಕೊಂಡು ದೇಶ ಭ್ರಷ್ಟನಾದ ರಾಜ ಪ್ರಾಸ್ಪರೋ ಒಂದು ದ್ವೀಪದಲ್ಲಿ ತನ್ನ ಮಗಳು ಮಿರಾಂಡಾಳ ಜೊತೆ ಇರುತ್ತಾನೆ. ಮಾಂತ್ರಿಕ ಶಕ್ತಿಯುಳ್ಳ ಈತ ಏರಿಯಲ್ ಮತ್ತು ಕ್ಯಾಲಿಬನ್ ಎಂಬುವವರನ್ನು ತನ್ನ ವಶ ಮಾಡಿಕೊಂಡು ತನ್ನ ಕೆಲಸಗಳನ್ನು ಮಾಡಿಸಿಕೊಳ್ಳುತ್ತಿರುತ್ತಾನೆ. ಕ್ಯಾಲಿಬನ್ ಆ ದ್ವೀಪದ ಮೂಲ ನಿವಾಸಿ. ಅವನಿಗೆ ಪ್ರಾಸ್ಪರೋ ತನ್ನ ನುಡಿಯನ್ನು 'ಕಲಿಸು'ತ್ತಾನೆ. ಹೀಗೆ ಕಲಿತ ಹೊಸ ನುಡಿ ಕ್ಯಾಲಿಬನ್‌ಗೆ ತಾನು ಕಳೆದುಕೊಂಡ ಸ್ವಾತಂತ್ರ್ಯದ ನೆನಪನ್ನು ಉದ್ದೀಪಿಸುತ್ತದೆ. ಕ್ಯಾಲಿಬನ್ ಪಡೆದುಕೊಂಡದ್ದು ಹೊಸದಾದ ನುಡಿ ಮಾತ್ರವಲ್ಲ; ಹೊಸ ಪ್ರಜ್ಞೆಯನ್ನು ಕೂಡ ಅವನು ಪಡೆಯುತ್ತಾನೆ. ಅದು ಅವನ ಆಯ್ಕೆಯಾಗಿರಲಿಲ್ಲ ಎಂಬ ಮಾತು ಬದಿಗಿರಲಿ. ವಸಾಹತುಗಳು ಸ್ಥಳೀಯ ಮೂಲವಾಸಿಗಳಲ್ಲಿ ತಂದ ಪರಿಣಾಮವನ್ನು ಈ ಕಥನ ಚೆನ್ನಾಗಿ ಬಿಂಬಿಸುತ್ತದೆ. ಕ್ಯಾಲಿಬನ್‌ಗೆ ಮೂಲ ನುಡಿ ಇದ್ದುದು, ಅದು ಕಳೆದು ಹೋದುದು ಇಲ್ಲಿ ಮುಂಚೂಣಿಗೆ ಬರುವುದಿಲ್ಲ; ಪಡೆದುಕೊಂಡ ಹೊಸ ನುಡಿ ಅವನಲ್ಲಿ ಬಿಡುಗಡೆಯ ಹಪಾಹಪಿಯನ್ನು ತಂದುದನ್ನು ಗಮನಿಸಬೇಕು.

ನುಡಿಗಳ ಅಳಿವನ್ನು ತಡೆಯುವ ಕಾರ್ಯಯೋಜನೆಗಳ ತಾತ್ವಿಕತೆ

ನುಡಿಗಳ ಅಳಿವನ್ನು ತಡೆಯಲು ಹಲವಾರು ಯೋಜನೆಗಳನ್ನು ರೂಪಿಸಿಲಾಗಿದೆಯಷ್ಟೆ. ಈ ಯೋಜನೆಗಳ ಹಿಂದಿನ ತಾತ್ವಿಕತೆ ಮತ್ತು ಪ್ರಾಯೋಗಿಕ ನೆಲೆಗಳನ್ನು ಇನ್ನು ಮುಂದೆ ಗಮನಿಸೋಣ.

ನುಡಿಗಳು ಅಳಿಯದಂತೆ ತಡೆಯಲು ಹಲವು ದಾರಿಗಳನ್ನು ಹಿಡಿಯಲಾಗಿದೆ. ನುಡಿಯನ್ನು ಬಳಸುತ್ತಿರುವ ಸಮುದಾಯಗಳೇ ತಮ್ಮ ನುಡಿಗಳು ಅಳಿಯದಂತೆ ಕಾರ್ಯಯೋಜನೆಗಳನ್ನು ರೂಪಿಸಿ ಜಾರಿಗೊಳಿಸುವುದು ಒಂದು ಬಗೆ. ಬೇರೆಯವರು, ನುಡಿಗಳ ಅಳಿವಿನ ಬಗೆಗೆ ಚಿಂತಿತರಾದವರು ನುಡಿಗಳು ಅಳಿಯದಂತೆ ಬೇಕಾದ ಯೋಜನೆಗಳನ್ನು ರೂಪಿಸಿ ಜಾರಿಗೊಳಿಸುವುದು ಇನ್ನೊಂದು ಬಗೆ. ಎರಡನೆಯ ದಾರಿಯಲ್ಲಿ ಯೋಜನೆಯ ಭಾಗೀದಾರರಾದ ಸಮುದಾಯಗಳೊಡನೆ ಸಮಾಲೋಚನೆ ನಡೆಸಿ ಯೋಜನೆಗಳನ್ನು ರೂಪಿಸಿಕೊಳ್ಳುವುದುಂಟು. ಹೀಗಲ್ಲದೆ ನುಡಿಗಳ ಅಳಿವನ್ನು ತಡೆಯಲು ಜಾಗತಿಕವಾಗಿ ಮಾನ್ಯತೆ ಪಡೆದ, ಪ್ರಮಾಣೀಕೃತ ಮಾದರಿಗಳನ್ನು ಸಾರಾಸಗಟಾಗಿ ಬಳಸುವುದೂ ಉಂಟು. ಸಮುದಾಯಗಳೇ ತಮ್ಮ ಗುರುತಾಗಿ ತಮ್ಮ ನುಡಿಗಳನ್ನು ಪರಿಗಣಿಸಿದಾಗ ಅದರ ಬಳಕೆಯನ್ನು ಕಾಯ್ದುಕೊಳ್ಳುವ ದಾರಿಗಳನ್ನು ಕಂಡುಕೊಳ್ಳುತ್ತವೆ. ಈ ಬಗೆಯನ್ನು **ನುಡಿ ಕಾಪು** -ಲಾಂಗ್ವೆಜ್ ಮೆಯ್ನ್‌ಟೆನೆನ್ಸ್- ಎನ್ನುವುದುಂಟು. ನುಡಿ ಬಳಕೆಯ ಕೆಲವು ವಲಯಗಳಲ್ಲಿ ಏನಾದರಾಗಲೀ ತಮ್ಮ ನುಡಿಯನ್ನೇ ಬಳಸುವಂತೆ ಸಮುದಾಯದ ಸದಸ್ಯರಿಗೆ ಚೌಕಟ್ಟನ್ನು ರೂಪಿಸುವುದು ನುಡಿ ಕಾಪಿನ ಒಂದು ಬಗೆ. ಈಗಾಗಲೇ ನಾವು ಗಮನಿಸಿರುವಂತೆ ಕರ್ನಾಟಕದ ಉತ್ತರ ತುದಿಯಿಂದ ಮಧ್ಯ ಕರ್ನಾಟಕದವರೆಗೆ ಬೇರೆ ಬೇರೆ ಕಡೆ ಅರೆ ಅಲೆಮಾರಿಗಳಾಗಿ ಜೀವಿಸುತ್ತಿರುವ ರಾಜಗೊಂಡ ಎಂಬ ಬುಡಕಟ್ಟಿನ ಒಂದು ವಿವರವನ್ನು ಈ ಹಿಂದೆ ಗಮನಿಸಿದ್ದೇವೆ. ಈ ಬುಡಕಟ್ಟಿನ ಜನರು ತಮ್ಮ ನುಡಿಯಾದ ಗೊಂಡಿಯನ್ನು ಕಾಯ್ದುಕೊಳ್ಳಲು ಒಂದು ಕ್ರಮವನ್ನು ಅನುಸರಿಸುತ್ತಾರೆ. ಹೊರಗೆ ಇತರರೊಡನೆ ವ್ಯವಹಾರ ಮಾಡುವಾಗ ಯಾವ ನುಡಿಯನ್ನಾದರೂ ಬಳಸಲು ಈ ಜನರಿಗೆ ಅವಕಾಶವಿದೆ. ಆದರೆ ಮನೆಯೊಳಗೆ, ತಮ್ಮ ಸಮುದಾಯದ ಇತರರೊಡನೆ ಮಾತಾಡುವಾಗ ಗೊಂಡಿ ನುಡಿಯನ್ನೇ ಬಳಸಬೇಕು ಎಂಬುದು ಕಡ್ಡಾಯ. ಈ ಶರತ್ತನ್ನು ಮೀರಿದರೆ ಹಾಗೆ ಮಾಡಿದವರಿಗೆ ದಂಡವನ್ನು ವಿಧಿಸಲಾಗುತ್ತದೆ. ಹೀಗೆಯೇ ಸಮುದಾಯಗಳು ತಮಗೆ ಪವಿತ್ರ ಎನಿಸಿದ ಆಚರಣೆಗಳ ಸಂದರ್ಭಗಳಲ್ಲಿ ತಮ್ಮ ನುಡಿಯನ್ನೇ ಬಳಸುವ ಪದ್ಧತಿಯನ್ನು ರೂಢಿಸಿಕೊಳ್ಳುತ್ತವೆ. ಆ ಮೂಲಕವೂ ನುಡಿಯನ್ನು ಕೆಲವು ಬಳಕೆಯ ವಲಯಗಳಲ್ಲಿ ಕಾಯ್ದುಕೊಳ್ಳುತ್ತವೆ.

ಸಮುದಾಯದ ಹೊರಗಿನಿಂದ ನುಡಿ ಕಾಪಿನ ಯೋಜನೆಗಳು ರೂಪುಗೊಂಡಾಗ ಆ ನುಡಿಯನ್ನಾಡುವ ಸಮುದಾಯದಲ್ಲಿ ಜಾಗ್ರತಿಯನ್ನು ಉಂಟು ಮಾಡಬೇಕಾಗುತ್ತದೆ. ಬೇರೆ ಬೇರೆ ವಲಯಗಳಲ್ಲಿ ಆ ನುಡಿಯನ್ನು ಬಳಸಲು ಅನುಕೂಲವಾಗುವಂತೆ ಪ್ರಮಾಣೀಕರಣ ಮತ್ತು ಆಧುನೀಕರಣದಂತಹ ಪ್ರಕ್ರಿಯೆಗೆ ಆ ನುಡಿಯನ್ನು ಒಳಪಡಿಸಲಾಗುತ್ತದೆ. ಲಿಪಿಯನ್ನು ರೂಪಿಸುವುದು, ನಿಘಂಟು ಮೊದಲಾದ ಆಕರ ಸಾಮಗ್ರಿಗಳನ್ನು ನುಡಿ ಬಳಕೆಗೆ ಅನುಕೂಲವಾಗಲೆಂದು ಸಿದ್ಧಪಡಿಸುವುದು ಇವೇ ಮುಂತಾದ ಕಾರ್ಯಗಳಲ್ಲಿ ತೊಡಗಿಸಿಕೊಳ್ಳಲಾಗುತ್ತದೆ. ಈಚಿನ ದಿನಗಳಲ್ಲಿ ಅಳಿಯುತ್ತಿರುವ ನುಡಿಗಳಿಗೆ ಲಿಪಿ, ಬರಹಗಳ ಮೂಲಕ ದಾಖಲೀಕರಣ ಕಾರ್ಯಗಳಿಗೆ ತೊಡಗುವುದರಿಂದ

ಅಪಾರ ಸಮಯ ಮತ್ತು ಶ್ರಮ ವ್ಯರ್ಥವಾಗುತ್ತದೆಂದು ಕಂಡುಕೊಳ್ಳಲಾಗಿದೆ. ಅದಕ್ಕಾಗಿ ನುಡಿಗಳ ಬಾಯ್ದೆರೆಯ ಮಾಹಿತಿಯನ್ನು ಅಪಾರ ಪ್ರಮಾಣದಲ್ಲಿ ಅಂತರ್ಜಾಲದಲ್ಲಿ ಕೂಡಿಡುವ ದಾರಿಯನ್ನು ಹಿಡಿಯುವುದು ಸರಿ ಎಂದು ಯೋಜಕರು ತಿಳಿದಿದ್ದಾರೆ; ಮತ್ತು ಆ ದಿಸೆಯಲ್ಲಿ ಕಾರ್ಯಪ್ರವೃತ್ತರಾಗಿದ್ದಾರೆ.ಆಫ್ರಿಕಾ ನಾಡಿನ ಕೆಲವು ಸಮುದಾಯಗಳ ಜನರು ವಲಸೆ ಹೋಗಿ ಬೇರೆ ನಾಡುಗಳಲ್ಲಿ ನೆಲಸಿದ್ದಾರೆ. ಅಂತಹವರಲ್ಲಿ ಕೆಲವರು ತಮ್ಮ ಮೂಲ ನೆಲೆಯ ನುಡಿಗಳನ್ನು ಕಾಪಿಡಲು ಇಂತಹ ದಾರಿಗಳನ್ನು ಹಿಡಿದಿದ್ದಾರೆ. ರೇಡಿಯೋ ಕೇಂದ್ರಗಳನ್ನು ತೆರೆದು ಆ ಕೇಂದ್ರಗಳಲ್ಲಿ ತಮ್ಮ ನುಡಿಯನ್ನು ಬಳಸುವುದು; ತಮ್ಮ ನುಡಿಯ ಬಾಯ್ದೆರೆಯ ದಾಖಲೆಗಳನ್ನು ಅಂತರ್ಜಾಲದಲ್ಲಿ ಇರಿಸಿ ಅವು ಬೇಕಾದವರಿಗೆ ದೊರಕುವಂತೆ ಮಾಡುವುದು ಇವೇ ಮೊದಲಾದ ಕಾರ್ಯ ಯೋಜನೆಗಳಲ್ಲಿ ತೊಡಗಿಕೊಂಡಿದ್ದಾರೆ. ಈ ಬಗೆಯ ಕೆಲಸಗಳ ಹಿಂದಿರುವ ಭಾವನಾತ್ಮಕ ಕಾಳಜಿಯನ್ನು ಹುಸಿ ಎನ್ನಲು ಬರುವುದಿಲ್ಲ. ಆದರೆ ಈ ಯತ್ನಗಳು ನುಡಿಗಳನ್ನು 'ಕಾಪಿಡುವ' ರೀತಿಯು ಸಂರಕ್ಷಣಾಲಯಗಳಲ್ಲಿ ಪ್ರಾಣಿಗಳನ್ನು, ಅಪರೂಪದ ವಸ್ತುಗಳನ್ನು ವಸ್ತು ಸಂಗ್ರಹಾಲಯಗಳಲ್ಲಿ ಇರಿಸುವ ಮಾದರಿಯನ್ನೇ ಹೋಲುತ್ತದೆ. ಈ ಮಾದರಿಯನ್ನು ದಿಟವಾಗಿ ಕಾಪಿಡುವ ಬಗೆ ಎಂದು ಒಪ್ಪುವುದು ಕಷ್ಟ. ನುಡಿಗಳನ್ನು ನುಡಿಗಳನ್ನಾಡುವ ಸಮುದಾಯಗಳಿಂದ, ನುಡಿಗಳ ಬಳಕೆಯ ಸಂದರ್ಭಗಳಿಂದ ಬೇರ್ಪಡಿಸುವ ಮೂಲಕ ನುಡಿಗಳನ್ನು ಕಾಪಾಡಿಕೊಳ್ಳುವುದು ಸರಿಯಾದ ಹಾದಿಯಾಗಲಾರದು.

ಈ ಸಂದರ್ಭದಲ್ಲೇ ಇನ್ನೊಂದು ಸಂಗತಿಯನ್ನೂ ಗಮನಿಸುವ ಅಗತ್ಯವಿದೆ. ಈಗಾಗಲೇ ನೋಡಿರುವಂತೆ ಅಳಿವಿನ ಅಂಚಿನಲ್ಲಿ ಇವೆಯೆಂದು ತಿಳಿಯಲಾದ ನುಡಿಗಳನ್ನು ಉಳಿಸಿ ಪೋಷಿಸುವ ಚಿಂತನೆ ಮತ್ತು ಕಾರ್ಯ ಯೋಜನೆಗಳು ಆ ನುಡಿಗಳನ್ನು ಆಡದಿರುವ ಹೊರಗಿನ ಸಂಸ್ಥೆಗಳ ಮೂಲಕ ರೂಪುಗೊಳ್ಳುತ್ತವೆ. ಇದು ಒಂದು ಮಾದರಿ. ಈ ಬಗೆಯ ಯೋಜನೆಗಳನ್ನು ಅಳಿಯುತ್ತಿರುವ ಇಲ್ಲವೇ ಬಳಕೆಯು ಕಡಿಮೆಯಾಗುತ್ತಿರುವ ನುಡಿಗಳನ್ನಾಡುವ ಸಮುದಾಯಗಳು ಒಪ್ಪದೇ ಇರುವ ಪ್ರಸಂಗಗಳೂ ಸಾಕಷ್ಟಿವೆ. ದಕ್ಷಿಣ ಆಫ್ರಿಕಾ–ಇನ್ನೂ ಬ್ರಿಟಿಶರ ವಸಾಹತು ಆಗಿದ್ದಾಗ–ಅಲ್ಲಿನ ಜುಲು ಮುಂತಾದ ಬುಡಕಟ್ಟಿನ ಮಕ್ಕಳಿಗೆ ಶಿಕ್ಷಣ ನೀಡಲು ಆಗ ಬಳಕೆಯಲ್ಲಿದ್ದ ಆಡಳಿತಗಾರರ ನುಡಿಯಾದ ಇಂಗ್ಲಿಶ್ ನುಡಿಯ ಬದಲು ಜನರ ನುಡಿಯಾಗಿದ್ದ ಆಫ್ರಿಕಾನ್‌ಅನ್ನು ಬಳಸುವ ಯೋಜನೆಯನ್ನು ಕೈಗೆತ್ತಿಕೊಂಡು ಜಾರಿಗೊಳಿಸಲಾಯಿತು. ಇದು ಆಡಳಿತ ವ್ಯವಸ್ಥೆಯೇ ಕೈಗೊಂಡ ಕ್ರಮವಾಗಿತ್ತು. ಆಗ ಬಳಕೆಯಲ್ಲಿದ್ದ ಶಿಕ್ಷಣ ಕ್ರಮವನ್ನು ಬಂಟು ಶಿಕ್ಷಣ ಕ್ರಮವೆನ್ನುತ್ತಿದ್ದರು. ಇದರ ಮುಖ್ಯ ಗುರಿ ಕಪ್ಪು ಮಕ್ಕಳನ್ನು ವರ್ಣಭೇದದ ನೀತಿಯ ಸಮಾಜಕ್ಕೆ ತಕ್ಕ ಪ್ರಜೆಗಳನ್ನಾಗಿ ರೂಪಿಸುವುದೇ ಆಗಿತ್ತು. ಈ ಶಿಕ್ಷಣ ವ್ಯವಸ್ಥೆಯು ತಮ್ಮನ್ನು ಎರಡನೆಯ ದರ್ಜೆಯ ಪ್ರಜೆಗಳನ್ನಾಗಿ ನೋಡುವುದನ್ನು ಗಟ್ಟಿಗೊಳಿಸುತ್ತಾ ಹೋಗುವುದನ್ನು ಜನರು ಗುರುತಿಸುತ್ತಿದ್ದರು. ಇದಕ್ಕೆ ಪೂರಕವಾಗಿ ಯಾವಾಗ ಆಫ್ರಿಕಾನ್ ನುಡಿಯನ್ನು ಇಂಗ್ಲಿಶ್‌ನ ಜತೆಗೆ/ಬದಲಾಗಿ ಬಳಸಲು ತೊಡಗಲಾಯಿತೋ ಆಗ ಜನರಿಗೆ ಹೊಸ ಜಗತ್ತಿಗೆ ತೆರೆದುಕೊಳ್ಳಲು ತಮಗೆ ಇದ್ದ

ಅವಕಾಶವನ್ನು ಕಸಿದುಕೊಳ್ಳಲಾಗುತ್ತಿದೆ ಎನಿಸಿತು. 1976ರ ಜೂನ್ ತಿಂಗಳಿನಲ್ಲಿ ಸೊವೆಟೋ ಎಂಬಲ್ಲಿ ಯುವಕರು ದಂಗೆ ಎದ್ದರು. ಹೊಸ ಶಿಕ್ಷಣ ನೀತಿಯನ್ನು ವಿರೋಧಿಸಿದರು. ಆಗ ನಡೆದ ಪೋಲಿಸ್ ಗೋಲಿಬಾರ್‌ನಲ್ಲಿ ಹಲವರು ಸತ್ತರು. ಅದರ ವಿವರಗಳು ಇಲ್ಲಿ ಬೇಕಿಲ್ಲ. ಆದರೆ ಜನರಿಗೆ ಅವರ ನುಡಿಯನ್ನು ಉಳಿಸಿಕೊಳ್ಳುವ ಪಾಠವನ್ನು ಹೊರಗಿನವರು ಹೇಳತೊಡಗಿದಾಗ ಏನೆಲ್ಲ ಆಗಬಹುದು ಎಂಬುದಕ್ಕೆ ಇದೊಂದು ಉದಾಹರಣೆ.

ಇಂಡಿಯದಲ್ಲೂ ಕೆಲವು ದಶಕಗಳ ಹಿಂದೆ ಕೆಲವು ಬುಡಕಟ್ಟುಗಳ ಜನರ ಮಕ್ಕಳಿಗೆ ಕಲಿಸುವ ಪಾಠ ಪುಸ್ತಕಗಳನ್ನು ಅವರು ಆಡುವ ನುಡಿಯಲ್ಲೇ ಸಿದ್ಧಪಡಿಸುವ ಯೋಜನೆಯನ್ನು ಜಾರಿಗೊಳಿಸಲಾಯಿತು. ಕರ್ನಾಟಕದ ದಕ್ಷಿಣದಲ್ಲಿರುವ ಸೋಲಿಗರ ಮಕ್ಕಳಿಗೆ, ಜೇನು ಕುರುಬರ ಮಕ್ಕಳಿಗೆ ಅವರವರ ನುಡಿಗಳಲ್ಲಿರುವ ಪುಸ್ತಕಗಳನ್ನು ಸಿದ್ಧಪಡಿಸಿ ಶಾಲೆಗಳಲ್ಲಿ ಬಳಸಲು ಮೊದಲು ಮಾಡಿದರು. ಒಡಿಸಾದ ಕುರುಖ್, ಕುವಿ, ಕೋಯಾ ಬುಡಕಟ್ಟಿನ ಮಕ್ಕಳಿಗೂ ಇದೇ ಮಾದರಿಯ ಪುಸ್ತಕಗಳನ್ನು ಒದಗಿಸಲಾಯಿತು. ಆ ಹೊತ್ತಿನಲ್ಲಿ ಇಂತಹ ಯತ್ನಕ್ಕೆ ಯಶ ದೊರೆಯಲಿಲ್ಲ. ಬುಡಕಟ್ಟಿನ ಮಕ್ಕಳನ್ನು ಆಯಾ ರಾಜ್ಯಗಳ ಜನತೆಯ ಮುಖ್ಯಧಾರೆಗೆ ಸೇರದಂತೆ ಅಡ್ಡಿಪಡಿಸುವ ಕ್ರಮವನ್ನಾಗಿ ಈ ಯೋಜನೆಯನ್ನು ಅರ್ಥೈಸಲಾಯಿತು. ಈ ಯೋಜನೆ ತಕ್ಕ ಫಲವನ್ನು ನೀಡಲಿಲ್ಲ. ಈ ಸೋಲಿಗೆ ಯೋಜನೆಯನ್ನು ರೂಪಿಸಿದ ಬಗೆಯಲ್ಲಿ ಇದ್ದ ಕೊರತೆ ಕಾರಣವಾಯಿತೋ ಇಲ್ಲವೇ ಅದನ್ನು ಜಾರಿಗೊಳಿಸುವ ಬಗೆಯಲ್ಲಿ ಇದ್ದ 'ತಪ್ಪು'ಗಳು ಕಾರಣವಾದವೋ ಎಂಬುದು ಬೇರೆಯದೇ ಆದ ಚರ್ಚೆಯನ್ನು ಬಯಸುತ್ತದೆ.

ನುಡಿಗಳನ್ನು ಅವುಗಳ ವೈವಿಧ್ಯಕ್ಕಾಗಿ, ಆ ವೈವಿಧ್ಯಗಳನ್ನು ಅರಿಯುವುದಕ್ಕಾಗಿ ಅಧ್ಯಯನ ಮಾಡಬೇಕು ಮತ್ತು ಅವುಗಳನ್ನು ಕಾಯ್ದುಕೊಳ್ಳಬೇಕು ಎಂದು ವಾದಿಸುವವರು ಅನುಸರಿಸಿರುವ ಬಗೆಯನ್ನು ನೋಡೋಣ. ಜಗತ್ತಿನ ನೂರಾರು ಕಿರು ಸಮುದಾಯಗಳ ನುಡಿಗಳನ್ನು ಅಧ್ಯಯನ ಮಾಡುವ ಆಸಕ್ತಿಯನ್ನು ತೋರಿದವರು ಅಮೇರಿಕಾ ದೇಶದ ನುಡಿಯರಿಗರು. ಏಶಿಯಾ, ಆಫ್ರಿಕಾ, ದಕ್ಷಿಣ ಅಮೆರಿಕಾ ನಾಡುಗಳಲ್ಲಿ ಈ ಬಗೆಯ ನುಡಿಗಳ ಅಧ್ಯಯನಗಳನ್ನು ಕಳೆದ ಶತಮಾನದ ನಡುಭಾಗದಲ್ಲಿ ಕೈಗೊಳ್ಳಲಾಯಿತು. ಅಚ್ಚರಿಯೆಂದರೆ ಈ ಬಗೆಯ ಅಧ್ಯಯನಗಳಿಗೆ ಬೇಕಾಗಿದ್ದ ಹಣಕಾಸಿನ ಸೌಲಭ್ಯ ದೊರೆತದ್ದು ಅಮೆರಿಕಾ ದೇಶದ ಸೈನ್ಯಾಡಳಿತದ ನೆಲೆಯಾದ ಪೆಂಟಗಾನ್‌ನಿಂದ. ಅಮೆರಿಕಾ ದೇಶದ ಹಲವು ವಿಶ್ವವಿದ್ಯಾಲಯಗಳ ಭಾಷಾಶಾಸ್ತ್ರ ವಿಭಾಗಗಳು, ಮಾನವಶಾಸ್ತ್ರ ವಿಭಾಗಗಳು ಈ ಮೂಲದಿಂದ ಅನುದಾನವನ್ನು ಪಡೆದು ನುಡಿಗಳನ್ನು ಅಧ್ಯಯನ ಮಾಡುವ ಯೋಜನೆಗಳನ್ನು ಕೈಗೆತ್ತಿಕೊಂಡವು. ಇದಕ್ಕೆ ಕಾರಣಗಳನ್ನು ಕಂಡುಕೊಳ್ಳುವುದು ಕಷ್ಟವೇನಲ್ಲ. ಅಮೇರಿಕಾ ಫೆಸಿಫಿಕ್ ಸಾಗರದಲ್ಲಿ ತನ್ನ ಸೈನ್ಯದ ನೆಲೆಗಳನ್ನು ಸ್ಥಾಪಿಸುತ್ತಿತ್ತು. ವಸಾಹತು ಆಡಳಿತದಿಂದ ಬಿಡುಗಡೆ ಪಡೆದ ನಾಡುಗಳಲ್ಲಿ ಹೊಸ ಬಗೆಯಲ್ಲಿ ನವವಸಾಹತುಗಳನ್ನು ಸ್ಥಾಪಿಸುವ ದೂರದ ಗುರಿಯೂ ಹಿನ್ನೆಲೆಯಲ್ಲಿ ಇತ್ತು. ಪರಿಸರದ ಜನರೊಡನೆ ನಿರಂತರವಾಗಿ ಸಂಪರ್ಕವಿರಿಸಿಕೊಳ್ಳುವ ಅಗತ್ಯವಿತ್ತು. ಅದಕ್ಕಾಗಿ ರೂಪಿಸಿದ್ದ

ಪೀಸ್ ಕೋರ್‌ನ ಸ್ವಯಂ ಸೇವಕರು ಸ್ಥಳೀಯ ಜನರೊಡನೆ ಸೇರಿ ಅವರ ನುಡಿಗಳ ಪರಿಚಯ ಮಾಡಿಕೊಳ್ಳಬೇಕಿತ್ತು. ಆ ಸ್ವಯಂಸೇವಕರಿಗೆ ಅನುಕೂಲವಾಗಲೆಂದು ಆ ಸ್ಥಳೀಯ ನುಡಿಗಳ ಪರಿಚಯ ಮಾಡುವ ಕೈಪಿಡಿಗಳನ್ನು ಒದಗಿಸಲಾಗುತ್ತಿತ್ತು. ಅಂತಹ ಕೈಪಿಡಿಗಳ ರಚನೆಗಾಗಿಯೇ ತಂಡ ತಂಡವಾಗಿ ನುಡಿಯರಿಗರು ಆ ಭಾಷೆಗಳ ವಿವರಗಳನ್ನು ಅಧ್ಯಯನ ಮಾಡುತಿದ್ದರು. ಸೈನ್ಯಕೇಂದ್ರವು ಅದಕ್ಕೆ ಅಗತ್ಯವಾದ ಹಣವನ್ನು ಒದಗಿಸುತ್ತಿತು. ಅದೀಗ ನಮಗೆ ಮುಖ್ಯವಲ್ಲ. ಆದರೆ ಇಂತಹ ಅಧ್ಯಯನಗಳು ನುಡಿ ಮತ್ತು ಆ ನುಡಿಯನ್ನಾಡುವ ಸಮುದಾಯಗಳನ್ನು ಅಧ್ಯಯನ ವಸ್ತುಗಳನ್ನಾಗಿ ನೋಡುತ್ತವೆ ಮತ್ತು ಅಂತಹ ಅಧ್ಯಯನಗಳಿಂದ ಬೇರೇನೋ ಉಪಯುಕ್ತತೆಯನ್ನು ಕಂಡುಕೊಳ್ಳಲು ಬಯಸುತ್ತಿರುತ್ತವೆ ಎಂಬುದನ್ನು ಗಮನದಲ್ಲಿ ಇರಿಸಿಕೊಳ್ಳಬೇಕು.

ಯುನೆಸ್ಕೋ ದಾರಿ:

ನುಡಿಗಳನ್ನು ಕಾಪಿಡುವ ಯೋಜನೆಗಳನ್ನು ರೂಪಿಸುವ ಸಂಸ್ಥೆಗಳು ಆಗಿಂದಾಗ್ಗೆ ಅಳಿವಿನ ಅಂಚಿನಲ್ಲಿರುವ (ಎನ್‌ಡೇಂಜರ್ಡ್) ನುಡಿಗಳ ಪಟ್ಟಿಯನ್ನು ಪ್ರಕಟಿಸುತ್ತವೆ. ಇಂತಹ ಯೋಜನೆಗಳನ್ನು ರೂಪಿಸುವ ಸಂಸ್ಥೆಗಳಲ್ಲಿ ಯುನೆಸ್ಕೋ ಮುಂಚೂಣಿಯಲ್ಲಿದೆ. ಅದರ ನಿಲುವನ್ನು ನೋಡೋಣ:

ಸಾಂಸ್ಕೃತಿಕ ಬಹುತ್ವವನ್ನು ಕಾಪಿಡಲು ಯುನೆಸ್ಕೋ ಮುಂದಿಡುವ ಕಾರ್ಯಯೋಜನೆಗಳಾವುವು? ಅಳಿವಿನ ಅಪಾಯಕ್ಕೊಳಗಾಗಿರುವ ನುಡಿಗಳ ಮಾಹಿತಿಯನ್ನು ಅಂತರ್ಜಾಲದಲ್ಲಿ ಅಳವಡಿಸುವುದು. ಅಂತಹ ಸಮುದಾಯಗಳ ನುಡಿಗಳ ಶ್ರೀಮಂತಿಕೆಯನ್ನು ತಿಳಿಯಪಡಿಸುವುದು. ಬಾಯ್ದೆರೆಯಲ್ಲಿರುವ ನುಡಿಗಳಿಗೆ ಬರವಣಿಗೆಯ ವ್ಯವಸ್ಥೆಯನ್ನು ರೂಪಿಸುವುದು. ಅಂತಹ ಸಮುದಾಯಗಳನ್ನು ಗುರುತಿಸಿ ಅವುಗಳ ಸದಸ್ಯರಲ್ಲಿ ಈ ಅಪಾಯವನ್ನು ಮನವರಿಕೆ ಮಾಡಿಕೊಡುವುದು. ಅವರನ್ನು ನುಡಿ ಕಾಪಿಡುವ ಕಾರ್ಯ ಯೋಜನೆಗೆ ಸನ್ನದ್ಧರನ್ನಾಗಿ ಮಾಡುವುದು. ಮಾಹಿತಿ ತಂತ್ರಜ್ಞಾನ, ಗಣಕ ತಂತ್ರಜ್ಞಾನದ ವಲಯಕ್ಕೆ ಆ ನುಡಿಯ ಮಾಹಿತಿಯನ್ನು ವರ್ಗಾಯಿಸುವುದು.

(The UNESCO Universal Declaration on Cultural Diversity and the UN Resolution 56/262 both stress the need for urgent action to promote the linguistic diversity, as part of the world's cultural diversity.

Promoting cultural diversity and intercultural dialogue through the development of:

content in as many languages as possible on the Internet, collecting and disseminating case studies and information highlighting the cultural heritage and linguistic richness of various peoples;

orthographies for oral languages to enhance their survival, empowering and enlisting peoples from endangered languages groups to participate in their protection and using ICTs to share these experiences and to protect and preserve endangered languages.)

ಯುನೆಸ್ಕೋದ ನಿರ್ಣಯವು ಅಳಿಯುತ್ತಿರುವ ನುಡಿಗಳನ್ನು ಉಳಿಸುವ ದಾರಿಯನ್ನು ಸೂಚಿಸುತ್ತಿದೆ. ಆದರೆ ನುಡಿಗಳು ಅಳಿಯುವುದಕ್ಕೆ ಇರುವ ಕಾರಣಗಳನ್ನು ಹುಡುಕುತ್ತಿಲ್ಲ. ಮತ್ತು ನುಡಿಗಳು ಅಳಿಯುತ್ತಿವೆ ಎಂಬುದನ್ನು ಗೊತ್ತುಮಾಡಲು ತಕ್ಕ ಮಾನದಂಡಗಳನ್ನು ಸೂಚಿಸುತ್ತಿಲ್ಲ. ನುಡಿಯರಿಗರು ಇಂತಹ ಮಾನದಂಡಗಳನ್ನು ರೂಪಿಸಿದ್ದಾರೆ. ಆದರೆ ಅವುಗಳ ಬಗೆಗೆ ಸಹಮತಿ ಇದ್ದಂತಿಲ್ಲ.

ಬಾಯ್ದೆರೆಯಲ್ಲಿರುವ ನುಡಿಗಳಿಗೆ ಲಿಪಿಯ, ಬರಹದ ವ್ಯವಸ್ಥೆಯನ್ನು ರೂಪಿಸಿಕೊಟ್ಟರೆ ಅವುಗಳು ಅಳಿಯದೇ ಉಳಿದುಕೊಳ್ಳುವ ದಾರಿಯೊಂದನ್ನು ಕಂಡುಕೊಂಡಂತೆ ಎನ್ನುವ ನಿಲುವು ಕೂಡ ಒಪ್ಪತಕ್ಕದ್ದಲ್ಲ. ಇದರ ಅರ್ಥ ಬಾಯ್ದೆರೆಯ ನುಡಿಗಳಿಗೆ ಲಿಪಿ ವ್ಯವಸ್ಥೆಯನ್ನು ರೂಪಿಸಬೇಕಿಲ್ಲ ಎಂದು ಹೇಳುವುದಲ್ಲ. ಜಗತ್ತಿನ ಎಷ್ಟೋ ನುಡಿಗಳು ಲಿಪಿ ವ್ಯವಸ್ಥೆಯನ್ನು ಪಡೆದುಕೊಂಡಿದ್ದರೂ, ಅಪಾರ ಪ್ರಮಾಣದ ಲಿಖಿತ ದಾಖಲೆಗಳನ್ನು ಉಳಿಸಿದ್ದರೂ ಆ ನುಡಿಗಳನ್ನು ಆಡುವ ಸಮುದಾಯಗಳೇ ಇಲ್ಲವಾಗಿರುವ ಉದಾಹರಣೆಗಳಿವೆ. ಸಂಸ್ಕೃತ, ಲ್ಯಾಟಿನ್, ಹಳೆಯ ಗ್ರೀಕ್, ಹಳೆಯ ಅರ‍್ಯಾಬಿಕ್ ಮುಂತಾದವು ಇದಕ್ಕೆ ಉದಾಹರಣೆಗಳು. ಇವೆಲ್ಲಕ್ಕೂ ಬಲು ದೃಢವಾದ ಲಿಪಿ ವ್ಯವಸ್ಥೆ ಇತ್ತು. ಆ ನುಡಿಗಳ ಲಿಖಿತ ದಾಖಲೆಗಳು ಸಾಕಷ್ಟಿವೆ. ಆದರೆ ಈ ನುಡಿಗಳನ್ನು ಮೊದಲ ನುಡಿಯನ್ನಾಗಿ ಆಡುವ ಸಮುದಾಯಗಳೇ ಈಗ ಇಲ್ಲವಾಗಿವೆ. ಅಥವಾ ಆ ನುಡಿಗಳಿಂದ ಮೈದಳೆದ ಬೇರೆ ನುಡಿಗಳನ್ನಾಡುವ ಸಮುದಾಯಗಳಾಗಿ ಬದಲಾಗಿವೆ. ಇದಲ್ಲದೆ ಪ್ರಾಕ್ತನ ಶಾಸ್ತ್ರಜ್ಞರು ಹತ್ತಾರು ಲಿಪಿ/ಬರಹಗಳ ದಾಖಲೆಗಳನ್ನು 'ಕಂಡು' ಹಿಡಿದಿದ್ದಾರೆ. ಆದರೆ ಆ ಲಿಪಿಯನ್ನುಳ್ಳ ನುಡಿ ಸಮುದಾಯಗಳ ಬಗೆಗಾಗಲೀ ಆ ನುಡಿಯ ಬಗೆಗಾಗಲೀ ಯಾವ ಮಾಹಿತಿಯೂ ದೊರಕುತ್ತಿಲ್ಲ; ಕೇವಲ ಊಹೆಗಳು ಮಾತ್ರ ಸಾಧ್ಯ. ಹರಪ್ಪಾ, ಮೊಹೆಂಜೋದಾರೋನ ಸೀಲ್‌ಗಳು ಇದಕ್ಕೆ ಒಂದು ಉದಾಹರಣೆ. ಹೀಗಾಗಿ ನುಡಿಯನ್ನು ಆಡುವ ಸಮುದಾಯಕ್ಕೆ ಮತ್ತು ಆ ನುಡಿಗೆ ಲಿಪಿ ವ್ಯವಸ್ಥೆಯು ಬಾಳಿಕೆಯ ಅವಕಾಶವನ್ನು ಹೆಚ್ಚಿಸುತ್ತದೆ ಎನ್ನುವುದನ್ನು ಒಪ್ಪುವುದು ಕಷ್ಟ.

ನುಡಿಗಳ ವೈವಿಧ್ಯವನ್ನು ಕಾಯ್ದುಕೊಳ್ಳುವ ಅಗತ್ಯವನ್ನು ಎತ್ತಿ ಹೇಳುವಾಗ ಆ ನುಡಿಗಳನ್ನು ಬಳಸುವ ಸಮುದಾಯಗಳ ಸಾಂಸ್ಕೃತಿಕ ಹಿರಿಮೆ ಮತ್ತು ಮಾನವ ಜನಾಂಗಕ್ಕೆ ಅವುಗಳ ಬಗೆಗಿನ ತಿಳಿವಳಿಕೆಗಳ ಅಗತ್ಯವನ್ನು ಕೂಡ ಎತ್ತಿ ಹೇಳಲಾಗುತ್ತದೆ. ಈ ನಿಲುವು ಮೇಲುನೋಟಕ್ಕೆ ಸೂಕ್ತವೂ ನೈತಿಕವಾಗಿ ಸರಿಯೂ ಆಗಿ ತೋರುತ್ತದೆ. ಈ ತಿಳಿವಳಿಕೆ ಯಾರಿಗಾಗಿ? ಈಗಾಗಲೇ ಹೇಳಿರುವಂತೆ ಈ ಬಗೆಯ ಆಸಕ್ತಿಗಳು ಶೈಕ್ಷಣಿಕ ನೆಲೆಯಲ್ಲಿರುತ್ತವೆ. ಅಧ್ಯಯನಕಾರರು ಮತ್ತು ಅಧ್ಯಯನಕ್ಕೆ ಒಳಗಾಗುತ್ತಿರುವ

ಸಮುದಾಯಗಳ ನಡುವೆ ಏರ್ಪಡುವ ಸಂಬಂಧವನ್ನು ನೋಡಿದರೆ ಈ ಸಂಗತಿ ಗೊತ್ತಾಗುತ್ತದೆ. ಈ ಬಗೆಯ ಅಧ್ಯಯನಗಳು ಮಾಹಿತಿಗಳನ್ನು ಕೂಡಿಹಾಕುತ್ತವೆ. ಆ ಮಾಹಿತಿಗಳು ಸ್ಥಗಿತ ರೂಪದಲ್ಲಿರುತ್ತವೆ. ಅವುಗಳಿಗೆ ಚಲನಶೀಲತೆ ಇರುವುದಿಲ್ಲ. ಅಂದರೆ ಆ ಮಾಹಿತಿಗಳು ಅಧ್ಯಯನಕಾರರ ತಿಳಿವಿನೊಡನೆ ತಿಕ್ಕಾಟವನ್ನು ಹುಟ್ಟಿಹಾಕುವುದಿಲ್ಲ. ಅವರ ತಿಳಿವಿನ ಚೌಕಟ್ಟನ್ನು ಬದಲಿಸುವುದಿಲ್ಲ.

ನುಡಿಗಳಲ್ಲಿ ಅಳಿವಿನ ಅಂಚಿನಲ್ಲಿ ಯಾವುವು ಇವೆ; ಯಾವುವು ತೀವ್ರಗತಿಯಲ್ಲಿ ಅಳಿಯುತ್ತಿವೆ ಎಂಬುದನ್ನು ತಿಳಿಸುವ ಪಟ್ಟಿಗಳನ್ನು ಆಗಿಂದಾಗ್ಗೆ ಸಿದ್ಧಪಡಿಸಲಾಗುತ್ತಿದೆ. ಇಂತಹ ಪಟ್ಟಿಗಳನ್ನು ಸಿದ್ಧಪಡಿಸುವಾಗ ಆಯಾ ನುಡಿಗಳನ್ನು ಆಡುವ ನಾಡುಗಳ ಸರಕಾರಗಳು ಒದಗಿಸುವ ಮಾಹಿತಿಯನ್ನು ಅವಲಂಬಿಸಿರುತ್ತವೆ. ನುಡಿಗಳ ಹೆಸರುಗಳು, ಅವುಗಳನ್ನು ಆಡುವ ಜನ ಸಮುದಾಯದ ಬಗೆಗಿನ ವಿವರಗಳು, ಆಡುವ ಜನರ ಸಂಖ್ಯೆ, ನುಡಿಯ ಅಳಿವಿನ ಸ್ಥಿತಿಗೆ ಕಾರಣಗಳು ಇವೆಲ್ಲವೂ ಆಳವಾದ ಅಧ್ಯಯನದಿಂದ ಮಂಡಿತವಾಗಿರುವುದಿಲ್ಲ. ಅಂತಹ ಮಾಹಿತಿಯನ್ನು ಸಂಗ್ರಹಿಸುವುದು ಸರಕಾರದ ಆದ್ಯತೆಯ ಕೆಲಸವಾಗಿರುವುದಿಲ್ಲ. ಯುನೆಸ್ಕೋ ಸಂಸ್ಥೆ ಇಂಡಿಯಾದ ಬಗೆಗೆ ಒದಗಿಸುವ ಮಾಹಿತಿಯನ್ನು ನೋಡಿದರೆ ಈ ಸಂಗತಿ ಗೊತ್ತಾಗುತ್ತದೆ. ಈ ವರದಿಯಲ್ಲಿ ಕೊರಗ, ಕುರುಬ ಮತ್ತು ಬೆಲ್ಲಾರಿಗಳು ಅಳಿಯುತ್ತಿರುವ ನುಡಿಗಳೆಂದು ಗುರುತಿಸಲಾಗಿದೆ. ಪೀಪಲ್ಸ್ ಲಾಂಗ್ವೆಜ್ ಸರ್ವೆ ಆಫ್ ಇಂಡಿಯಾದ ವರದಿಯು ಕರ್ನಾಟಕದಲ್ಲಿ ಅಳಿವಿನ ಅಂಚಿನಲ್ಲಿರುವ ಮತ್ತು ತೀವ್ರಗತಿಯಲ್ಲಿ ಅಳಿಯುತ್ತಿರುವ (ಕ್ರಿಟಿಕಲಿ ಎನ್‌ಡೇಂಜರ್ಡ್) ನುಡಿಗಳೆಂದು ಕೆಲವನ್ನು ಗುರುತಿಸಿದೆ. ಕರ್ನಾಟಕದ ಕರಾವಳಿ ಜಿಲ್ಲೆಗಳಲ್ಲಿರುವ ಕೊರಗ ನುಡಿ ಆ ಪಟ್ಟಿಯಲ್ಲಿದೆ. ಈ ವರದಿಯು ಈ ನಿರ್ಣಯವನ್ನು ತಲುಪಲು ಇದ್ದ ಆಧಾರವೆಂದರೆ 2001 ರಲ್ಲಿ ನಡೆದ ಇಂಡಿಯಾದ ಜನಗಣತಿಯ ವರದಿ. ಇದರಲ್ಲಿ 10,000 ಜನರಿಗಿಂತ ಕಡಿಮೆ ಜನರು ಮಾತಾಡುತ್ತಿರುವ ನುಡಿಗಳ ಪಟ್ಟಿಯೊಂದನ್ನು ತಯಾರಿಸಿತ್ತು. ಆ ವರದಿಯ ಆಧಾರದ ಮೇಲೆ ಪೀಪಲ್ಸ್ ಲಾಂಗ್ವೆಜ್ ಸರ್ವೆ ಆಫ್ ಇಂಡಿಯಾದ ವರದಿಯು ತಯಾರಾಗಿದೆ. ಈ ಪಟ್ಟಿಗಳಲ್ಲಿರುವ ಮಾಹಿತಿಯು ಸರಿಯೋ ಅಲ್ಲವೋ ಎಂಬುದು ಇಲ್ಲಿ ಮುಖ್ಯವಲ್ಲ. ಆದರೆ ಇಂತಹ ಅಧ್ಯಯನಗಳಿಗೆ ಅಗತ್ಯವಾದ ಅಧ್ಯಯನಗಳ ಕೊರತೆ ಇದೆ ಎಂಬುದನ್ನು ಇಲ್ಲಿ ಗಮನಿಸಬೇಕು. ಯುನೆಸ್ಕೋ ಪಟ್ಟಿಯಲ್ಲಿ ಕರ್ನಾಟಕದಲ್ಲಿ ಕುರುಬ ನುಡಿ ಅಳಿವಿನಂಚಿನಲ್ಲಿದೆ ಎನ್ನಲಾಗಿದೆ. ಈ ಹೆಸರಿನ ಬೇರೆ ನುಡಿ ಕರ್ನಾಟಕದಲ್ಲಿ ಇಲ್ಲ. ಬೆಟ್ಟ ಕುರುಬ, ಕಾಡುಕುರುಬ, ಆಲು ಕುರುಂಬ ಇವೇ ಮೊದಲಾದ ಬುಡಕಟ್ಟುಗಳು ಆಡುವ ನುಡಿಗಳಿಗೆ ಸಂಬಂಧಿಸಿ ಯುನೆಸ್ಕೋ ವರದಿ ಸೂಚಿಸುತ್ತಿರಬಹುದು. ಈ ಮಾಹಿತಿ ನೀಡಿದ್ದೇಕೆಂದರೆ, ಮೇಲೆ ಹೇಳಿದಂತೆ, ವಾಸ್ತವ ಪರಿಸ್ಥಿತಿಯನ್ನು ಅಧ್ಯಯನ ಮಾಡಿ ಇಂತಹ ಪಟ್ಟಿಗಳನ್ನು ತಯಾರಿಸಿರುವುದಿಲ್ಲ ಎನ್ನುವುದನ್ನು ಗಮನಕ್ಕೆ ತರುವುದು. ಸರಕಾರಿ ವರದಿಗಳು, ಪ್ರಾಸಂಗಿಕ ಉಲ್ಲೇಖಗಳನ್ನು ಆಧರಿಸಿ ಪಟ್ಟಿಗಳು ತಯಾರಾಗುತ್ತವೆ. ಅವುಗಳನ್ನು ಕಾಪಿಡುವ ಯೋಜನೆಗಳು ತಯಾರಾಗಿ ಜಾರಿಗೆ ಬರುತ್ತವೆ. ಆ ಬಳಿಕ ಕ್ಷೇತ್ರಕಾರ್ಯದ

ಮೂಲಕ ಸಾಮಗ್ರಿಗಳನ್ನು ಸಂಗ್ರಹಿಸಿ ಇಡಲಾಗುತ್ತದೆ. ನುಡಿಗಳು ಇದರಿಂದ ಉಳಿಯುತ್ತವೋ ಇಲ್ಲವೋ ಎನ್ನುವುದನ್ನು ಗಮನಿಸುವವರು ಯಾರೂ ಇರುವುದಿಲ್ಲ. ನುಡಿಗಳ ಮಾಹಿತಿ ಉಳಿದುಕೊಂಡಾಗಲೂ ಆ ನುಡಿಗಳನ್ನಾಡುವ ಸಮುದಾಯ ಅಳಿದು ಹೋಗಿರಲೂಬಹುದು.

ನುಡಿ ಕಸುವು ಮತ್ತು ನುಡಿಗಳ ಅಳಿವು

ಸಮುದಾಯಗಳೇ ಅಳಿದುಹೋಗಿ ಅವುಗಳು ಬಳಸುತ್ತಿದ್ದ ನುಡಿಗಳು ಇಲ್ಲವಾಗುವ ಪ್ರಸಂಗಗಳು ಮಾನವರ ಚರಿತ್ರೆಯಲ್ಲಿ ಸಂಭವಿಸುತ್ತಿವೆ ಎನ್ನುವುದನ್ನು ಗಮನಿಸಿದ್ದೇವೆ. ಈಗಲೂ ಇಂತಹ ಪ್ರಸಂಗಗಳು ನಡೆಯುತ್ತಿವೆ. ಹಾಗಲ್ಲದೆ ನುಡಿ ಸಮುದಾಯಗಳು ತಮ್ಮ ನುಡಿಯನ್ನು ಬಿಟ್ಟು ಕೊಡುವ, ಇಲ್ಲವೇ ಇನ್ನೊಂದು ನುಡಿಯೊಡನೆ ಬದುಕಬೇಕಾಗಿ ಬರುವ ಸಂದರ್ಭಗಳೂ ಈಗ ಹೆಚ್ಚಿವೆ. ಇಂತಹ ಸಂದರ್ಭಗಳಲ್ಲಿ ತಲೆಮಾರುಗಳು ಕಳೆದಂತೆ ಸಮುದಾಯದ ಮೂಲ ನುಡಿಗಳು ಸೀಮಿತ ಬಳಕೆಗೆ ಒಳಪಡುತ್ತಾ ನಡೆದು ಕೊನೆಗೊಮ್ಮೆ ಇಲ್ಲವಾಗುತ್ತವೆ. ದಿಟವಾಗಿ ಇಂತಹ ಸಂದರ್ಭದಲ್ಲಿ ಏನಾಗುತ್ತದೆ? ಈ ನುಡಿ ಪಲ್ಲಟಕ್ಕೆ ಒಳಗಾಗುತ್ತಿರುವವರು ತಮ್ಮಲ್ಲಿರುವ, ಮಾನವರಿಗೆ ಸಹಜವಾದ ನುಡಿಯ ಕಸುವಿನಲ್ಲಿ ಯಾವ ಬದಲಾವಣೆಯನ್ನೂ ಅನುಭವಿಸುವುದಿಲ್ಲ. ಒಂದು ಚಿತ್ರದ ಮೂಲಕ ಇದನ್ನು ತಿಳಿಯಲು ಯತ್ನಿಸೋಣ.

ಮೆದುಳಿನಲ್ಲಿರುವ ನುಡಿಯ ಕಸುವು--------ಆಡು ನುಡಿ 1

ಮೆದುಳಿನಲ್ಲಿರುವ ನುಡಿಯ ಕಸುವು--------ಆಡು ನುಡಿ 2

ಪ್ರತಿ ಸಮುದಾಯಕ್ಕೂ ಅದರದ್ದೇ ಆದ ಪ್ರತ್ಯೇಕ ನುಡಿ ಕಸುವು ಇರುವುದಿಲ್ಲ. ಆದರೆ ಆ ಸಮುದಾಯದಲ್ಲಿರುವ ಪ್ರತಿ ವ್ಯಕ್ತಿಗೂ ನುಡಿಯ ಕಸುವು ಹುಟ್ಟಿನಿಂದಲೇ ಇರುತ್ತದೆ. ಇದರ ನೆರವಿನಿಂದಲೇ ಮತ್ತು ಸಮುದಾಯದ ಸದಸ್ಯರಾಗಿರುವುದರಿಂದಲೇ ಆ ಸಮುದಾಯದ ಎಲ್ಲ ಸದಸ್ಯರೂ ತಮ್ಮ ಪರಿಸರದ ನುಡಿಯನ್ನು ತಮ್ಮದಾಗಿಸಿಕೊಳ್ಳುತ್ತಾರೆ. ಇದು ಸರಿಯೇ ಸರಿ. ಹೀಗೆ ಪಡೆದುಕೊಂಡ ನುಡಿಯನ್ನು ಬಿಟ್ಟು ಇನ್ನೊಂದು ನುಡಿಯನ್ನು ಬಳಸಲು ತೊಡಗಬೇಕಾದರೆ ವ್ಯಕ್ತಿಯ ಮೆದುಳಿನಲ್ಲಿರುವ ನುಡಿಯ ಕಸುವು ನೆರವಿಗೆ ಬರಲೇ ಬೇಕು. ಅದರ ಕ್ರಿಯಾಶೀಲತೆಯನ್ನು ನುಡಿಪಲ್ಲಟಕ್ಕೆ ಒಳಗಾಗುವ ವ್ಯಕ್ತಿ ಕಳೆದುಕೊಳ್ಳುವುದಿಲ್ಲ.ಮೆದುಳಿನಲ್ಲಿರುವ ಹುಟ್ಟಿನಿಂದ ಬಂದ ನುಡಿಯ ಕಸುವನ್ನು ಬಳಸಿ ಮೊದಲು ಬಳಸುತ್ತಿದ್ದ ನುಡಿಯ ಜೊತೆಗೆ ಇಲ್ಲವೇ ಅದರ ಬದಲು ಇನ್ನೊಂದು ನುಡಿಯನ್ನು ವ್ಯಕ್ತಿಗಳು ಬಳಸತೊಡಗುತ್ತಾರೆ. ಇದು ಇಡೀ ಸಮುದಾಯದಲ್ಲಿ ಒಮ್ಮೆಗೇ ಸಂಭವಿಸುವ ಸಂಗತಿಯಲ್ಲ.

ಈ ಸಂಗತಿಯನ್ನು ಏಕೆ ಗಮನಿಸಬೇಕು? ನುಡಿಯೊಂದು ಅಳಿದರೆ ವ್ಯಕ್ತಿಯಲ್ಲಿ ಅಂತಸ್ಥವಾಗಿರುವ ನುಡಿಯ ಕಸುವು ಅಳಿಯುವುದಿಲ್ಲ. ಅದು ಇನ್ನೊಂದು ನುಡಿಯನ್ನು

ಬಳಸಲು ಸಿದ್ದವಾಗಿರುತ್ತದೆ. ಆದರೆ ಒಂದು ನುಡಿಯನ್ನು ಕಳೆದುಕೊಂಡು ಇನ್ನೊಂದು ನುಡಿಯನ್ನು ಬಳಸಬೇಕಾಗುವ ಪ್ರಸಂಗ ವ್ಯಕ್ತಿಗೆ ಏಕಾಏಕಿ ಒದಗುವುದಿಲ್ಲ. ಯುದ್ಧ ಖೈದಿಗಳಿಗೆ, ಸಂಕಷ್ಟಗಳಿಗೆ ಸಿಲುಕಿ ಒತ್ತಾಯಪೂರ್ವಕವಾಗಿ ವಲಸೆ ಹೋದವರಿಗೆ ಇಂತಹ ಅನುಭವ ಆಗಬಹುದು. ಅಂತಹ ಸಂದರ್ಭಗಳನ್ನು ಹೊರತು ಪಡಿಸಿದರೆ ನುಡಿ ಪಲ್ಲಟ ಎನ್ನುವುದು ಎಲ್ಲಿಯೂ ತಟಕ್ಕನೆ ಸಂಭವಿಸುವುದಿಲ್ಲ. ಈ ಪಲ್ಲಟ ನಡೆಯುವ ಸಂದರ್ಭದಲ್ಲಿ ವ್ಯಕ್ತಿಗಳಿಗಾಗಲಿ, ಸಮುದಾಯಕ್ಕಾಗಲಿ ಅರಿವಿನ ವಿಕಾಸದಲ್ಲಿ ಏನಾದರೂ ಬಿಕ್ಕಟ್ಟು ಉಂಟಾಗುತ್ತದೆಯೋ ಎಂಬುದನ್ನು ಪರಿಶೀಲಿಸಬೇಕು. ನುಡಿ ಪಲ್ಲಟವು ಸಮುದಾಯದ ಆಯ್ಕೆಯಾಗಿರುತ್ತದೋ ಅಥವಾ ಹೊರಗಿನ ಒತ್ತಾಯದಿಂದ ಸಂಭವಿಸಿರುತ್ತದೋ ಎನ್ನುವುದನ್ನು ಗಮನಿಸಬೇಕು. ರಾಜಕೀಯವಾಗಿ ಹೊರಗಿನ ಅಧಿಕಾರ ಕೇಂದ್ರಕ್ಕೆ ಅಧೀನವಾಗುವ, ಸಮುದಾಯವು ತಾನು ಇರುವ ಪ್ರದೇಶದಲ್ಲೇ ತನ್ನ ನುಡಿಯನ್ನು ಹಂತ ಹಂತವಾಗಿ ಕಳೆದುಕೊಂಡು ಇನ್ನೊಂದು ನುಡಿಯನ್ನು ತನ್ನದನ್ನಾಗಿಸಿಕೊಳ್ಳುವ ಬಗೆ ಒಂದು ಕಡೆ. ಇನ್ನೊಂದು ಕಡೆ ಬೇರೊಂದು ದೇಶಕ್ಕೆ, ಬೇರೆ ನುಡಿಯಾಡುವ ಪ್ರದೇಶಕ್ಕೆ ವಲಸೆ ಹೋಗುವ ಸಮೂಹವು ತನ್ನ ನುಡಿಯನ್ನು ಕಳೆದುಕೊಂಡು ಆ ಪ್ರದೇಶದ ನುಡಿಯನ್ನು ತನ್ನದನ್ನಾಗಿಸಿಕೊಳ್ಳುವ ಬಗೆ. ಇವೆರಡೂ ಬಗೆಗಳಲ್ಲಿ ವ್ಯತ್ಯಾಸಗಳಿವೆ.ಈ ವ್ಯತ್ಯಾಸ ಇವುಗಳು ಕ್ರಿಯಾಶೀಲವಾಗುವ ರೀತಿಯಲ್ಲಿ ಮಾತ್ರವಲ್ಲದೆ ಉಂಟು ಮಾಡುವ ಪರಿಣಾಮದಲ್ಲೂ ಕೂಡ ಕಾಣಿಸಿಕೊಳ್ಳುತ್ತದೆ.

ನುಡಿ ಸಮುದಾಯವೊಂದು ತಾನಿರುವ ಪ್ರದೇಶದಲ್ಲೇ ಅಧೀನತೆಗೆ ಒಳಪಟ್ಟು ಇನ್ನೊಂದು ನುಡಿಗೆ ಪಲ್ಲಟವಾಗುವ ಸಂದರ್ಭ ತುಂಬಾ ಸಂಕೀರ್ಣವಾದುದು. ಹತ್ತೊಂಬತ್ತನೆಯ ಶತಮಾನದಲ್ಲಿ ಮೇಜಿ ಪ್ರಭುತ್ವವು ರೈಕ್ಯು ದ್ವೀಪಗಳನ್ನು ಜಪಾನ್ ದೇಶದ ಆಧಿಪತ್ಯಕ್ಕೆ ಒಳಪಡಿಸಿಕೊಂಡ ಸಂದರ್ಭವನ್ನು ಉದಾಹರಣೆಯನ್ನಾಗಿ ನೋಡಬಹುದು. ರೈಕ್ಯು ದ್ವೀಪ ಸಮೂಹದಲ್ಲಿದ್ದ ನುಡಿಯ ಜಾಗದಲ್ಲಿ ಜಪಾನಿ ನುಡಿಯನ್ನು ನೆಲೆಗೊಳಿಸಲು ಮೇಜಿ ಪ್ರಭುತ್ವವು ನಡೆಸಿದ ಪ್ರಯತ್ನಗಳು ವಿಶಿಷ್ಟವಾಗಿವೆ. ರೈಕ್ಯು ನುಡಿಯನ್ನು ಬಳಸುತ್ತಿದ್ದ ಸ್ಥಳೀಯ ಶ್ರೀಮಂತ ವರ್ಗದ ಹಿತಾಸಕ್ತಿಯನ್ನು ಕಾಯ್ದುಕೊಳ್ಳುವ ಉದ್ದೇಶದಿಂದ ಕೆಲವು ಬಳಕೆಯ ವಲಯಗಳಲ್ಲಿ ಅದೇ ನುಡಿಯನ್ನು ಮುಂದುವರೆಸಲು ಸಮ್ಮತಿಯನ್ನು ನೀಡಲಾಯಿತು. ರೈಕ್ಯು ನಾಡನ್ನು ವಶಪಡಿಸಿಕೊಳ್ಳುವುದರ ವಿರುದ್ಧ ಜಪಾನಿನಲ್ಲೇ ಇದ್ದ ಭಿನ್ನ ದನಿಯನ್ನು ತಣಿಸುವ ಉದ್ದೇಶವೂ ಈ ನಡೆಯ ಹಿಂದೆ ಇದ್ದಿತು. ಹಂತ ಹಂತವಾಗಿ ಶಿಕ್ಷಣ ಮತ್ತು ಆಡಳಿತ ವಲಯಗಳಲ್ಲಿ ಜಪಾನಿ ನುಡಿಯ ಬಳಕೆಯನ್ನು ಮೊದಲು ಮಾಡಿ, ಕೊನೆಗೆ ಕೆಲವೇ ದಶಕಗಳಲ್ಲಿ ರೈಕ್ಯು ನುಡಿಯನ್ನಾಡುವವರೆಲ್ಲರೂ ಜಪಾನಿ ನುಡಿಗೆ ಪಲ್ಲಟಗೊಳ್ಳುವಂತೆ ಮಾಡಲಾಯಿತು. ಇಂತಹ ಕಡೆಗಳಲ್ಲಿ ನುಡಿ ಪಲ್ಲಟಕ್ಕೆ ಅಧೀನ ಸಮುದಾಯಗಳೇ ಒಪ್ಪಿಗೆ ನೀಡಿದವು ಎನ್ನುವಂತೆ ಬಿಂಬಿಸಲಾಗುತ್ತದೆ. ಪ್ರತಿಭಟನೆಯ ಮೂಲಕ ತಮ್ಮ ನುಡಿಯನ್ನು ಕಾಯ್ದುಕೊಳ್ಳುವ ಯತ್ನಗಳನ್ನು ದಿನಗಳೆದಂತೆ ದುರ್ಬಲವಾಗುವಂತೆ ಮಾಡಲಾಗುತ್ತದೆ. ತಮ್ಮ ಮೂಲ ನುಡಿಯನ್ನು 'ಕಳೆದು'ಕೊಂಡ ಹಳಹಳಿಕೆ ಸಮುದಾಯದಲ್ಲಿ

ಉಳಿದುಕೊಳ್ಳುತ್ತದೆ. ಆದರೆ ಅದು ಕೂಡ ಕಾಲ ಸರಿದಂತೆ ಇಲ್ಲವಾಗುತ್ತದೆ. ಇಲ್ಲಿ ರೈಕ್ಯು ನುಡಿ ಅಳಿದುಹೋದ ಸಂದರ್ಭವಿದೆ. ಆದರೆ ಆ ನುಡಿಯನ್ನು ಆಡುತ್ತಿದ್ದವರಲ್ಲಿ ಇದ್ದ ನುಡಿಯ ಕಸುವು ಅಳಿದಿಲ್ಲ. ಇನ್ನೊಂದು ನುಡಿಯನ್ನು ಅವರು ಪಡೆದುಕೊಳ್ಳಲು ಅದು ನೆರವಾಗಿಬಂದಿದೆ.

ಇನ್ನು ವಲಸೆ ಹೋದ ಸಮುದಾಯಗಳಲ್ಲಿ ನಡೆಯುವ ನುಡಿ ಪಲ್ಲಟವನ್ನು ನೋಡೋಣ. ಇಲ್ಲಿಯೂ ಇಂತಹ ಸಮುದಾಯಗಳು ಎರಡು ಬಗೆಗಳಲ್ಲಿ ವರ್ತಿಸುತ್ತವೆ. ತಾವೇ ಹೊಸ ಪರಿಸರದ ನುಡಿಯನ್ನು ಒಪ್ಪಿಕೊಂಡು ಹಂತ ಹಂತವಾಗಿ, ಒಂದೆರಡು ತಲೆಮಾರುಗಳಲ್ಲಿ, ಆ ನುಡಿಗೆ ಪಲ್ಲಟಗೊಳ್ಳುವುದು ಒಂದು ರೀತಿ. ಹೀಗೆ ವಲಸೆ ಹೋದ ಸಮೂಹವನ್ನು ಒತ್ತಾಯದಿಂದ ಪರಿಸರದ ನುಡಿಗೆ ಪಲ್ಲಟಗೊಳ್ಳುವಂತೆ ಮಾಡುವುದು ಮತ್ತೊಂದು ರೀತಿ. ಯುರೋಪಿನ ವಿವಿಧ ನಾಡುಗಳಿಗೆ ವಲಸೆ ಹೋದ ಮಧ್ಯ ಪ್ರಾಚ್ಯದ ಜನರನ್ನು ಹೀಗೆ ಯುರೋಪಿನ ನುಡಿಗಳಿಗೆ ಪಲ್ಲಟಗೊಳಿಸುವ ಯತ್ನಗಳು ನಡೆದಿವೆ. ಇಂತಹ ಕಾರ್ಯಯೋಜನೆಗಳನ್ನು ನುಡಿ ಹೊಂದಾಣಿಕೆ (ಲಾಂಗ್ವೆಜ್ ಇಮ್ಮರ್ಶನ್ ಎಂಬುದಕ್ಕೆ ಸಂವಾದಿಯಾಗಿ ಬಳಸುತ್ತಿರುವ ಪದ. ಇದು ಅಷ್ಟು ಸರಿಯಾದ ಪದವಲ್ಲ ಎಂದು ನನಗೆ ತಿಳಿದಿದೆ) ಎನ್ನುತ್ತಾರೆ. ಅಂದರೆ ವಲಸೆ ಬಂದವರು ತಮ್ಮ ಜೀವನ ನಿರ್ವಹಣೆಗಾಗಿ ಮಾಡಿಕೊಳ್ಳುವ ಹಲವು ಹೊಂದಾಣಿಕೆಗಳಲ್ಲಿ ತಮ್ಮ ನುಡಿಯನ್ನು ಬಿಟ್ಟುಕೊಟ್ಟು ಪರಿಸರದ ನುಡಿಗೆ ಪಲ್ಲಟಗೊಳ್ಳುವದೂ ಒಂದಾಗಿದೆ. ಈ ಕಾರ್ಯಯೋಜನೆಯಲ್ಲಿ ವಲಸೆ ಬಂದವರ ಮಕ್ಕಳು ಒತ್ತಾಯಪೂರ್ವಕವಾಗಿ ಪರಿಸರದ ನುಡಿಯನ್ನು ಕಲಿಯುವಂತೆ ಮಾಡಲಾಗುತ್ತದೆ. ಇದರ ಜೊತೆಗೆ ತಮ್ಮ ಮೂಲ ನುಡಿಯನ್ನು ಹೆಚ್ಚು ವಲಯಗಳಲ್ಲಿ ಬಳಸದಂತೆ ಒತ್ತಾಯಿಸಲಾಗುತ್ತದೆ. ಇದರಿಂದ ತೀವ್ರಗತಿಯಲ್ಲಿ ನುಡಿ ಪಲ್ಲಟ ನಡೆಯುವುದು ಸಾಧ್ಯ.

ಹೀಗೆ ನುಡಿ ಪಲ್ಲಟ ಜರುಗುವಲ್ಲಿ ವಲಸೆ ಸಮುದಾಯಗಳು ತಮ್ಮ ಮೂಲ ನುಡಿಯ ನಂಟನ್ನು ಇಡಿಯಾಗಿ ಕಳೆದುಕೊಳ್ಳುವುದಿಲ್ಲ. ತೀರಾ ಆಪ್ತವಲಯಗಳಲ್ಲಿ. ಮನೆಯೊಳಗಣ ಆಚರಣೆಗಳಲ್ಲಿ ಆ ನುಡಿಯನ್ನು ಉಳಿಸಿಕೊಳ್ಳುತ್ತವೆ. ಇದೂ ಕೂಡ ತಲೆಮಾರುಗಳು ಕಳೆದಂತೆ ಕೇವಲ ನೆನಪಾಗಿ ಮಾತ್ರ ಉಳಿಯುತ್ತದೆ. ವಲಸೆ ಬಂದ ಜನರು ಬೇರೊಂದು ಪ್ರದೇಶದಿಂದ ಬಂದವರಾದ್ದರಿಂದ ಇವರು ತೊರೆದು ಬಂದ ಆ ಪ್ರದೇಶದಲ್ಲಿ ಈ ನುಡಿ ಬಳಕೆಯಲ್ಲಿ ಇದ್ದೇ ಇರುವುದಷ್ಟೆ ಹಾಗಾಗಿ ಇದು ನುಡಿ ಅಳಿವಿನ ಪ್ರಸಂಗವೆಂದು ಪರಿಗಣಿತವಾಗುವುದಿಲ್ಲ. ವಲಸೆ ಹೋದ ಸಮುದಾಯಗಳು ತಮ್ಮ ನುಡಿ ಮತ್ತು ಪರಿಸರದ ನುಡಿಗಳ ನಡುವೆ ಉಂಟಾಗುವ ಮುಖಾಮುಖಿಯನ್ನು ನಿರ್ವಹಿಸುವ ಬಗೆಗೆ ಹಲವು ನೆಲೆಗಳಿವೆ. ಅದೆಲ್ಲವೂ ಇಲ್ಲಿ ಮುಖ್ಯವಲ್ಲ. ಆದರೆ ವಲಸೆಗಾರರು ತಮ್ಮ ನುಡಿಯನ್ನು ಇನ್ನೊಂದು ನುಡಿಗಾಗಿ ತೊರೆಯುತ್ತಾರೆ. ಆದರೂ ಅವರಲ್ಲಿ ನುಡಿಯ ಕಸುವು ಉಳಿದೇ ಇರುತ್ತದೆ ಎನ್ನುವುದನ್ನು ಮಾತ್ರ ಇಲ್ಲಿ ಗಮನಿಸಿದರೆ ಸಾಕು. ಈ ಪಲ್ಲಟ ಪೂರ್ಣಗೊಳ್ಳಲು ಎರಡರಿಂದ ಮೂರು ತಲೆಮಾರುಗಳಾದರೂ

ಬೇಕಾಗುತ್ತದೆ. ಈ ಕಾಲಾವಧಿಯಲ್ಲಿ ವಲಸೆ ಸಮುದಾಯದ ನುಡಿಗಳು ಹಂತಹಂತವಾಗಿ ಬದಲಾಗುತ್ತವೆ. ಒಂದು ಉದಾಹರಣೆಯನ್ನು ನೋಡೋಣ.

ಉತ್ತರ ಅಮೆರಿಕಾ ದೇಶಕ್ಕೆ ವಲಸೆ ಹೋದ ಗುಜರಾತಿ ಸಮುದಾಯದಿಂದ ಈ ಉದಾಹರಣೆಯನ್ನು ತೆಗೆದುಕೊಳ್ಳೋಣ. ವಲಸೆ ಹೋಗುವ ಹೊತ್ತಿಗೆ ಅರ್ಧ ವಯಸ್ಸು ಕಳೆದಿರುವ ವೃದ್ಧರೊಬ್ಬರು ಮೊಮ್ಮಗನ ಜೊತೆಗೆ ಕಿರಾಣಿ ಅಂಗಡಿಗೆ ಹೋಗುತ್ತಾರೆಂದುಕೊಳ್ಳಿ. ಅಂಗಡಿಯ ಕೌಂಟರ್‌ನಲ್ಲಿ ಇರುವ ವ್ಯಕ್ತಿಯೊಡನೆ ಇಂಗ್ಲಿಶ್ ನುಡಿಯಲ್ಲಿ ಮಾತಾಡಲಾಗದ ಈ ವೃದ್ಧರು ತಮ್ಮ ಮೊಮ್ಮಗನನ್ನು ಆಶ್ರಯಿಸುತ್ತಾರೆ. ಇವರು ಗುಜರಾತಿಯಲ್ಲಿ ಹೇಳಿದ್ದನ್ನು ಮೊಮ್ಮಗ ಇಂಗ್ಲಿಶ್ ನುಡಿಯಲ್ಲಿ ಕೌಂಟರ್ ಆಚೆ ಇರುವ ವ್ಯಕ್ತಿಗೆ ತಿಳಿಸುತ್ತಾನೆ. ಆ ವ್ಯಕ್ತಿ ಇಂಗ್ಲಿಶ್ ನುಡಿಯಲ್ಲಿ ಹೇಳಿದ್ದು ವೃದ್ಧರಿಗೆ ಅರ್ಥವಾಗುತ್ತದೆ. ಇದೇ ಮೊಮ್ಮಗ ತನ್ನ ನಂತರಲ್ಲಿ ಒಬ್ಬರೊಡನೆ ಗುಜರಾತಿಯಲ್ಲೇ ಮಾತಾಡಬೇಕಾಗಿ ಬಂದರೆ ಆತ ಹರುಕುಮುರುಕು ವಾಕ್ಯಗಳಲ್ಲಿ ಗುಜರಾತಿಯನ್ನು ಬಳಸುತ್ತಾನೆ. ಅಂದರೆ ವೃದ್ಧರಲ್ಲಿ ಇಂಗ್ಲಿಶ್ ನುಡಿಗೆ ಸಂಬಂಧಿಸಿದಂತೆ ಕೇಳಿ ತಿಳಿಯುವ ಕೌಶಲವಿದೆ. ಆದರೆ ಅವರು ಆ ನುಡಿಯನ್ನು ಮಾತಾಡಲಾರರು. ಮೊಮ್ಮಗನಿಗೆ ಗುಜರಾತಿ ನುಡಿಗೆ ಸಂಬಂಧಿಸಿದಂತೆ ಇದೇ ಕೌಶಲವಿದೆ. ಕೇಳಿದರೆ ಅದರ ಅರ್ಥ ಗೊತ್ತಾಗುತ್ತದೆ. ಆದರೆ ಗುಜರಾತಿಯನ್ನು ಮಾತಾಡಲಾರ. ಹೀಗೆ ಎರಡು ನುಡಿಗಳಲ್ಲಿ ಕೌಶಲ ಎರಡು ತಲೆಮಾರಿನಲ್ಲಿ ಹಂಚಿ ಹೋಗಿದ್ದರೂ ಆ ತಲೆಮಾರುಗಳ ನಡುವೆ ನುಡಿ ಸಂಪರ್ಕಕ್ಕೆ ಅಡ್ಡಿಯೇನೂ ಉಂಟಾಗುವುದಿಲ್ಲ.

ತಲೆಮಾರುಗಳು ಹೀಗೆ ಒಂದು ನುಡಿಯಿಂದ ಇನ್ನೊಂದು ನುಡಿಗೆ ಪಲ್ಲಟಗೊಳ್ಳಬೇಕಾಗಿ ಬರುವ ಸಂದರ್ಭ ತಂದೊಡ್ಡುವ 'ಹಿಂಸೆ'ಯನ್ನು ಬದಿಗೆ ಸರಿಸಿ ಮಾತಾಡುವಂತಿಲ್ಲ. ಈ ಹಿಂಸೆಯು, ಮಾನವ ಜನಾಂಗ ಹಲವಾರು ಬಗೆಯಲ್ಲಿ ನಿರಂತರವಾಗಿ ಅನುಭವಿಸುತ್ತಿರುವ ಬಗೆಬಗೆಯ ಹಿಂಸೆಗಳಲ್ಲಿ ಒಂದು ಬಗೆಯದ್ದಾಗಿದೆ. ಇದು ಸಮುದಾಯಗಳ ಆಯ್ಕೆಯಾಗಿರಲಿ, ಸಂದರ್ಭದ ಒತ್ತಡಗಳಿಂದ ಉಂಟಾದ ಪರಿಸ್ಥಿತಿ ಇರಲಿ ನುಡಿ ಪಲ್ಲಟ ಎನ್ನುವುದು ಅದನ್ನು ಅನುಭವಿಸುತ್ತಿರುವ ಸಮುದಾಯಗಳಿಗೆ ಒದಗಿದ ಬಿಕ್ಕಟ್ಟು. ಇದು ಸಮುದಾಯಗಳ ಸಾಮರ್ಥ್ಯಗಳ ಬಳಕೆಗೆ ಬಂದೊದಗಿದ ಸಂಕೋಲೆಯೇ ಸರಿ. ಆದರೆ ಇದು ನಾಗರಿಕತೆಯು ಆಯ್ದುಕೊಂಡ, ಇಲ್ಲವೇ ಜನರ ಮುಂದಿರಿಸಿದ ದಾರಿ. ಇದರಿಂದ ಬಿಡುಗಡೆ ಇದ್ದಂತಿಲ್ಲ. ಈಗಾಗಲೇ ಗಮನಿಸಿದಂತೆ ವಲಸೆ ಸಮುದಾಯಗಳ ನುಡಿ ಪಲ್ಲಟಗಳು ನುಡಿಗಳ ಅಳಿವಿಗೆ ನಿದರ್ಶನಗಳಲ್ಲ. ಏಕೆಂದರೆ ನುಡಿ ಸಮುದಾಯ ತನ್ನ ಮೂಲ ನೆಲೆಯಲ್ಲಿ, ಅಂದರೆ ತಾನು ತೊರೆದು ಬಂದ ನಾಡಿನಲ್ಲಿ ಆ ನುಡಿಯನ್ನು ಬಳಸುತ್ತಲೇ ಇರುತ್ತದೆ.

ವಲಸೆ ಸಮುದಾಯಗಳಲ್ಲಿ ನಡೆಯುವ ಈ ನುಡಿ ಪಲ್ಲಟದಿಂದ ಆ ಸಮುದಾಯ ತನ್ನ ಮೂಲ ನುಡಿಯನ್ನು ಬಿಟ್ಟುಕೊಡುತ್ತದೆ. ಆದರೆ ಅದರ ಸಾಂಸ್ಕೃತಿಕ ನೆನಪುಗಳಿಗೆ ಧಕ್ಕೆ ಉಂಟಾಗುತ್ತದೆ ಎನ್ನುವ ಮಾತಿಗೆ ಇಂತಹ ಸಂದರ್ಭಗಳಲ್ಲಿ ಬೇರೆ ನೆಲೆ ಒದಗುತ್ತದೆ. ಏಕೆಂದರೆ ಕಳೆದುಕೊಳ್ಳುತ್ತಿರುವ ನುಡಿಗೆ ಸಂಬಂಧಿಸಿದ ನೆನಪುಗಳನ್ನು

ಹೇಗೋ ಕಾಯ್ದುಕೊಳ್ಳಲು ಇಂತಹ ಸಮುದಾಯಗಳು ಯತ್ನಿಸುತ್ತಿರುತ್ತವೆ. ತಮ್ಮ ನೆನಪುಗಳನ್ನು ಆಚರಣೆಗಳ ಮೂಲಕ ಪುನರಭಿನಯಿಸುತ್ತಿರುತ್ತವೆ. ಅವುಗಳನ್ನು ಹೇಗೂ ಜೀವಂತವಿರಿಸಿಕೊಳ್ಳಲು ಹೆಣಗುತ್ತಿರುತ್ತವೆ.

ಕೊನೆಗೆ:

ನುಡಿಗಳು ಅಳಿಯುವ ಪ್ರಕ್ರಿಯೆಯನ್ನು ಈ ಬರಹ ಅಲ್ಲಗಳೆಯುವುದಿಲ್ಲ. ಆದರೆ ನುಡಿಗಳ ಅಳಿವನ್ನು ಒಟ್ಟು ಮಾನವ ವ್ಯಾಪಾರದಿಂದ ಬೇರೆಯಾಗಿರಿಸಿ ನೋಡುವುದನ್ನು ಒಪ್ಪುವುದಿಲ್ಲ. ನುಡಿಗಳನ್ನು ಆಡುವವರನ್ನು ಮತ್ತು ನುಡಿಗಳನ್ನು ಬೇರೆ ಬೇರೆಯಾಗಿರಿಸಿ ಕೇವಲ ನುಡಿಗಳನ್ನು ಕಾಪಿಡುವ ಯೋಜನೆಗಳನ್ನು ರೂಪಿಸುವ ಯೋಜನೆಗಳ ಕೊರತೆಗಳನ್ನು ಗುರುತಿಸುವುದು ಅಗತ್ಯ.

ನುಡಿಗಳ ವ್ಯಾಪಾರ ಕೇವಲ ಮಾತನಾಡುವವರ ಸಂಖ್ಯೆ ಕಡಿಮೆಯಾಗುತ್ತಿರುವ ನುಡಿಗಳಿಗೆ ಮಾತ್ರ ಸಂಬಂಧಪಟ್ಟಿರುವುದಿಲ್ಲ. ಅದೊಂದು ಸಂಕೀರ್ಣವಾದ ಜಗತ್ತು. ಇದರಲ್ಲಿ ಹಲವು ಬಗೆಯ ಪರಸ್ಪರ ಪೂರಕ ಸಂಗತಿಗಳಿರುತ್ತವೆ; ಒಂದಕ್ಕೊಂದು ವಿರೋಧವೆನಿಸುವ ಸಂಗತಿಗಳೂ ಇರುತ್ತವೆ. ಇವೆಲ್ಲವನ್ನೂ ಒಟ್ಟಿಗಿರಿಸಿ ನೋಡಬೇಕಿದೆ.

ಈ ಬರಹದಲ್ಲಿ ಉಲ್ಲೇಖಗೊಂಡ ಚಿಂತಕರು:

ಯೋಹಾನ್ ಜಾರ್ಜ್ ಹಮನ್: (1730–1788) ಹದಿನೆಂಟನೆಯ ಶತಮಾನದ ಜರ್ಮನ್ ತತ್ವಶಾಸ್ತ್ರಜ್ಞ, ಕಾಂಟ್, ಗಯತೆ, ಕಿರ್ಕೆಗಾರ್ಡ್ ಮುಂತಾದವರು ಈತನನ್ನು ಆ ಕಾಲದ ಮಹಾನ್ ಚಿಂತಕನೆಂದು ಗುರುತಿಸುತ್ತಾರೆ. ಜ್ಞಾನೋದಯ ಯುಗ ಮತ್ತು ರೊಮ್ಯಾಂಟಿಕ್ ಯುಗದ ಚಿಂತನೆಗಳ ಸುಳಿವುಗಳು ಇವನಲ್ಲಿ ಕಾಣಸಿಗುತ್ತವೆ ಎಂಬುದು ಅಧ್ಯಯನಕಾರರ ಅಭಿಮತ. 'ತರ್ಕವೇ ಭಾಷೆ' ಎಂಬುದು ಆತನ ಒಂದು ಪ್ರಸಿದ್ಧ ನಿಲುವು. ಈ ನಿಲುವು ಮುಂದೆ ಹಲವು ನೆಲೆಗಳಲ್ಲಿ ವಿಕಸನಗೊಂಡದ್ದನ್ನು ಕಾಣುತ್ತೇವೆ.

ಯೋಹಾನ್ ಗಾಟ್‌ಫ್ರೈಡ್ ಹರ್ಡರ್: (1744–1803) ಹದಿನೆಂಟನೆಯ ಶತಮಾನದ ಜರ್ಮನ್ ಚಿಂತಕ. ಭಾಷೆಯ ಉಗಮವನ್ನು ಕುರಿತಂತೆ ಕೃತಿಯೊಂದನ್ನು ರಚಿಸಿದ್ದಾನೆ. ನುಡಿಯು ಆಲೋಚನೆಯ ಸಾಧನ ಎಂಬುದು ಅವನ ನಿಲುವು. ನುಡಿಗೂ ಆ ನುಡಿಯನ್ನಾಡುವ ಸಮುದಾಯದ ಚಿಂತನಾಕ್ರಮಕ್ಕೂ ನಂಟು ಇರುವುದೆಂಬ ಪ್ರಮೇಯವನ್ನು ಈತ ಪ್ರತಿಪಾದಿಸಿದನು. ಇವನ ನಿಲುವನ್ನು ಮುಂದಿನವರು ತಪ್ಪಾಗಿ ಅರ್ಥೈಸಿದ್ದಾರೆಂದು ಹೇಳಲಾಗಿದೆ. ಆತ ನುಡಿಯು ಚಿಂತನೆಯನ್ನು ನಿಯಂತ್ರಿಸುತ್ತದೆಂದು ಪ್ರತಿಪಾದಿಸಲಿಲ್ಲ. ನುಡಿಗೂ ಅದು ಒದಗಿಸುವ ಚೌಕಟ್ಟಿಗೂ ಸಮುದಾಯದ ಚಿಂತನೆಗಳಿಗೂ ಸಂಬಂಧವಿದೆ ಎಂಬುದಷ್ಟೇ ಅವನ ನಿಲುವಾಗಿತ್ತು.

ವಿಲ್‌ಹೆಲ್ಮ್ ವಾನ್ ಹಂಬೋಲ್ಟ್ (1767–1835) ಜರ್ಮನಿಯ ಹೆಸರಾಂತ ಚಿಂತಕ. ನುಡಿಗಳ ಅಧ್ಯಯನದಲ್ಲಿ ತೊಡಗಿಸಿಕೊಂಡಿದ್ದವನು. ಬಾಸ್ಕ್ ಗುಂಪಿನ ನುಡಿಗಳನ್ನು ವಿವರವಾಗಿ ಅಧ್ಯಯನ ಮಾಡಿದುದಲ್ಲದೆ,ತನ್ನ ಜೀವಿತಾವಧಿಯ ಕೊನೆಯ ಹಂತದಲ್ಲಿ ಜಾವಾ ದ್ವೀಪದ ಕಾವಿ ನುಡಿಯ ಬಗೆಗೆ ತನ್ನ ಅಧ್ಯಯನವನ್ನು ಪೂರೈಸಿದ್ದನು. ಅವನು ತೀರಿಕೊಂಡ ಬಳಿಕ ಪ್ರಕಟಗೊಂಡ ಅವನ 'ದ ಹೆಟ್ರೋಜಿನಿಟಿ ಆಫ್ ಲಾಂಗ್ವೆಜ್ ಅಂಡ್ ಇಟ್ಸ್ ಇನ್‌ಫ್ಲುಯೆನ್ಸ್ ಆನ್ ದ ಇಂಟೆಲೆಕ್ಚುಯಲ್ ಡೆವೆಲೆಪ್‌ಮೆಂಟ್ ಆಫ್ ಮ್ಯಾನ್‌ಕೈಂಡ್' ಕೃತಿಯಲ್ಲಿ ಮಾನವರ ನುಡಿ ಎಂಬುದು ಕೇವಲ ಉಲಿ ಮತ್ತು ಪದಗಳ ಸಂಗ್ರಹವಲ್ಲ; ಅದೊಂದು ನಿಯಮಗಳ ವ್ಯವಸ್ಥೆ ಎಂದು ಪ್ರತಿಪಾದಿಸಿದನು. ಮಾನವರ ಚಿಂತನಾ ಕ್ರಮದ ಮೇಲೆ ಅವರು ಆಡುವ ನುಡಿಯ ರಚನೆಯ ಪ್ರಭಾವವಿರುವುದನ್ನು ಆತ ಗುರುತಿಸಿದ್ದನು; ಅದನ್ನು ಪ್ರತಿಪಾದಿಸಲು ಬೇಕಾದ ಚೌಕಟ್ಟುಗಳನ್ನು ರೂಪಿಸುತ್ತಿದ್ದನು.

ಸ್ಟೀವನ್ ಪಿಂಕರ್ (1954–) ಕೆನಡಾ ದೇಶದ ಕ್ವಿಬೆಕ್ ಪ್ರಾಂತ್ಯದಲ್ಲಿ ಹುಟ್ಟಿದವರು. ಅಮೆರಿಕಾದ ಹಾರ್ವರ್ಡ್ ವಿಶ್ವವಿದ್ಯಾಲಯದಲ್ಲಿ ಪ್ರಾಧ್ಯಾಪಕ. ಎವಲ್ಯೂಶನರಿ ಸೈಕಾಲಜಿಯಲ್ಲಿ ತಜ್ಞತೆ. ವಾಕ್ಪಟು. 'ದ ಲಾಂಗ್ವೆಜ್ ಇನ್‌ಸ್ಟಿಂಕ್ಟ್', 'ವರ್ಡ್ಸ್ ಅಂಡ್ ರೂಲ್ಸ್: ಇನ್‌ಗ್ರೇಡಿಯಂಟ್ಸ್ ಆಫ್ ಲಾಂಗ್ವೆಜ್', 'ದ ಬ್ಲಾಂಕ್ ಸ್ಲೇಟ್: ಮಾಡರ್ನ್ ಡಿನಯಲ್ ಆಫ್ ಹ್ಯೂಮನ್ ನೇಚರ್' ಮುಂತಾದವು ಇವರ ಪ್ರಮುಖ ಕೃತಿಗಳು

ಎಡ್ವರ್ಡ್ ಸಪೀರ್ (1884–1939) ಜರ್ಮನ್ ದೇಶದಲ್ಲಿ ಹುಟ್ಟಿದವನು. ಅಮೆರಿಕಾಕ್ಕೆ ಪಾಲಕರು ವಲಸೆ ಹೋದದ್ದರಿಂದ ಅಲ್ಲಿ ವಿದ್ಯಾಭ್ಯಾಸ ಮಾಡಿದನು. ಚಿಕಾಗೋ ವಿಶ್ವವಿದ್ಯಾಲಯದಲ್ಲಿ ನಿಡುಗಾಲ ಪ್ರಾಧ್ಯಾಪಕನಾಗಿದ್ದನು. ಜೀವಿತಾವಧಿಯ ಕೊನೆಗಾಲದಲ್ಲಿ ಯೇಲ್ ವಿಶ್ವವಿದ್ಯಾಲಯದಲ್ಲಿ ಕಾರ್ಯ ನಿರ್ವಹಣೆ.

ಬೆಂಜಮಿನ್ ವೂರ್ಫ್ (1897–1941) ಶೈಕ್ಷಣಿಕವಾಗಿ ನುಡಿಯರಿಮೆಯನ್ನು ಅಧ್ಯಯನ ಮಾಡಲಿಲ್ಲ. ಹವ್ಯಾಸವಾಗಿ ನುಡಿಗಳನ್ನು ಅಧ್ಯಯನ ಮಾಡಲು ತೊಡಗಿದವನು. ಎಡ್ವರ್ಡ್ ಸಪೀರನ ಸಂಪರ್ಕಕ್ಕೆ ಬಂಧ ಮೇಲೆ ಈ ಅಧ್ಯಯನಗಳು ಹೆಚ್ಚು ವ್ಯವಸ್ಥಿತವಾಗಿ ನಡೆದಿರುವಂತೆ ತೋರುತ್ತದೆ.

ನೋಮ್ ಚಾಮ್‌ಸ್ಕಿ (1928–) ಇಪ್ಪತ್ತನೆಯ ಶತಮಾನದ ಮಹಾನ್ ಚಿಂತಕ. ಹಲವು ವಲಯಗಳ ಚಿಂತನಾ ಕ್ರಮದ ದಿಕ್ಕನ್ನು ಬದಲಿಸಿದ ವಿಚಾರಗಳನ್ನು ಮಂಡಿಸಿದವರೆಂದು ಗುರುತಿಸಲಾಗುತ್ತದೆ. ಬಹುಕಾಲ ಮಸಾಚುಸೆಟ್ಸ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯಲ್ಲಿ ಪ್ರಾಧ್ಯಾಪಕರಾಗಿದ್ದರು. ಈಗ ಅರಿಜೋನಾದ ವಿಶ್ವವಿದ್ಯಾಲಯದಲ್ಲಿ ಪ್ರಾಧ್ಯಾಪಕರಾಗಿದ್ದಾರೆ. ನುಡಿಯರಿಮೆ ಮಾತ್ರವಲ್ಲದೆ ಸಮಾಜ, ರಾಜಕಾರಣ, ಅರ್ಥಶಾಸ್ತ್ರ ಮುಂತಾದ ವಲಯಗಳಲ್ಲಿ ತನ್ನ ವಿಶಿಷ್ಟ ಚಿಂತನೆಗಳನ್ನು ಮಂಡಿಸಿದವರು. ತನ್ನನ್ನು ಅನಾರ್ಕಿಸ್ಟ್ ಎಂದು ಕರೆದುಕೊಳ್ಳುತ್ತಾರೆ. ಎಲ್ಲ ಅಧಿಕಾರಕೇಂದ್ರಗಳನ್ನೂ ಸದಾ ಪ್ರಶ್ನಿಸುತ್ತಲೇ ಇರಬೇಕೆಂಬ ನಿಲುವಿನವರು.

ಲೆವ್ ವ್ಯಗೋತ್‌ಸ್ಕಿ (1836–1934) ಸೋವಿಯತ್ ರಶಿಯಾದಲ್ಲಿದ್ದ ಮನೋವಿಜ್ಞಾನಿ. ಮಾರ್ಕ್ಸ್‌ವಾದವನ್ನು ಮನೋವಿಜ್ಞಾನಕ್ಕೆ ಅನ್ವಯಿಸಿ ಹೊಸದೊಂದು ಸಿದ್ಧಾಂತವನ್ನು ಪ್ರತಿಪಾದಿಸಲು ಹೊರಟಿದ್ದಾತ. ಈ ಸಿದ್ಧಾಂತವನ್ನು ಪೂರ್ಣರೂಪದಲ್ಲಿ ಆತ ಮಂಡಿಸಲಾಗಲಿಲ್ಲ. ಕಮ್ಯೂನಿಸ್ಟ್ ಕ್ರಾಂತಿಯ ಅಂತಿಮಹಂತದಲ್ಲಿ ಮೈದಳೆಯಲಿರುವ ಅತಿಮಾನವನ ಚಹರೆಗಳನ್ನು ವಿವರಿಸಲು ಬೇಕಾದ ಪರಿಕರಗಳನ್ನು ಹುಡುಕುತ್ತಿದ್ದನು. ಈತನ ಚಿಂತನೆಗಳು ಸಾಮಾಜಿಕ ಮನೋವಿಜ್ಞಾನದ ಬೆಳವಣಿಗೆಯಲ್ಲಿ ಮಹತ್ವದ ಕೊಡುಗೆಗಳನ್ನು ಕೊಟ್ಟಿವೆ ಎಂದು ಅಧ್ಯಯನಕಾರರು ಹೇಳುತ್ತಾರೆ.

ಜಾನ್ ಪಿಯಾಜೆ (1896–1980), ಸ್ವೀಡನ್ ದೇಶದ ಮನೋವಿಜ್ಞಾನಿ. ಮಾನವರ ಅರಿವಿನ ವಿಕಾಸವನ್ನು ಕುರಿತಂತೆ ಮೂಲಭೂತವಾದ ಚಿಂತನೆಗಳನ್ನು ಮಂಡಿಸಿದನು. ಕಲಿಕೆಯ ಹಂತಗಳನ್ನು ನಿರ್ಧರಿಸುವ ಆತನ ವಿಚಾರಗಳು ಶೈಕ್ಷಣಿಕ ಮನೋವಿಜ್ಞಾನದಲ್ಲಿ ತುಂಬಾ ಪ್ರಭಾವವನ್ನು ಬೀರಿವೆ.

○

ಅಹರ್ನಿಶಿ
ಪುಸ್ತಕಗಳು

1. **ನುಡಿಗಳ ಅಳಿವು** (ಬೇರೆ ದಿಕ್ಕಿನ ನೋಟ)
   – ಕೆ.ವಿ ನಾರಾಯಣ, ಬೆಲೆ: ರೂ. 100/–
2. **ಮೈದಾನ** (ಕಾದಂಬರಿ)
   – ಮೂಲ: ಚಲಂ, ಅನುವಾದ : ರಮೇಶ್ ಅರೋಲಿ, ಬೆಲೆ: ರೂ.100/–
3. **ಚಂಸು ಪಾಟೀಲರ ಬೇಸಾಯದ ಕತಿ** (ಲೇಖನಗಳು)
   – ಚಂಸು ಪಾಟೀಲ, ಬೆಲೆ: ರೂ.130/–
4. **ಒಳಗಿನ ಬಿಕ್ಕಟ್ಟು** (ಭಾರತದ ಜ್ಞಾನ ಮತ್ತು ಶಿಕ್ಷಣದ ಕುರಿತು ಚಿಂತನೆ)
   – ಮೂಲ: ಜಿ.ಎನ್. ದೇವಿ, ಅನು: ಕೆ.ಪಿ. ಸುರೇಶ, ಬೆಲೆ: ರೂ.100/–
5. **ಪತ್ನಿಯರು ಕಂಡಂತೆ ಪ್ರಸಿದ್ಧರು** (ವಿಶೇಷ ವ್ಯಕ್ತಿ ಚಿತ್ರಗಳು)
   – ಬಿ.ಎಸ್. ವೆಂಕಟಲಕ್ಷ್ಮಿ, ಬೆಲೆ: ರೂ.300/–
6. **ಸ್ತ್ರೀವಾದ–ಒಂದು ಅವಲೋಕನ** (ವಿಮರ್ಶೆ)
   – ಬಿ.ಎನ್. ಸುಮಿತ್ರಾ ಬಾಯಿ, ಬೆಲೆ: ರೂ.150/–
7. **ಚಮ್ಮಟಿಗೆ** (ಅಂಬೇಡ್ಕರ್‌ವಾದಿಯೊಬ್ಬನ ಕಣ್ಣೋಟ–ಲೇಖನಗಳು)
   – ವಿಕಾಸ್ ಆರ್. ಮೌರ್ಯ, ಬೆಲೆ: ರೂ.180/–
8. **ಚಾಮ್‌ಸ್ಕಿ ಜೊತೆಗೆ ಎರಡು ಹೆಜ್ಜೆ** (ನುಡಿಯನ್ನು ಕುರಿತ ಕೆಲವು ವಿಚಾರಗಳು)
   – ಕೆ.ವಿ. ನಾರಾಯಣ, ಬೆಲೆ: ರೂ.130/–

8\. **ಬಾಗಿಲ ಮಾತು** (ಮುಮ್ಮಾತು–ಹಿಮ್ಮಾತು ಬರಹಗಳು)
   – ಡಾ. ರಹಮತ್ ತರಿಕೆರೆ, ಬೆಲೆ: ರೂ.250/–

10. **ದೇವರ ದಾರಿ** (ಕಥಾಸಂಕಲನ)
   – ಡಾ. ಮೊಗಳ್ಳಿ ಗಣೇಶ್, ಬೆಲೆ: ರೂ.240/–
11. **ಗೌರಿ ಹೂವು** (ಗೌರಿ ಲಂಕೇಶ್‌ರ ಬದುಕು ಬರಹ)
   – ಚಂದನ್ ಗೌಡ–ಕುಮಾರ್ ಬುರಡಿಕಟ್ಟಿ, ಬೆಲೆ: ರೂ.290/–

12. ಬಣ್ಣವೊರೆಸುವ ಎಣ್ಣೆಗನ್ನಡಿ (ಪ್ರಬಂಧಗಳು)
 – ಪ್ರಜ್ಞಾ ಮತ್ತಿಹಳ್ಳಿ, ಬೆಲೆ: ರೂ.90/–
13. ಕಾಲದ ರಶೀದಿ ಪುಟ (ಕವಿತೆ)
 – ಮಧು ಬಿರಾದರ್, ಬೆಲೆ: ರೂ.80/–
14. ದೀಪದುಳುವಿನ ಕಾತರ (ಕವಿತೆ)
 – ಮಂಜುಳಾ ಹುಲಿಕುಂಟೆ ಬೆಲೆ: ರೂ.65/–
15. ಕೃಷ್ಣಮುದ್ರಿಕೆ (ಕಾದಂಬರಿ)
 – ಮಂಗಳಾ ಸಿ., ಬೆಲೆ: ರೂ.310/–
16. ಇದು ಯಾವ ಸೀಮೆಯ ಚರಿತ್ರೆ? (ಲೇಖನಗಳ ಅನುವಾದ)
 – ಮೂಲ: ಅಜಿತ್ ಪಿಳ್ಳೈ ಅನು: ಸತೀಶ್ ಜಿ. ಟಿ., ಬೆಲೆ: ರೂ.270/–
17. ತುದಿ ಮಡಚಿಟ್ಟ ಪುಟ (ಕಥಾ ಸಂಕಲನ)
 – ಸುನಂದಾ ಕಡಮೆ, ಬೆಲೆ: ರೂ.150/–
18. ನಾಳೀನ ಚಿಂತ್ಯಾಕ (ಕಲಾವಿದೆ ಶಾಂತಾ ಹುಬಳೀಕರ್ ಆತ್ಮಚರಿತ್ರೆ)
 – ಅನು.: ಕೆ.ಎಸ್. ಕುಲಕರ್ಣಿ, ಬೆಲೆ: ರೂ.125/–
19. ಸ್ವರ್ಗದ ಹಾದಿಯಲ್ಲಿ (ವೈಚಾರಿಕ ಬರಹಗಳು)
 – ಇರ್ಷಾದ್ ಉಪ್ಪಿನಂಗಡಿ, ಬೆಲೆ: ರೂ.70/–
20. ನಾನು ನೀವು ಮತ್ತು.... (ಅಂಕಣ ಬರಹ)
 – ದೀಪಾ ಹಿರೇಗುತ್ತಿ, ಬೆಲೆ: ರೂ.170/–
21. ಬಿಸಿಲು ಬಯಲು ನೆಳಲು (ಹೊಸ ಅಲೆ ಸಿನಿಮಾ ಕುರಿತ ಕಥನ)
 – ಬಿ. ಶ್ರೀಪಾದ್ ಭಟ್, ಬೆಲೆ: ರೂ.150/–
22. ಸ್ವರ್ಗಕ್ಕೆ ಮೂರೇ ಮೈಲಿ (ಅನುವಾದ ಲೇಖನಗಳು)
 – ಮೂಲ: ಜೆರೆಮಿ ಸೀ ಬ್ರೂಕ್ಸ್ ಅನು.: ಸುಗತ ಶ್ರೀನಿವಾಸರಾಜು ಮತ್ತು ರೋಸಿ ಡಿಸೋಜಾ, ಬೆಲೆ: ರೂ.200/–
23. ಪಾರಿಜಾತದ ಬೆಕ್ಕೆಳಿಕೆ (ಪ್ರಬಂಧಗಳು)
 – ಉಷಾ ಕಟ್ಟೇಮನೆ, ಬೆಲೆ: ರೂ.110/–
24. ನಮ್ಮ ಶಾಮಣ್ಣ (ಕಡಿದಾಳು ಶಾಮಣ್ಣ ಗೌರವ ಗ್ರಂಥ)
 – ಸಂ.: ಡಿ.ಎಸ್. ನಾಗಭೂಷಣ, ಎಂ.ಬಿ. ನಟರಾಜ್, ಬಿ. ಚಂದ್ರೇಗೌಡ, ಬೆಲೆ: ರೂ.375/–

25. **ಯೋಲ್ಡೀನ್ ಕೇಳಿ** (ಅಂಕಣ ಬರಹ)
– ಕುಸುಮಬಾಲೆ, ಬೆಲೆ: ರೂ.165/–
26. **ಮತ್ತೆ ಮತ್ತೆ ಮಾಸ್ತಿ** (ವಿಮರ್ಶೆ)
– ಟಿ.ಪಿ. ಅಶೋಕ್, ಬೆಲೆ: ರೂ.130/–
27. **ನೀರ ಮೇಲಣ ಚಿತ್ರ** (ಕವಿತೆಗಳು)
– ಅಕ್ಷತಾ ಹುಂಚದಕಟ್ಟೆ, ಬೆಲೆ: ರೂ.65/–
28. **ಜೋಗತಿ ಜೋಳಿಗೆ** (ಕಥೆಗಳು)
– ಅನುಪಮಾ ಪ್ರಸಾದ್, ಬೆಲೆ: ರೂ.120/–
29. **ಬೂದಿಯಾಗದ ಕೆಂಡ** (ಲೇಖನಗಳು)
– ವಿಜಯಕುಮಾರ್ ಸಿಗರನಹಳ್ಳಿ, ಬೆಲೆ: ರೂ.70/–
30. **ಸ್ತ್ರೀ ದರ್ಪಣದಲ್ಲಿ ನಾಟ್ಯಶಾಸ್ತ್ರ** (ವಿಮರ್ಶಾ ಕೃತಿ)
– ಬಿ.ಎನ್. ಸುಮಿತ್ರಾಬಾಯಿ, ಬೆಲೆ: ರೂ. 200/–
31. **ವಿಮೋಚಕಿಯ ಕನಸುಗಳು** (ಸಾವಿತ್ರಿಬಾಯಿ ಫುಲೆ ಬದುಕು–ಹೋರಾಟ)
– ಬ್ರಜ್ ರಂಜನ್ ಮಣಿ, ಪಮೇಲಾ ಅನು.: ಶ್ರೀಪಾದ ಭಟ್, ಬೆಲೆ: ರೂ.80/
32. **ಹುದುಗಲಾರದ ದುಃಖ** (ಪ್ರಸಿದ್ಧ ಕೃತಿ 'ಎ ಗ್ರೀಫ್ ಟು ಬರಿ' ಯ ಅನುವಾದ)
– ವಸಂತ ಕಣ್ಣಭಿರಾನ್ ಅನುವಾದ ಸಂಯೋಜಕಿ: ಎಂ.ಎಸ್. ಆಶಾದೇವಿ, ಬೆಲೆ: ರೂ.310/–
33. **ಅಮೃತ ನೆನಪುಗಳು** (ಇಮ್ರೋಜ್ ನೆನೆದಂತೆ ಅಮೃತಾ ಪ್ರೀತಂ)
– ರೇಣುಕಾ ನಿಡಗುಂದಿ, ಬೆಲೆ: ರೂ.80/–
34. **ರೆಕ್ಕೆ ಹಾವು** (ಕಥೆಗಳು)
– ಟಿ.ಕೆ. ದಯಾನಂದ್, ಬೆಲೆ: ರೂ.100/–
35. **ಉರಿ** (ಕಥೆಗಳು)
– ವಿನಯಾ, ಬೆಲೆ: ರೂ.90/–
36. **ನಿಸರ್ಗ ಮತ್ತು ಗುಬ್ಬಚ್ಚಿ** (ಮಕ್ಕಳ ಕಥೆಗಳು)
– ಬೇಲೂರು ರಘುನಂದನ್, ಬೆಲೆ: ರೂ.60/–
37. **ಬೆತ್ತಲೆಯ ಬೆಳಕನುಟ್ಟು** (ಕಥೆಗಳು)
– ಜಿ.ಪಿ. ಬಸವರಾಜು, ಬೆಲೆ: ರೂ.130/–
38. **ಜಾಲಾರ ಹೂವು** (ಪ್ರಬಂಧಗಳು)
– ಜಿ.ವಿ. ಆನಂದಮೂರ್ತಿ, ಬೆಲೆ: ರೂ.85/–

39. ದಿಲ್ಲಿ ಡೈರಿಯ ಪುಟಗಳು (ಅಂಕಣಬರಹ)
– ರೇಣುಕಾ ನಿಡಗುಂದಿ, ಬೆಲೆ: ರೂ.140/–

40. ಸಾಸಿವೆ ತಂದವಳು (ಕ್ಯಾನ್ಸರ್ ಜತೆಗಿನ ಹೋರಾಟದ ಕಥನ)
– ಭಾರತಿ ಬಿ.?ವಿ., ಬೆಲೆ: ರೂ.110/–

41. ಹನ್ನೊಂದನೇ ಇಂದ್ರಿಯ (ಪ್ರಬಂಧ ಸಂಕಲನ)
– ಕೆ. ಸತ್ಯನಾರಾಯಣ, ಬೆಲೆ: ರೂ.150/–

42. ದಲಿತಬ್ರಾಹ್ಮಣ (ಕಥಾ ಸಂಕಲನ)
– ಶರಣಕುಮಾರ ಲಿಂಬಾಳೆ/ಪ್ರಮೀಳಾ ಮಾಧವ್, ಬೆಲೆ: ರೂ.150/–

43. ಅಸಮಾನತೆಯ ಬಣ್ಣಗಳು (ಅಂಕಣ ಬರಹ)
– ಹರ್ಷ ಮಂದರ್ (ಸಂ. ಜಿ. ರಾಜಶೇಖರ/ಕೆ. ಫಣಿರಾಜ), ಬೆಲೆ: ರೂ.160/

44. ಧ್ಯಾನಕೆ ತಾರೀಖಿನ ಹಂಗಿಲ್ಲ (ಕವಿತೆಗಳು)
– ಕಾವ್ಯಾ ಕಡಮೆ, ಬೆಲೆ: ರೂ.70/–

45. ಬೆಂಕಿ ಬೆಡಗು (ನಟ ಉಮಾಶ್ರೀ ಬದುಕಿನ ಕೆಲ ಪುಟಗಳು)
– ನಿರೂಪಣೆ: ಬಿ. ಗಣಪತಿ ಬೆಲೆ: ರೂ.100/– *

46. ಕಥೆ ಹೇಳುವೆ (ವಿವಿಧ ಲೇಖಕಿಯರ ಕಥೆಗಳು)
– ಅನು.: ಸುಕನ್ಯಾ ಕನಾರಳ್ಳಿ, ಬೆಲೆ: ರೂ.160/–

47. ಮಾತು ಮಂತ್ರವಾಗುವವರೆಗೆ (ಕವಿತೆಗಳು)
–ಎಚ್.ಎಸ್. ಶಿವಪ್ರಕಾಶ್ ಬೆಲೆ: ರೂ.80/–

48. ಮರೆತುಹೋದ ದೊಂಬರಾಕೆ (ಅನುವಾದಿತ ಕವಿತೆಗಳು)
– ಜಿಂಗೋನಿಯಾ ಜಿಂಗೋನೆ /ಎಚ್.ಎಸ್. ಶಿವಪ್ರಕಾಶ್, ಬೆಲೆ: ರೂ.75/

49. ರಸ್ತೆ ನಕ್ಷತ್ರ (ಬೀದಿ ಬದುಕಿನ ಕಥನಗಳು)
– ಟಿ.ಕೆ. ದಯಾನಂದ, ಬೆಲೆ: ರೂ.120/–

50. ಅನುದಿನದ ಅಂತರಗಂಗೆ (ಆತ್ಮಕಥನ)
– ಪ್ರತಿಭಾ ನಂದಕುಮಾರ್, ಬೆಲೆ: ರೂ.240/–

51. ಅಂಗೈಯಲ್ಲೇ ಆಕಾಶ (ಸಣ್ಣ ಕಥೆಗಳು)
– ಬಿ.ಎಂ. ಬಷೀರ್, ಬೆಲೆ: ರೂ.75/– *

52. ಗಾಂಧಿ ಬಂದ (ಕಾದಂಬರಿ)
– ಎಚ್. ನಾಗವೇಣಿ, ಬೆಲೆ: ರೂ.260/–

53. ಮತ್ತೆ ಮತ್ತೆ ಲೋಹಿಯಾ (ಲೇಖನಗಳು)
– ಡಾ. ರಾಜಾರಾಮ ತೋಳ್ಪಾಡಿ, ಬೆಲೆ: ರೂ.75/– *

54. ನಡುವೆ ಸುಳಿವ ಆತ್ಮ (ಸ್ತ್ರೀ ಸಂಕಥನದ ಚಹರೆಗಳು)
– ಎಂ.ಎಸ್. ಆಶಾದೇವಿ, ಬೆಲೆ: ರೂ.105/–

55. ಚಳಿಗಾಲದ ಎಲೆ ಸಾಲು (ಕವಿತೆಗಳು)
– ಕುಮಾರ್ ಎಸ್., ಬೆಲೆ: ರೂ.60/–

56. ಅನಂತಮೂರ್ತಿ ಮಾತುಕತೆ ಹತ್ತು ಸಮಸ್ತರ ಜೊತೆ (ಸಂದರ್ಶನಗಳು)
– ಸಂ: ಪಟ್ಟಾಭಿರಾಮ ಸೋಮಯಾಜಿ, ಬೆಲೆ: ರೂ.125/–

57. ಹುಚ್ಚುತನವೇ ಅನುಗ್ರಹ–ನೀಷೆ (ಅನುವಾದ)
– ಟಿ.ಎನ್. ವಾಸುದೇವಮೂರ್ತಿ, ಬೆಲೆ: ರೂ.85/– *

58. ಮತ್ತೆ ಮತ್ತೆ ಬೇಂದ್ರೆ (ಬೇಂದ್ರೆ ಕಾವ್ಯ ಕುರಿತ ಉಪನ್ಯಾಸಗಳು)
– ಕಿ.ರಂ. ನಾಗರಾಜ/ಸಂ.: ಅಕ್ಷತಾ ಕೆ., ಬೆಲೆ: ರೂ.100/–

59. ಅವ್ವನ ಅಂಗನವಾಡಿ (ಕವನ ಸಂಕಲನ)
– ಅರುಣ್ ಜೋಳದ ಕೂಡ್ಲಗಿ, ಬೆಲೆ: ರೂ.60/–

60. ಆ ದಶಕ (80ರ ದಶಕದ ಬರಹ ಮತ್ತು ಪತ್ರಗಳು)
– ಕಡಿದಾಳು ಶಾಮಣ್ಣ, ಬೆಲೆ: ರೂ.95/–

61. ಮತ್ತೆ ಮತ್ತೆ ಬ್ರೆಕ್ಟ್ (ಬರ್ಟೋಲ್ಟ್ ಬ್ರೆಕ್ಟ್‌ನ ಕವನಗಳ ಅನುವಾದ)
– ಯು.ಆರ್. ಅನಂತಮೂರ್ತಿ, ಬೆಲೆ: ರೂ.100/–

62. ಮತ್ತೆ ಮತ್ತೆ ಪಂಪ (ವಿಮರ್ಶೆ)
– ಜಿ.ಎಚ್. ನಾಯಕ್, ಬೆಲೆ: ರೂ.50/– *

63. ರೆಕ್ಕೆ ಬಿಚ್ಚಿ ಆಕಾಶ ನೆಚ್ಚಿ (ಕವಿತೆ)
– ಅಕ್ಷತಾ ಕೆ., ಬೆಲೆ: ರೂ.45/– *

* ಪ್ರತಿಗಳು ಲಭ್ಯವಿಲ್ಲ.

ವಿಳಾಸ : ಅಹರ್ನಿಶಿ ಪ್ರಕಾಶನ, ಜ್ಞಾನವಿಹಾರ ಬಡಾವಣೆ,
ಕಂಟ್ರಿಕ್ಲಬ್ ಹತ್ತಿರ, ವಿದ್ಯಾನಗರ, ಶಿವಮೊಗ್ಗ–577203.
ಮೊಬೈಲ್: 9449174662, 9448628511

ನುಡಿಗಳು ಅಳಿಯುವುದು ಎಂದರೇನು? ಏಕೆ ಅವು ಅಳಿಯುತ್ತವೆ? ಹಾಗೆ ಅವು ಅಳಿದಾಗ ಏನಾಗುತ್ತದೆ? ಹೀಗೆ ನುಡಿಗಳು ಅಳಿಯುವುದನ್ನು ನೋಡುತ್ತಾ ಸುಮ್ಮನೆ ಕೂರಬೇಕೆ? ನುಡಿಗಳನ್ನು ಕಾಪಿಡುವ ಹೊಣೆ ಯಾರದು? ಇವೇ ಮುಂತಾದ ಪ್ರಶ್ನೆಗಳು ಈಗ ಚರ್ಚೆಗೆ ಬರುತ್ತಿವೆ. ನುಡಿಯರಿಗರು, ಜನಸ್ನೇಹಿ ಸಂಘಟನೆಗಳು ಲೋಕದ ನುಡಿಗಳನ್ನು ಕಾಪಿಡುವ ಕಾರ್ಯಯೋಜನೆಗಳನ್ನು ರೂಪಿಸುತ್ತಿದ್ದಾರೆ. ಈ ಬಗೆಗೆ ಜನರ ಗಮನ ಸೆಳೆಯುವ ಕೆಲಸವನ್ನು ಜನಪ್ರಿಯ ಮಾಧ್ಯಮಗಳು ಮಾಡುತ್ತಿವೆ. ಈ ಎಲ್ಲ ಪ್ರಯತ್ನಗಳನ್ನು, ಅವುಗಳ ಹಿಂದಿರುವ ತಾತ್ವಿಕತೆಯನ್ನು ಮರು ಪರಿಶೀಲನೆಗೆ ಗುರಿಪಡಿಸುವ ಅಗತ್ಯವಿದೆ. ನುಡಿಗಳ ಅಳಿವಿನಿಂದ ಉಂಟಾಗುವ ಪರಿಣಾಮಗಳನ್ನು ವಿವರಿಸುತ್ತಿರುವ ನೆಲೆಗಳನ್ನು ಬೇರೆ ದಿಕ್ಕಿನಿಂದ ನೋಡುವುದು; ನುಡಿಗಳನ್ನು ಕಾಪಿಡಲು ಯೋಜಿಸಿದ ಕಾರ್ಯಕ್ರಮಗಳು ಜನ ಮತ್ತು ನುಡಿಯನ್ನು ಬೇರೆ ಬೇರೆಯಾಗಿ ಇರಿಸುತ್ತಿರುವುದನ್ನು ಗುರುತಿಸುವುದು ಈ ಬರಹದ ಗುರಿ. ನುಡಿಗಳನ್ನು ಉಳಿಸುವ ಯತ್ನ ಒಂದು ಕಡೆ, ಆ ನುಡಿಗಳನ್ನು ಆಡುವ ಸಮುದಾಯಗಳ ನೆಲೆಗಳನ್ನು ಅಭಿವೃದ್ಧಿಯ ಹೆಸರಿನಲ್ಲಿ ಕಿತ್ತೊಗೆಯುವುದು ಇನ್ನೊಂದು ಕಡೆ ನಡೆಯುತ್ತಿದೆ. ನುಡಿಗಳಲ್ಲಿ ಸಮುದಾಯಗಳ ತಿಳಿವು ಅಡಕವಾಗಿರುತ್ತದೆ ಎಂದು ಹೇಳುತ್ತಲೇ ಆ ತಿಳಿವು ಕ್ರಿಯಾಶೀಲವಾಗದಂತೆ ಮಾಡುವುದು ನಡೆಯುತ್ತಲೇ ಇದೆ. ಈ ಎಲ್ಲ ವಿಪರ್ಯಾಸಗಳನ್ನು ಗುರುತಿಸಿ ಚರ್ಚಿಸುವ ಉದ್ದೇಶ ಈ ಬರಹಕ್ಕಿದೆ.

ISBN 978-93-84501-24-2

9 789384 501242

ಅಹರ್ನಿಶಿ